ಕರ್ನಾಟಕ ಸರ್ಕಾರ

ಅನುಭವಧಾರೆ

ಅರೆಭಾಷೆ ಕವನ ಸಂಕಲನ

ಹೊದ್ದೇಟಿ ಭವಾನಿಶಂಕರ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

ಅನುಭವಧಾರೆ

ಅರೆಭಾಷೆ ಕವನ ಸಂಕಲನ

ಹೊದ್ದೆಟ್ಟಿ ಭವಾನಿಶಂಕರ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

'ANUBHAVA DHARE' a collection of poems in Arebhase language written by Hoddetti Bhavani Shankar, Bangalore, Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2017**

ಪ್ರತಿಗಳು : **500**

ಬೆಲೆ : ರೂ. 70/- Price : Rs. 70/-

ಪುಟಗಳು : viii + 90

ಸಲಹಾ ಸಮಿತಿ :
ಶ್ರೀ ಕೊಲ್ಯದ ಗಿರೀಶ್
ಶ್ರೀ ಬಾಕಿಲ ಸಿ. ವಸಂತ
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀಮತಿ ಸಂಗೀತ ರವಿರಾಜ್
ಶ್ರೀ ಕುಡೆಕಲ್ ಸಂತೋಷ್

ಪ್ರಕಾಶಕರು : ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272-223055

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

ಅಧ್ಯಕ್ಷರ ಮಾತ್

ಪ್ರಪಂಚಲಿ ಅಳಿವಿನ ಅಂಚಿಲಿ ಇರ್‍ವಂತ ಬಾಸೆಲಿ ಅರೆಬಾಸೆ ಕೂಡ ಒಂದು, ಬಾಸೆನ ಬೆಳ್ಸುವ ನಿಟ್ಟ್‌ಲಿ ಸರ್ಕಾರ ಅರೆಭಾಷೆ ಅಕಾಡೆಮಿ ಶುರು ಮಾಡ್ಸೊ, ಬಾಸೆ ಬೆಳ್ಸ್‌ವಲ್ಲಿ ಪುಸ್ತಕಗಳ ಪಾತ್ರ ಬಾಳ ಮುಖ್ಯಾಂತ ಅನ್ಸಿದೆ.

ಅರೆಬಾಸೆಲಿ ನೂರಾರ್ ವರ್ಷದ ಇತಿಹಾಸ ಇದ್ದ್ ಪುಸ್ತಕ ಪ್ರಕಟಣೆಗ ಆದ್ ಬಾಳಕಮ್ಮಿ, **"ಅನುಭವಧಾರೆ"** ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಪಡ್ಕಂಡ ಹೊದ್ದೆಟ್ಟಿ ಭವಾನಿಶಂಕರ್ ಅವರ ಕವನ ಸಂಕಲನ.

ಕವಿಗ ಸಾಹಿತಿಗ ಆದ ಶ್ರೀ ಹೊದ್ದೆಟ್ಟಿ ಭವಾನಿಶಂಕರ್ ಹವ್ಯಾಸಿ ಬರಹಗಾರರ್, ಸಾಮಾಜಿಕ ಕಳಕಳಿ ಇರ್‍ವ ಇವು ನಿಜ ಜೀವನಲಿ ನಡಿವಂತ ಘಟನೆಗಳ ಸುತ್ತ ಕವನ ಬರ್‍ದವೆ. ಇವು ಬರ್‍ದ ಸುಮಾರ್ 100ಕ್ಕೂ ಹೆಚ್ಚ್ ಕವನಗಳ್‌ಂದ ಆಯ್ದ 50 ಕವನಗ ಇಲ್ಲಿ ಪ್ರಕಟ ಆಗಿಟ್ಟು. ಇದರ್‍ಲಿ ಅಂದ್-ಇಂದ್ ಕವನಲಿ ಅಂದ್‌ನ ಜನ ವಿದ್ಯಾಭ್ಯಾಸ ಕಮ್ಮಿ ಇದ್ದರೂ ನ್ಯಾಯವಾಗಿ ವ್ಯವಸಾಯ ಮಾಡಿ ಪರಿಸರದ ಬಗ್ಗೆ ಕಾಳಜಿ ವಹ್ಸಿ ಅರೋಗ್ಯವಾಗಿ ಜೀವನ ನಡ್ಸ್‌ತ್ತಿದ್ದೊ, ಆದ್ರೆ ಇಂದ್ ಬದಲಾದ ಕಾಲಘಟ್ಟಲಿ ಹೆಚ್ಚಿನ ಜನ್ರ್ ಆಧುನಿಕತೆಗೆ ಮಾರು ಹೋಗಿ ಮೋಸ ದುರಾಸೆಲಿ ಬದ್ಕ್ ಕಳ್ದವೆಂತ ಮಾರ್ಮಿಕವಾಗಿ ತಿಳ್ಸಿಯೊಳೊ.

"ಅನುಭವ ಧಾರೆ" ಕವನ ಬರ್‍ದ ಲೇಖಕರಿಗೂ ಅಕಾಡೆಮಿ ಪುಸ್ತಕ ಸಲಹೆ ಸಮಿತಿಯ ಎಲ್ಲಾ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆ ತಿಳ್ಸ್‌ತಾವೊಳೆ.

ಕೊಲ್ಯದ ಗಿರೀಶ್
ಅಧ್ಯಕ್ಷರ್

'ಬರ್ದವನ ಮಾತ್'

ಮೊನುಷ ಜೀವನಲಿ ಮಾಡ್ದ ಸಾಧನೆಗ ಮತ್ತೆ ಕೊಟ್ಟಂತ ಕೊಡುಗೆಗ ನೊಂದ ಜೀವಿಗಳಿಗೆ ಯಾವ ರೀತಿಲಿ ಮಾರ್ಗದರ್ಶನ ಆಗಿ ಜೀವನದ ಒಳಗೆನ, ಹೊರಗೆನ ಬೊದ್‌ಕ್‌ಲಿ ಬಾವಂತ ಘಟನೆಗಳ ಎಲ್ಲ ಸವಿಸ್ತಾರ ಮಾಡಿ ಸರಳ ಭಾಷೆಲಿ ಅರ್ಥ ಮಾಡಿಕಂಡ್ ನಡ್‌ಸಿಕೊಂಡ್ ಹೋವ ಮಾರ್ಗನೆ ಈ ಪುಸ್ತಕಲಿ ಇರುವ ಪದ್ಯಗಳ ಒಡಂಬಡಿಕೆನ ಸಾರ.

ಹುಟ್ಟ್‌ಂದಳೆ ನಾವು ಮನೆಲಿ ಅರೆಕನ್ನಡನನೆ ಮಾತಾಡಿಕಂದ್ ಬಂದೊಳೊ. ಮಾತಾಡ್ದು ಮಾತ್ರ ಅರೆ ಕನ್ನಡಲೆ ಹೊರ್‌ತ್ ಏನೆ ಬರಿದಿದ್ದರೂ ಅದ್ ಮಾತ್ರ ಕನ್ನಡಲೆ. ಯಾಕೆಂತೇಳಿರೆ ಅರೆಕನ್ನಡಲೆ ಬರ್ದ್ ನಾವುಗೆ ತೋರ್ಸಿದವ ಯಾರೂ ಇತ್ತ್‌ಲೆ. ಅಲ್ಲದೆ ಅರೆಕನ್ನಡಲಿ ಯಾದಾರ್ ಪದ್ಯಗ ಆಗಲಿ ಕಥೆನ ಇದುವರೆಗೆ ತೇಳಿರೆ ಸುಮಾರ್ 1965ರ ವರೆಗೆನೂ ಯಾವೊಬ್ಬ ಗೌಡನು ಬರಿಯದಂತ ವಿಷಯಂತ ನೀವುಗೆನು ನಾವ್‌ಗೆಲ್ಲವುಕೂ ಗೊತ್ತುಟು.

ಕೆಲವು ಜನಕೆ ಅರೆಕನ್ನಡ ನಮ್ಮನೆ ಕನ್ನಡ, ಮಾತ್. ಆದರೆನೂ ಅವರ ಜೊತೆ ಯಾರಾರ್ ದೊಡ್ಡ ಮೊನುಷ್ಯಂಗ ಇದ್ದರೆ ಇಂದುನೂ ಕೆಲವು ಜನಂಗ ಮಾತಾಡಿಕೆ ನಾಚಿಕೆ ಮಾಡಿವೆ. ಅಂತವುಕೆ ಇನ್ನು ನಮ್ಮ ಮಾತ್‌ನಮ್ಮ ಮನೆ, ನಮ್ಮ ಜನಂತೇಳುವ ಅಭಿಮಾನ ಸುರಾತ್‌ಲೆ. ಈ ಭಾಷೆ ಬೇರೆವುಕೆ ಮಾತಾಡಿಕೆ ಆಗದಿದ್ದರೂ ಅರ್ಥ ಆದೆ. ಆದರೆ ನಮ್ಮ ಹೆರಾಜೆಲಿ ಎಲ್ಲಾ ಜಾತ್ಯವು ಅರೆಕನ್ನಡ ಮಾತಾಡಿವೆ.

ಈ ಅರೆ ಕನ್ನಡ ನಂಗೆ ಗೊತ್ತಿದ್ದಾಂಗೆ, ನಮ್ಮ ತಾತಾ ಮುತ್ತಾತನ ಕಾಲಂದಳೂ ಈ ಅರೆಕನ್ನಡ ಮಾತಾಡಿಕಂಡ್ ಬಂದೊಳೊ. ನಮ್ಮ ಅಪ್ಪಪ್ಪ ನಾವುಗೆ ಕಲ್ಸಿದೆ. ಅರೆಕನ್ನಡ. ಈ ಭಾಷೆ ಎಂದಿಗೂ ಇದ್ ಎಲ್ಲೂ ನಿಲ್ಲದೆ ಮುಂದೆಗೆ ಹರಿಯುವ ಭಾಷೆ.

ನಾನ್ ಸುಮಾರ್ ಪದ್ಯಗಳೆಲ್ಲ ಸಾಧಾರಣ 1964ನೆ ಇಸವಿವರೆಗೆ ಕನ್ನಡಲೇ ಪದ್ಯಗಳ ಬರಿತಿದ್ದೆ. ಈಗ ಬಂದ್ ಬುಟ್ಟಳೆತೇಳುದುಲೆ. ಒಮ್ಮೆ ಬೆಂಗಳೂರ್‌ಲಿ ಲಾಯರಾಗಿದ್ದ ದಿವಂಗತ ಪೂಜಾರಿ ಮೊಣ್ಣಪಣ್ಣ ನನ್ನ ಕನ್ನಡದ ಪದ್ಯಗಳೆಲ್ಲ ಓದಿ ಅಣ್ಣ! ಇನ್ನ್‌ಮೇಲೆ ಅರೆಭಾಷೆಲಿ ಬರೆಕೆ ಸುರ್ ಮಾಡೊಕುಂತ ಒತ್ತಾಯ ಮಾಡಿ ನನ್ನಂದ ಒಂದೊಂದೆ ಪದ್ಯಗ ಹೊರಗೆ ಬಾಕ್ ಶುರಾತ್. ನಾನ್ ಅರೆ ಭಾಷೆಲಿ ಬರೆಕೆ ಆದುಲೆತೇಳಿರೂ ಬರ್ಸಿದೊ. ಮತ್ತೆ ಹೇಳ್ದೊ 'ಅಣ್ಣಾ ನೀವುಗೆ ಈಗ ಗೊತ್ತ್‌ಲ್ಲೆ. ನೀವು ಈಗ ಅರೆಭಾಷೆಲಿ ಪದ್ಯ ಬರ್ದದ್, ಮುಂದೆ ಯಾಗಾರ್ ಒಂದ್ ದಿನ ಹೊದ್ದೆಟ್ಟ ಭವಾನಿಶಂಕರನ ಅರೆಭಾಷೆಲಿ ಹಾಡ್ ಬರ್ದ್ ಮೊದಲಿಗಂತ ಎಲ್ಲವುಕೂ ಗೊತ್ತಾದ ದಿನ ಬಂದದೆಂತ ಹೇಳಿದ ಮಾತ್ ಈಗ ಸತ್ಯ ಆಗುಟು. ಹಾಂಗಾಗಿ ಅರೆಕನ್ನಡ, ತುಳು, ಕನ್ನಡಲಿ ಬರ್ದ್, ತ್ರಿಭಾಷೆಲಿ ಕವನಗಳ ರಚಿಸಿದ ಸುರ್‌ನ ಕವಿಂತ ಮಡಿಕೇರಿಲಿ ಸರಕಾರದ ಗೆಜೆಟ್‌ಲಿ ಪ್ರಕಟ ಆಗಿತ್ತ್. ಜತೆಗೆ ಕೂಡಕಂಡಿ

ಪೊನ್ನಪ್ಪ ಲಾಯರುನೂ ಮತ್ತೆ ಕುಲ್ಲಚನ ಕಾರ್ಯಪ್ಪನವು ಒಂದೆರಡ್ ಪದ್ಯ ಬರ್ದಿದ್ದೊ, ಹಾಂಗಾಗಿ ಮೂರು ಜನರ ಹೆಸರುನೂ ಬಂದಿತ್ತ್. ಅಂದ್ ಪೂಜಾರಿ ಮೊಣ್ಣಪ್ಪ ಹೇಳ್ದ ಮಾತ್ ಇಂದ್ ಸತ್ಯ ಆಗುಟು. ಈ ವಿಷಯಲಿ ನಾನ್ ಏನಾದರೂ ಅರೆಕನ್ನಡಲಿ ಸಾಧಿಸಿರೂ ಆ ಕೀರ್ತಿನ ಮೊಣ್ಣಪಣ್ಣಂಗೆ ನಾನ್ ಸಲ್ಲಿಸ್‌ತ್ತೊಳೆ. ನಾನ್ ಪದ್ಯಗಳ ಬರ್‌ಕಂಡಿರಿಕನ ನಿಂಗೇನ್ ಬೇರೆ ಕೆಲ್ಸ ಇಲ್ಲದಕೆ ನೀ ಹಾಡ್‌ಗಳ ಬರಿದೊ? ನೀ ಬರ್ದ್‌ನಿಂಗೆ ಏನ್ ಪ್ರಯೋಜನಂತ ಇದರ ಓದೊವುಯಾರ್? ಸುಮ್ಮನೆ ಯಾಕೆ ಬರ್ದಯಂತ ನನ್ನಲ್ಲಿ ಕೇಳ್‌ದವು ಒಳೊ. ನಾನ್ ಅಂದ್ ಬರ್ದ ಪದ್ಯಗ (ಸುಮಾರು 50 ಐವತ್ತ್ ವರ್ಷಗಳ ಹಿಂದೆ) ಸೂದನ ಈರಪ್ಪ ಅವು ಪ್ರಕಟಿಸಿಕಂಡಿದ್ದ ಮಾಸ ಪತ್ರಿಕೆಲೂ ಬರ್‌ತಿತ್ತ್. ಅಲ್ಲಿಂದ ಪಟ್ಟಡ ಪ್ರಭಾಕರನವು ಕೊಡಗ್ ಸಂಗಾತಿ ಪ್ರಕಟಸ್‌ತಿದ್ದ ಮಾಸ ಪತ್ರಿಕೆ, ತ್ರೈಮಾಸಿಕ ಪತ್ರಿಕೆಲಿನು ಪ್ರತಿಸಲ ಹಾಡ್‌ಗ ಬರ್‌ತಿತ್ತ್. ಇದೆಲ್ಲ ನಂಗೆ ಬರೆಕೆ ಪ್ರೋತ್ಸಾಹ ಕೊಟ್ಟಂತ ಸಮಯ. ಈ ನಡುವೆ ಆಕಾಶವಾಣಿಗೆ (ಮಿತಹಿತ) ತೇಳುವ ಒಂದ್ ಅಂದರೆ ಮಕ್ಕ ಹೆಚ್ಚಿರಿಕಾಗದ್, ಎರಡೆ ಮಕ್ಕ್ ಇದ್ದರೆ ಸಾಕ್, ಆ ಒಂದ್ ಪದ್ಯನ 1977ರ್ಲಿ ಕಳ್‌ಸಿದಕೆ ಅದ್ ಆಕಾಶವಾಣಿಲಿ ಹಾಡ್ ಬಂದದ್ ಮಾತ್ರಲ್ಲದೆ ಅಂದ್‌ನ ಕಾಲಲಿ ನಂಗೆ ಬಿಇಎಲ್ ಕಾರ್ಖಾನೆಲಿ ಸಂಬಳಂತ ಬರೆ 70.00 ಇದ್ದ ಸಮಯಲಿ ಆಕಾಶವಾಣಿದ 25 ರೂಪಾಯಿ ದುಡ್ಡ್ ಕೊಡಸಿಕ್ಕಿತ್ತ್. ನನ್ನ ತಿಂಗಳ ಸಂಬಳ ಬರೆ ಎಪ್ಪತ್ತೈದು ಇರ್‌ಕನ ನಂಗೆ ಅಲ್ಲಿಂದ ಸಿಕ್ಕಿದ ಎಪ್ಪತ್ತೈದ್ ರೂಪಾಯಿ ಕಂಡ್ ನಾನ್ ತುಂಬಾ ಕುಷಿಪಟ್ಟೆ. ನಂಗೆ ಮುಂದೆ ಪದ್ಯಗಳ ಬರಿಯಕ್ಕೆ ತುಂಬಾ ದೈರ್ಯನೂ ಆಗ ನಂಗೆ ಸಿಕ್ಕಿತ್ತ್.

ಎಪ್ಪತ್ತನೆ ಇಸವಿಂದ ಮೇಲೆ ಬರ್ದ ಪದ್ಯಗಳ ಸೇರಿಸಿ 2003–2004ನೆ ಇಸವಿಲಿ ಎರಡ್ ಪುಸ್ತಕ ಪ್ರಕಟಿಸಿದೆ. ಒಂದ್ ಪುಸ್ತಕ ಸಂತೃಪ್ತಿ, ಇನ್ನೊಂದು ಪುಸ್ತಕ ಮೋಟಿಗೂಡೆನ ಮೊದುವೆ. ಆದರೆ ಎರಡ್ ಪುಸ್ತಕಗ ಒಟ್ಟು 2500 ಪುಸ್ತಕಗ ಒಂದರ ಬೆಲೆ 50 ರೂ., ಇನ್ನೊಂದರ ಬೆಲೆ 40 ರೂ. ಪುಸ್ತಕ ತಕಂಬವುಕೆ 30 ರೂ. ಇನ್ನೊಂದಕ್ 40 ರೂ.ಗೆ ಕೊಟ್ಟಿದ್ ಆಗ ಮಾರಾಟ ಆದ ಪುಸ್ತಕಗ 30 ರುಪಾಯಿದ್ 12 ಪುಸ್ತಕ 40 ರೂಪಾಯಿದ್ 9 ಪುಸ್ತಕ ಮಾರಾಟ ಆಗಿತ್ತ್. ಕಾರಣ ಏನಪ್ಪತೇಳಿರೆ ದುಡ್ಡ್‌ಕೊಟ್ಟ್ ಪುಸ್ತಕ ತಕಂಬವ ನಮ್ಮ ಗೌಡರ್ಲಿ ನಮ್ಮವು ಯಾರೆ ಏನೆ ಬರ್ದರು, ಅದರ ದುಡ್ಡ್ ಕೊಟ್ಟ್ ತಕಂಡ್ ಓದುವ ಕ್ರಮ ಜನಂಗ ಕಲ್ತ್ತೇಲೆ. ಸುಮ್ಮನೆ ಕೊಟ್ಟರೂ ಪುಸ್ತಕನ ಬೇಡತೇಳೊವೂ ವಳೊ.

ಹಿಂದೆ ನಾನ್ 1968, ಮತ್ತೆ 80ನೇ ಇಸವಿಲಿ ಬರ್ದಂತ ಪದ್ಯಗ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜಂದ ಬುಡ್‌ಗಡೆ ಆದ ಪುಸ್ತಕಂದಾಗಿ ಇಂದ್‌ನ ಹೊಸ ಅರೆಕನ್ನಡಲಿ ಬರಿವಂತ ಕವಿಗ ಅರೆಕನ್ನಡಲಿ ಕವನ ಬರೆಕೆ ಶುರು ಮಾಡಿರುವೊ. ಆ ಪದ್ಯಗಳೆ ಅವುಕೆ ಸ್ಫರ್ಧೆನೂ ಧೈರ್ಯನು ತಂದ್ ಕೊಟ್ಟುಟುತೇಳಿರೆ ತಪ್ಪಾಕಿಲೆ. ಈಗೀಗ ಬರಿವಂತ ಜನಂಗ ಯಾವ ಕಾರಣಕೂ ಹೆದ್‌ರೊಕುತಿಲ್ಲೆ.

ಬರಿವಂತ ಕವನ, ಕಳೆಗಳ ಅಕಾಡೆಮಿಂದ್ ಹೊರ ತರಕ್‌ಂತ ಧೈರ್ಯ ಬಂದುಟು. ನಾನ್ ಕೂಡಾ ಅಕಾಡೆಮಿ ಶುರು ಆದ ಮೇಲೆ, ಬರ್ದದರ ಅಕಾಡೆಮಿಂದ ಪುಸ್ತಕ ಹೊರತಂದವೆತೇಳಿ ಸುಮಾರ್ ತೊಂಭತ್ತ್ ಪದ್ಯಗಳ ಅರೆಕನ್ನಡಲಿ ಬರ್ದ್ ಕಳ್‌ಸಿದ್ದೆ. ಅದರ್ಲಿ ಹೆಚ್ಚಿಕಮ್ಮಿ ಅರ್ಧದಸ್ಟ್ ಪದ್ಯಗಳ ಮಾತ್ರ ಮುದ್ರಿಸಿದ್ ಪುಸ್ತಕ ಹೊರ ತಂದೊಳೊ ಅಷ್ಟೆ. ಂ ಯಾಕೆಂತ ಗೊತ್ತ್‌ಲೆ. ಎಸ್ಟ್ ಹಾಡ್‌ಗಳ ಆಗಲಿ ಅಕಾಡೆಮಿ ಮುಖಾಂತರ ಹೊರಗೆ ತಂದದಕೆ ಅಕಾಡೆಮಿನ ಆಡಳಿತ ಮಂಡಳಿಯವುಕೆ ಎಲ್ಲವೂಕ್ ಕೃತಜ್ಞತೆ ಸಲ್ಲಿಸುತ್ತೊಳೆ.

ಅರೆಕನ್ನಡಲ್ಲಿ ಬರಿವ ಹಾಡ್‌ಗ, ಕಥೆಗ ಏನಿದ್ದರೂ ಓದಿಕೆ ಹಂಞ ಕಷ್ಟ ಆದು. ಯಾಕೆಂತೇಳಿರೆ ಶಾಲೆ, ಕಾಲೇಜ್ ಬುಟ್ಟ್ ಕೆಲಸಕ್ಕೆ ಸೇರಿದ ಮೇಲೆ ಅಥವಾ ಮನೆಕಡೆ ಹೊಲ ಗದ್ದೆ ಬೇಸಾಯ ಅಥವಾ ಕೃಷಿ ಕಡೆಗೆ ಗಮನ ಹರಸೊವು ಯಾರುನೂ ಓದುವ ಅಭ್ಯಾಸ ಬುಟ್ಟವೆ. ಹಳ್ಳಿಲಿರೊವಿಕ್ಕೆ ಪುರುಷೋತ್ತುನೂ ಇರ್ದುಲೆ. ಹಂಗಾಗಿ ಓದುವ ಅಭ್ಯಾಸ ಬುಟ್ಟ್ ಹೋದೆ. ಅಪರೂಪಲಿ ಓದಿಕೆನೂ ಕಷ್ಟ ಆದು. ಹಂಗಾಗಿ ಓದುವ ಅಭ್ಯಾಸ, ಬರಿವ ಅಭ್ಯಾಸನ ಯಾರೂ ಬುಡಿಕೆ ಆಗದ್.

ಇಷ್ಟು ನನ್ನ ಪರಿಚಯ ಜನಗಳಿಗೆ ಗೊತ್ತಿದ್ದರೂ ನಾನ್ ಹಂಞ ಹೇಳಿಕಣಕಾದೆ. ನಾನ್ ಕೊಡಗ್ ಜಿಲ್ಲೆ, ಮಡಿಕೇರಿ ತಾಲೂಕು, ಪೆರಾಜೆ ಗ್ರಾಮದ ಹೊದ್ದೆಟ್ಟಿ ತೇಳುದು ನನ್ನ ಮನೆ ಹೆಸರ್. ಹೊದ್ದೆಟ್ಟಿ ದಿವಂಗತ ಬೋಜಪ್ಪ, ಸೀತಮ್ಮನವರ ಮೂರನೆ ಮಂಞ ನಾನ್.

ನಾನ್ 1964ನೆ ಇಸವಿಲಿ ಮಡಿಕೇರಿಲಿ ಐ.ಟಿಐ. ಮುಗಿಸಿಕಂಡ್ ಬೆಂಗ್ಳೂರ್‌ಲಿ 1965ರಲ್ಲಿ ಉದ್ಯೋಗಕೆ ಸೇರಿಕಂಡ್ 1971ರಲ್ಲಿ ಪಂಜಿಪಳ್ಳ ನಾಗಪ್ಪಗೌಡರ ಆರನೆ ಮಗಳ ಮೊದುವೆ ಆಗಿ ಒಂದ್ ಹೆಣ್ಣ್ ಒಂದ್ ಗಂಡ್ ಎರಡ್ ಮಕ್ ನಂಗೆ. ಒಳೊ. ನಾನ್ ಬಿ.ಇ.ಎಲ್. ಬಡಾವರ್ಣಗೆಲಿ 1983ರಲ್ಲಿ ಬಂದ್ ಮನೆ ಕಟ್ಟಿಕಂಡ್ ಅಲ್ಲಿ ವಾಸವಾಗೊಳೆ. ಈಗ ರಿಟಯರ್ಡ್ ಆಗೊಳೆ. ನನ್ನ ಮನೆ ಹೊದ್ದೆಟ್ಟಿಯಾದರು, ನಾನು ಹುಟ್ಟಿ ಬೆಳ್ದದ್ ಎಲ್ಲನೂ ಅಂದರೆ ವಿದ್ಯಾಭ್ಯಾಸ ಕೂಡ ಮಾವಜಿ ರಾಮಣ್ಣ ಗೌಟ್ರ ಮನೆಲಿ. ನನ್ನ ಅವ್ವನ ಸ್ವಂತ ಅಣ್ಣನ ಮಾವಜಿ ರಾಮಣ್ಣ ಗೌಡ್ರು ಅವರ ಸರಿಗೊತ್ತಾಕುತಾದರೆ ಎಡ್ವಕೇಟ್ ಜನರ್ ಆಗಿದ್ದ ಮಾವಜಿ ಜನಾರ್ಧನ ಅವರ ಅಪ್ಪ ಅವು. ನಂಗೆ ಸುಮಾರ್ 5 ವರ್ಷ ಪ್ರಾಯ ಇರಿಕನ ನನ್ನ ಅಪ್ಪವ್ವ ತೀರಿ ಹೋದ ಮೇಲೆ ಮಾವನೆ ನಮ್ಮ ಸಾಕಿ ಓದಿಸಿದ್. ಹಂಗಾಗಿ ಅವರ ಮಕ್ಕಳ ಕೂಡಾ ಇಂದಿಗೂ ನಾವು ಅವ್ವ ಅಣ್ಣ, ಅಕ್ಕಂತಳೆ ಇಂದಿಗೂ ಕರಿಯುತ್ತೊಳೊ. ಆ ವಿಷಯ ಈಗ ಬರೆಕೋದುಲೆ. ನಾನ್ ಕೆಲವು ವರ್ಷದಿಂದ ಹಾಡ್‌ಗಳ ಬರಿದೇ ಬುಟ್ಟಿದ್ದೆ. ಸುಮ್ಮನೆ ಬರ್ದ್ ಇಸಿಕೆನಕು ಹೊರ್ತು ಸೇಲಾಗದ ಪುಸ್ತಕನ ಸಾಲಮಾಡಿ ಮುದ್ರಿಸುದು ಯಾಕೆಂತ ಸುಮ್ಮನಿದ್ದೆ. ಅಕಾಡೆಮಿ ಸುರಾದ ಮೇಲೆ, ನಾನ್ ಮೂಲೆಗೆ ಬಂಡಲ್ ಕಟ್ಟಿಸಿದ ಹಾಡ್‌ಗಳಿಗೆ ಮತ್ತೆ ಮರುಜೀವ ತುಂಬಿದೆ ಈ ಅಕಾಡೆಮಿ.

ಏನೆ ಇರ್ಲಿ ನಂಗೆ ಅರೆಕನ್ನಡಲಿ ಪದ್ಯ ಬರಿಯಕ್ಕೆ ನಿಜವಾಗಿನು ಕಾರಣರಾದ ದಿವಂಗತ ಶ್ರೀ ಪೂಜಾರಿರ ಮೊಣ್ಣಪಣ್ಣನ ಇಂದಿಗೂ ನಾನ್ ಅವರು ನನ್ನ ಹೃದಯದೊಳ್ಗ್ ಇಸಿಕಂಡ್ ಅವರ ನೆನಪಿಸುತ್ತೊಳೆ. ಅಕಾಡೆಮಿಯವು ಹಾಡ್‌ಗಳ ಒಪ್ಪು ತಪ್ಪುಗಳ ತಿದ್ದ್‌ಪಡಿ ಮಾಡಿಕೆ ನಂಗೆ ಕಳ್‌ಸಿಕೊಟ್ಟಿದ್ದೊ. ಅದರೆಲ್ಲ ನಾನ್ ಮಾವಜಿ ಅಚ್ಚುತ್ತಣ್ಣಂಗೆ ಕೊಟ್ಟ್ ಅವರಂದ ಅಕ್ಷರ ತೊಪ್ಪುಗಳ ಸರಿಪಡಿಸಿಕೊಂಡೆ. ಅವುಕೆನೂ ನಾನ್ ಹೃದಯ ಪೂರ್ವಕ ಕೃತಜ್ಞತೆನ ಸಲ್ಲಿಸುತೊಳೆ.

ಇನ್ನು ಮುಖ್ಯವಾಗಿ ಅಕಾಡೆಮಿ ಆದ ಮೇಲೆ ಬರಹಗಾರರಿಗೆ ಕೊಡುವ ಮೊತ್ತಮೊದಲ ಪ್ರಶಸ್ತಿಗೆ ಅರೆಭಾಷೆಲಿ ಕವನ ಬದ್ ಸುರ್‌ನ ವ್ಯಕ್ತಿಂತ ನನ್ನ ಗುರುತಿಸಿ ನಂಗೆ ಸರಕಾರಂದ ಗೌರವಿಸಿ ಪ್ರಶಸ್ತಿ ಫಲಕ ಸಿಕ್ಕಿಕೆ ಕಾರಣರಾದ ಅಕಾಡೆಮಿನ ಅಧ್ಯಕ್ಷರಿಗೂ, ಕಾರ್ಯಕಾರಿ ಮಂಡಳಿಯವುಕು ಇನ್ನೊಮ್ಮೆ ಕೃತಜ್ಞತೆ ಅರ್ಪಿಸುತೊಳೆ. ಈ ಪುಸ್ತಕನ ಪೊರ್ಲುಲಿ ಮುದ್ರಿಸಿಕೊಟ್ಟ ಮುದ್ರಣ ಮಾಲೀಕರಿಗು ಮತ್ತೆ ಅಕ್ಷರ ಜೋಡಣೆ ಮಾಡಿದವುಕೆನು ವಂದನೆ ಹೇಳುತೊಳೆ. ನಂಗೆ ಹಾಡ್‌ಗಳ ಇನ್ನು ಹೆಚ್ಚಿಗೆ ಬರಿಯಕ್ಕೆ ಸಲಹೆ ಕೊಟ್ಟ ಎಲ್ಲಾ ನನ್ನ ಗೆಳೆಯರಿಗೆನು ನಾನ್ ವಂದನೆಗಳ ಹೇಳುತೊಳೆ.

ಇನ್ನು ಮುಂದೆಗೆ ಯಾರೆ ಆಗಲಿ ಅಕಾಡೆಮಿಗೆ ಅಧ್ಯಕ್ಷರಾಗಿ ಬಂದರೂ ಇದೇ ರೀತಿ ಅಕಾಡೆಮಿನ ಘನೆ ಗೌರವನ ಕಾಪಾಡಿಕೊಂಡ್ ನಡಸಿಕಂಡ್ ಹೋಗಲಿಂತ ನಾನ್ ಹರಸುತೊಳೆ.

✍ ಹೊದ್ದೆಟ್ಟಿ ಭವಾನಿ ಶಂಕರ್

ಒಳ ಪುಟಲಿ

ಅನುಭವ ಧಾರೆ

ಅರೆಕನ್ನಡಲಿ ಬರ್ದ ಎಲ್ಲ ಕವನಲಿ ಕೂಡ
ಚರಣೆರಡ್ ನಾಲ್ಕರ ಕೊನೆಲಿ ಪ್ರಾಸಗಳ ಬರ್ಸಿ।
ಅರ್ಥಯಿಸಿ ಸಾಲ್‌ಗ ನಾಲ್‌ಕಾಗಿ ಬರುವಾಂಗೆ
ಹಾಡ್‌ಗಳ ಬರ್ದಳೆ ಕಲ್ಕಿ ದೇವುರ್‌ಗೆ ನಮಿಸಿ॥

ಕೆಲವಕ್ಷರ್‌ಗ ಕೂಡಿ ಶಬ್ದ ವಾಕ್ಯಗಳಾಗಿ
ಲಘು ಗುರು ತೇಳುವ ಮಾತ್ರೆಗಳ ಇರಿಸಿ।
ಕವನಗಳ ಬರ್ದ್‌ದ್ ಎಲ್ಲ ಜನರ ಎದ್‌ರ್
ಕಿರಿಯವ ನಾನರ್ಪಿಸಿನೆ ಪುಸ್ತಕನ ರಚಿಸಿ॥

ನಾನಲ್ಲ ಪಂಡಿತ ಬರ್‌ದದ್ ತೊಪ್ಪಿರುದು
ಖಂಡಿತಾವಾಗಿ ನಾಹೇಳುತೊಳೆ ನಿವುಗೆ॥
ಅಲ್ಪ ತಿಳ್‌ದ್‌ದ್ ನಾನ್ ಕಲ್‌ಪಿಸಿದ್ ಕವನಗಳ
ಸ್ವಲ್ಪ ಸ್ವಲ್ಪನೆ ಬರ್‌ದ್ ಒಪ್ಪಿಸೊಳೆ ನಿವುಗೆ॥

ಎಲ್ಲನೂ ನೀವ್ವೋದಿ ಬರ್ದ ಈ ಕವನಗಳ
ಮೆಚ್ಚಿರೆನೊ ಬುಟ್ಟರೆನೊ ಕೊಟ್ಟಳೆ ನಿವುಗೆ।
ನನ್ನ ಅನುಭವನೆಲ್ಲ ಧಾರೆ ಎರ್ದಳೆ ಹಾಡ್‌ಲಿ
ಹೆಚ್ಚಿ ಹೇಳಿಕೆ ಇನ್ನೇನೂ ಇಲ್ಲೆ ನಂಗೆ॥

* * * * * *

ದೇವುರೆ ಸತ್ಯ

ಓ. ದೇವನೆ ಈ ಪ್ರಾರ್ಥನೆ, ಒಲವಿಂದ ನೀನಾಲಿಸ್।
ಸತ್ಯ ಸಂದೇಶನ ಸಾರಿಕೆ। ಸರ್ವಶಕ್ತಿನ ದಯಪಾಲಿಸ್।
ನಿನ್ನ ಪಾದಕರ್ಪಿಸುವೆ। ನೀ ಬರ್‌ಸಿದಿಕವನಗಳ
ಸ್ವೀಕರಿಸಿ ಮಾರ್ಪಡಿಸ್ ಜನರ। ಕೊಡುತ ಗುಣಸಂಪನ್ನನ॥

ಕೋಪದ್ವೇಷದ ಉರಿಕಿಚ್ಚಿನ। ಜ್ವಾಲೆನ ನೀನ್ ಅಳಿಸ್।
ಪಾಪ ಅಧರ್ಮದ ವಂಚನೆನ। ನೀನೆ ಕೊನೆಗೊಳಿಸ್।
ಪ್ರೀತಿತೇಳುವ ಸರ್ವಾಮೃತನ। ಜನಕೆ ನೀನೆ ಕೊಡ್‌ಸ್।
ಮಿತ್ಯ ಅಳಿಯಕೆ ಸತ್ಯ ಉಳಿಯಕೆ। ಜನಕೆ ನೀನೆ ಬೋಧಿಸ್॥

ನಿನ್ನೆದ್‌ರ್ ನಾನಿರ್ದುರ್ ಅದ್। ಬರೆ ಶೂನ್ಯ ಸಾಧನ।
ತಿಳ್‌ದರೆ ನೀನೊಬ್ಬನೆ। ಸರ್ವರಿಗೂ ನಿಜ ಕಾರಣ।
ನಿನ್ನ ಛಲ ಒಲವೆಲ್ಲವೂ। ಜೀವಿಗಳಿಗೆ ಆಶಾಕಿರಣ।
ನೀ ಮುನಿಯದಿರ್ ಮುನಿದರೆ। ಆದೆ ಜೀವಿಗಳ ಜೀವಹರಣ॥

ನೀ ಹೇಂಗೆ ನನ್ನ ಕರೆಸಿಕಂಡ। ನಿನ್ನ ಸನ್ನಿಧಿಗೆ।
ನೀನೆ ಆಗಿರುವೆ ಕಾರಣ। ನಮ್ಮ ಶಾಂತಿ ನೆಮ್ಮದಿಗೆ।
ಮುದುಡಿದ ಹೃದಯಗಳ। ಅರಳಿಸ್ ನೀ ಬಂದ್
ನೊಂದ ಮನಗಳ ನೀನ್। ಪ್ರೀತಿಸ್ ಎಂದೆಂದು॥

ಪ್ರಭುದೇವ ನೀನೆ। ಪ್ರಕೃತಿಲಿ ಪ್ರತಿ ಜೀವಗಳಿಗೆ।
ಒಳ್ಳದ್ ಕೆಟ್ಟದ್ ನೀನೆ। ಆಗು ಹೋಗುಗಳಿಗೆ।
ನಾನಿದ್ದರೂ ನೀನಿರುವೆ ನಾನಿರದಿದ್ದರೂ ನೀನಿರುವೆ।
ನಾನಿದ್ದರೂ ನಾನಲ್ಲ। ನೀನೆ ಜಗತೆಲ್ಲ ತುಂಬಿರುವೆ॥

ನಾನ್ ನಾನ್‌ಂತ ಹೇಳಿವೆ। ಅದರರ್ಥ ಬರೀಸೊನ್ನೆ।
ಎಸ್ಟ್‌ಸಲ ಆದರೂ ನಾ। ಹೇಳುತಿರುವೆ ಅದನ್ನೆ।
ನಾನ್‌ಂತ ಎಂದೆಂದೂ। ಹೇಳ್‌ಸ್ ಬಡ ನನ್ನಿಂದ ನೀನ್।
ಅದನಳಿಸಿ ಉಳಿಸ್। ನಮ್ಮಿಬ್ಬರ ಸಮ್ಮಂದ ಇನ್ನ್ ॥

ಸತ್ಯ ಒಂದನೆ ಜನರಲ್ಲಿ। ಜಗತ್‌ಲಿ ಹುಟ್ಟು ಹಾಕ್।
ಸತ್ಯ ನುಡಿಯದವನ ನೀ। ಜಗತ್‌ಂದಲೆ ಕಿತ್‌ಹಾಕ್।
ಸತ್ಯವೆ ದೇವುರುಂತಾ ಜಗತ್‌ಗೇ ಗೊತ್ತಾಗಲಿ।
ಸತ್ಯದಾ ಬೊದ್‌ಕಾಗಿ। ಜನಂಗೆಲ್ಲ ಬದಲಾಗಲಿ॥

* * * * * *

ಏನಿದೀಬಾಷೆ?

ಅರೆಭಾಷೆ ಅರೆ ಭಾಷೆ ಏನ್ ಇದ್ ಭಾಷೆ?
ಕನ್ನಡನ ಸಂಕ್ಷಿಪ್ತವಾಗಿ ನುಡಿವ ಭಾಷೆ॥
ಕೊಡಗ್ ದಕ್ಷಿಣ ಕನ್ನಡ ಗೌಡ್ರುಗಳ ಭಾಷೆ।
ಮನೆ ಮನೆಲಿ ಅನುದಿನನು ಮಾತಾಡ್ವ ಭಾಷೆ॥

ನಮ್ಮ ಹಿರಿಯರ್ ಅಂದ್ ಆಡ್‌ತಿದ್ದ ಭಾಷೆ।
ಅಪ್ಪವ್ವ ನಾವ್‌ಗೆಲ್ಲ ಕಲಿಸಿದೀ ಭಾಷೆ।
ಪೀಳಿಗೆಂದ ಪೀಳಿಗೆಗೆ ಬಂದುಟೀ ಭಾಷೆ।
ದ್ರಾವಿಡರ ಕಾಲಂದಲೆ ಸುರ್ ಆದ ಭಾಷೆ॥

ಉದ್ದುದ್ದ ವಾಕ್ಯಗಳ ಸಣ್ಣದಾಗಿ ಮಾಡಿ।
ಅರ್ಥ ಆಗುವ ಹಾಂಗೆ ಹೇಳುವಾ ಭಾಷೆ।
ಶೀಘ್ರಲಿಪಿ ಬರಹಗ ಇದ್ದಾಂಗೆ ಈ ಭಾಷೆ।
ಸಣ್ಣ ವಾಕ್ಯಲಿ ಮಾತ್ ಮುಗಿಸುವಾ ಭಾಷೆ॥

ಅರ್ಥಕೋಶಲಿ ಅರ್ಥವಿರುವಂತ ಭಾಷೆ।
ಅರ್ಥಮಾಡಿಕೆ ಆವ ಅತಿ ಸುಲಭ ಭಾಷೆ।
ಇಂದ್ ಕಲ್ತರೆ ಎಂದು ಮರೆಯದಾ ಭಾಷೆ।
ಅತೀನಯ ವಿನಯದ ಸುಂದರದ ಭಾಷೆ॥

ನಾಡಕವಿಗ ಎಲ್ಲಕಥೆ ಬರೆವ ಭಾಷೆ।
ನಾಡ ಜನ ರಚಿಸುವ ಹಾಡ್ ಈ ಭಾಷೆ।
ನೋಡಿ ಕಲಿಯಕೆ ಸುಲಭ ನಮ್ಮ ಈ ಭಾಷೆ
ದೇಶವಿದೇಶಲಿನು ಹರಡಿರುವ ಭಾಷೆ॥

ಯಾರ ಮನಸ್ಸಿಗು ಘಾಸಿಯಾಗದಾ ಭಾಷೆ।
ಎಂತ ಮನಸ್‌ನ ಕೂಡ ಒಲಿಸುವಾ ಭಾಷೆ॥
ಮನಸಿಗೆ ಅತಿ ತಂಪು ಕೊಡುವಂತ ಭಾಷೆ।
ಮಾತಾಡಿ ಮನ್ನಣೆನ ಪಡೆವಂತ ಭಾಷೆ॥

ಮಾತ್‌ಲ್ಲೆ ಗೆಳೆತನನ ಮಾಡುವಾ ಭಾಷೆ।
ಹರಿಜನಕು ಗೊತ್ತ್‌ಗಿರಿ ಜನಕಲ್ತ ಭಾಷೆ।
ಮಾಪಿಳ್ಳೆ ಮಾಣಿಗಳು ಮಾತಾಡುವೆ ಭಾಷೆ।
ಮುತ್ತಂತ ಶಬ್ದಗಳ ಸುರಿಸುವಾ ಭಾಷೆ॥

ಮಾತ್‌ಲಿ ಮಾಣಿಕ್ಯ ಪೋಣಿಸುವ ಭಾಷೆ।
ಮಾತಾಡಿ ಗೆಳೆತನನ ಬೆಳೆಸುವಾ ಭಾಷೆ।
ಯಾರು ನೋಡಿರು ಇದರ ಕಲಿವಂತ ಭಾಷೆ।
ಮೈ ಮನಕೆ ಚೈತನ್ಯ ತುಂಬುವಾ ಭಾಷೆ।

ಅಂತಾ ಅರೆಕನ್ನಡನ ಜನ ಕೊಂಡಾಡಲಿ।
ಅರೆಭಾಷೆ ಮನೆಮನೆಲಿ ಮಾತಾಡಲಿ।
ಅರೆಭಾಷೆ ಪ್ರತೀ ಜನಕು ಪ್ರಿಯವಾಗಲಿ।
ಅರೆಭಾಷೆ ನಾಡೊಳಗೆ ಪ್ರತಿಧ್ವನಿಸಲಿ॥

* * * * * *

ಅಕಾಡೆಮಿ

ಅರೆಭಾಷೆ ಅಕಾಡೆಮಿ ನಮ್ಮದಾಗುಟು।
ವಿಷಯ ಕೇಳಿ ನಮ್ಮ ಜನಕೆ ಕುಶಿ ಆಗುಟು ।
ಎಸ್ಟೊ ಜನಂಗ ಯತ್ನ ಇದ್‌ಕೆ ಮಾಡಿ ಆಗುಟು।
ಮಾಡ್‌ದ ಕೆಲ್ಸಕದರ ಫಲ ಈಗ ಸಿಕ್ಕಿಟು।

ಮುಂದೆ ಒಳ್ಳೆಸಾಧನೆಗಳ ನಾವು ಮಾಡೊಕು।
ಗೌಡ ಜನಕೆ ಕೀರ್ತಿ ತರುವ ಕೆಲ್‌ಸ ನಡಿಯೊಕು.
ಕೆಟ್ಟದೇನೊ ನಡ್‌ದದಿದ್ದರೆ ಅದರ ಮರಿಯೊಕು।
ಹೊಸ ಕಮಿಟಿ ಜನಂಗ ಅದರ ಸರಿ ಪಡಿಸೊಕು.

ಒಗ್ಗಟ್ಟಿದ್ದರೆ ಈಗ ನಾವು ಏನೂ ಮಾಡಕ್।
ಅಂತ ಮನಸ್ ನಾವುಗಿದ್ದರೆ ಯಾರಿಕೆ ಹೆದುರೊಕು?॥
ತೊಪ್ಪು ಯಾವುದು ಸರಿ ಯಾವುದು ನಾವೆ ತಿಳಿಯೊಕು।
ಅದರ ಬುಟ್ಟ್ ಪಾರ್ಟಿ ನೀವು ಯಾಕೆ ಕಟ್ಟೊಕು॥

ಹುಟ್ಟು ಸಾವುಗಳೆಲ್ಲ ನಾವು ಒಟ್ಟಿಗೆ ಸೇರೊಕು।
ಒಂದೆ ಮನೆವುತೇಳಿ ಇಲ್ಲಿ ನಾವು ತಿಳಿಯೊಕು।
ಸಣ್ಣ ತೊಪ್ಪುಗೆಲ್ಲ ಯಾಕೆ ಸಿಟ್ಟ್ ಮಾಡೊಕು।
ಸಿಟ್ಟ್ ಮಾಡುವ ಜನಂಗ ಅವರ ಬುಟ್ಟೆ ಬುಡೊಕು॥

ಕೆಲವು ಪಂಗಡದವರ ಒಗ್ಗಟ್ ನೋಡಿ ತಿಳಿಯೊಕು।
ಕೆಲವು ಒಳ್ಳದನ್ನ ನಾವು ನೋಡಿ ಕಲಿಯೊಕು॥
ಕೋರ್‌ಟ್ ಕಚೇರಿ ಹೋವ ಕೆಲಸ ಯಾಕೆ ಮಾಡೊಕು।
ಸತ್ಯ ನ್ಯಾಯ ನೀತಿಂದಳೆ ನಾವು ನಡಿಯೊಕು॥

ಒಳ್ಳೆ ಕೆಲಸ ಮಾಡುವವರ ನಾವು ಹೊಗೊಳೊಕು।
ನಾವುಗೆ ಆದುಲೆತೇಳಿ ಪರರ ಯಾಕೆ ದೂರೊಕು।
ಕಪಟ ಮೋಸ ಮನ್‌ಸ್ ಇದ್ದರೆ ನಾವೆ ಸೋಲುದು।
ನಮ್ಮ ಹೆಸರ್ ತಿಳ್‌ದ್ ಯಾಕೆ ಹಾಳ್ ಮಾಡುದು॥

ಹಳ್ಳಿ ಜನಂಗ ಗದ್ದೆ ತೋಟ ಕೆಲಸ ಮಾಡೊಕು।
ಕಸ್ಟ ಬಂದ್ ಭೂಮಿಲೊಳ್ಳೆ ಪಸಲು ತೆಗೆಕು॥
ಭೂಮಿ ಕಮ್ಮಿ ಇರೊವು ಮಕ್ಕಳ ಕಮ್ಮಿ ಮಾಡೊಕು।
ಕಮ್ಮಿ ಇದ್ದರೆ ಮನವು ಮನೆಲಿ ಸುಖಲಿ ಬಾಳಕ್॥

ನಮ್ಮ ಜನಂಗ ಹಳ್ಳಿ ನಾವು ಕಟ್ಟಿ ಬೆಳಸೊಕು।
ಬರುವ ಕಸ್ಟ ನಷ್ಟಗಳ ಮೆಟ್ಟಿ ನಿಲ್ಲೊಕು॥
ಉಟ್ಟ ಬಟ್ಟೆ ಹರಿವವರೆಗೆ ತೊಟ್ಟ್ ಇರೊಕು।
ಕೊಟ್ಟ ದುಡ್ಡ್ ಬಂದ ಕಸ್ಟ ಮನಸ್‌ಲಿಟ್ಟೆ ಇರೊಕು॥

ನಮ್ಮ ಅರೆಭಾಷೆ ನಾವು ಎತ್ತಿ ಹಿಡಿಯೊಕು।
ನಮ್ಮ ಜನಂಗ ನಾವು ಒಂದಾಗಿ ನಡಿಯೊಕು॥
ನಾವು ಯಾಕೆ ಬೇರೆಯಾವುಕೆ ದಾಸರಾಗೊಕು॥
ಆಶಾವಾದಿಗಳಾಗಿ ನಾವು ಈಶರಾಗೊಕು॥

* * * * * *

ಹೆಣ್ಣ್‌ಗೆ ರಕ್ಷಣೆ

ಅವ್ವನೆ ದೇವುರು ತೇಳಿವೆ ಎಲ್ಲ। ಹೆಣ್ಣ್‌ಗೆ ಮಾನ್ಯತೆನ ಕೊಟ್ಟ್।
ಹೆಣ್ಣ್‌ನೆ ಮಕ್ಕಳ ಹೆತ್ತದ್ ಸಾಂಕಿದೆ। ಜೀವನ ಅವುಕೆನೆ ಮುಡಿಪಿಟ್ಟ್॥
ತಾಯಿಲ್ಲದ ಮಕ್ಕ ತಬ್ಬಲಿಯಾದರೆ। ಅವ್ವ ಬೇಕುಂತತ್ತವೆ ಗೋಳಿಟ್ಟ್।
ತಾಯಾದ ಹೆಣ್ಣ್‌ಗೆ ಮನ್ನಣೆ ಸಿಕ್ಕಿದೆ ಅಳ್‌ದರೆ ಯಾರಿಗು ಸಿಗದಸ್ಟ್॥

ಹೆಣ್ಣ್‌ಗೆ ರಕ್ಷಣೆ ಇಲ್ಲದೆ ಬೊದ್‌ಕ್। ಸಾಗುತ ಉಟ್ಟು ನಾಡೊಳಗೆ।
ಹೆಣ್ಣೆ ಮಾತೆ ದೇವತೆ ತೇಳುದು। ಸುಮ್ಮನೆ ಜನಂಗ ಬಾಯೊಳಗೆ॥
ಹೆಣ್ಣೆ ನಮ್ಮೊ ಉಸಿರ್‌ಗೆ ಕಾರಣ। ಅದಿಲ್ಲೆ ಜನರ ಮನಸೊಳಗೆ।
ಹೆಣ್ಣೆ ದೇವುರುಂತ ಕರ್‌ಸಿಕಂಡುಟ್ಟು। ಅದೆಲ್ಲ ಅಂದ್‌ನ ದಿನದೊಳಗೆ॥

ಅಂತಾ ಹೆಣ್ಣ್‌ನ ಕೆಡಿಸಿವೆ ಇಂದ್। ಕೆಡಿಸಿರೆ ಹಾಕುದು ಶಾಪ।
ಹೆಣ್ಣ್‌ನ ಜನಂಗ ಅವಮಾನಿಸ್‌ತಿದ್ದರೆ। ಕಟ್ಟಿಕಂಡವೆ ಪಾಪ
ಹೆಣ್ಣದ್ ಮುನಿದರೆ ನಡೆಕಿಲೆ ಜೀವನ। ಹಾಂಗಿದ್ದದೆ ಅವಳ ಕೋಪ।
ಹೆಣ್ಣ್‌ಗೆ ಮನ್ನಣೆ ಕೊಡದಿದ್ದರೆ ಮುಂದೆ। ಪಡಕಾದು ಪಶ್ಚಾತ್ತಾಪ॥

ಅಪಹರಿಸಿದ್ ಹೆಣ್ಣ್‌ನ ವಂಚಿಸಿಕೆಡಿಸಿರೆ। ಮೆಚ್ಚಿಗಿಲೆ ಭಗವಂತ॥
ಹಸುಳೆಗೆ ವಂಚಿಸಿ ನಿಮ್ಮಾಶೆನ ತೀರ್‌ಸಿ ನಗುತೊಳರಿ ನಿರ್ಧಯವಂತ।
ಬೀದಿಲಿ ನಾಯಿಗ ಎಸ್ಟೊ ಮೇಲ್। ಕಜ್ಜಿ ನಾಯಿಗು ಸಮಾನ ನೀವಲ್ಲ।
ನಿಮ್ಮಾ ದೇಹಲಿ ಹರಿದುಲೆ ನೆತ್ತರ್। ಹರಿದು ವಿಷನೆ ಮೈಯೆಲ್ಲ।

ಮಾಂಸನ ತಿಂಬಂತ ಹುಲಿಸಿಂಹಗಳೇ ಕೊಲ್ಲಿಕಿಲೆ ಸಿಕ್ಕಿರೆ ಎಳೆಕರ್‌ನ।
ಎಂಥಾ ನೀಚ ಗುಲಾಮರ್ ನೀವು। ಕೆಡಿಸಿಕೊಂದರೆ ಮಕ್ಕಳನ।
ಇಂಥ ಹೀನ ಕೃತ್ಯ ಮಾಡುವ। ರಾಕ್ಷಸ ವಂಶದ ಜನಗಳನ।
ಗಂಟಲ್ ಕೊಯ್ಯುವ ಕಾನೂನು ಬೇಕು ಜೈಲ್‌ಗೆ ಕಳಿಸದೆ ಅವರನ್ನ॥

ಎದೆ ಹಾಲ್‌ನ ಕುಡ್‌ದ್ ಬಂದವನಾದರೆ। ಯೋಚಿಸ್ ನೀ ಮಾಡಿದ್ ಸರಿನೊ?।
ನಿನ್ನವ್ವನ ನೆತ್ತರ್ ಹರಿಯದೆ ದೇಹಲಿ। ಹರಿಯುತ ಇರ್ದುಕಡುವಿಷನೊ?।
ನಿನ್ನ ಅಕ್ಕ ತಂಗೆ ಮಕ್ಕಳಿಗಿಂತ। ದುರ್ಗತಿ ಬಂದರೆ ನೀ ಸಹಿಸಿಯನೋ?।
ಅವ್ವನ ಹೊಟ್ಟೆಂದ ಬಂದವ ಆದರೆ। ಇಂತಾ ಕೆಲಸನ ಮಾಡಿಯನಾ?॥

ತಾಯ್ತನ ತ್ಯಾಗದ ಪ್ರತಿಬಿಂಬದ ಹೆಣ್ಣಿಗೆ। ರಕ್ಷಣೆ ಕೊಡೊವು ಯಾರ್ ಒಳೊ।
ಹೆಣ್ಣದ್ ಸುಖಿಸುವ ವಸ್ತುಂತ ಅಧಮ ನೀಚರ್ ಕೆಲವು ತಿಳಿಯತೊಳೊ।
ಅರಳಿಕೆ ಮುಂದೆನೆ ದ್ವೇಯಿಂದ ಮೊಗ್ಗ್‌ನ ಹೇಡಿಗ ನೀವು ಚಿವುಟುಬೊಡಿ।
ನಿಮಿಷದ ಆಶೆಗೆ ಚಿಗುರಿ ಹಬ್ಬುವ। ಬೊಳ್ಳಿನ ಬುಡಂದ ನೀವು ಕೀಳ್‌ಬೊಡಿ।

ನಮ್ಮ ಮನೆ ಜಾಲೊಳಗೆ

ನಮ್ಮ ಮನೆ ಜಾಲೊಳಗೆ ಅರಳಿರುವ ಹೂವಿದರ।
ನಿಮ್ಮ ಸ್ವಾಧೀನಲಿಸಿಕೆ ನಾವ್ ತಂದೊಳೊ॥
ತಕಣಿ ಈ ಕೂಸಿವಳ ನಮ್ಮ ಮನೆ ದೀಪಿವಳ
ನಿಮ್ಮ ಮನೆ ಬೆಳಗಿಸಿಕೆ ನಾವ್ ಕೊಡುತೊಳೊ॥

ಮೋಸವಂಚನೆ ಏನೂ ತಿಳಿಯದಾ ಮೊಗ್ಗು ಇದ್।
ಅವಿಶ್ವಾಸ ಏನ್ಂತ ಗೊತ್ತಿಲ್ಲದವಳ್॥
ಕಸ್ಟಗಳ ಸಹಿಸದೆನೆ ಕಾಣದೆನೆ ಬೆಳ್‌ದವಳ್।
ಪ್ರೀತಿಲಿ ಸಾಂಕಿವಳ ಒಪ್ಪಿಸುತೊಳೊ॥

ಕಸ್ಟಗಳ ಕೊಟ್ಟರದ್ ಚಿಗ್‌ರ್ ಬಾಡಿದ್‌ಹೋದು।
ಅರಳಿದ ಹೂಮೇಲೆ ಮಂಜು ಬಿದ್ದಾಂಗೆ॥
ನಿಮ್ಮ ಸುಖದುಃಖಲಿನು ಎಲ್ಲ ತರಲಿನು ಮುಂದೆ।
ನಿಮ್ಮನೆಗೆ ಕೊಡುವಂತ ಬೊಳುಪು ಅವಳ್।

ಹಾಲ್ ಹಣ್ಣ್‌ನಸಿಹಿನ ನಿವುಗೆಲ್ಲ ಕೊಡುದು ಅದ್।
ಇನ್ನಿವಳ ನಡೆ ನುಡಿನು ನಿಮ್ಮ ಪರವಾಗಿ।
ನಿಮ್ಮ ಕೀರ್ತಿನು ಮುಂದೆ ಪ್ರಜ್ವಲಿಸಳಿವಳಿಂದ।
ನಿಮ್ಮ ಗುಣ ನಡತೆಗ ಘಮ ಘಮಿಸಲಿ॥

ನಿನ್ನ ಗಂಡನ ಜೊತೆಗೆ ಸುಖವಾಗಿ ಇರ್ ಮಗಳೇ
ಇನ್ನಿವಳ್ ನಿವುಗೆ ಸೊಸೆ ನಿಮ್ಮ ಮನೆಗೆ॥
ಬಾಳ್‌ತೇಳ್‌ವ ದೊಡ್ಡ ದೋಣಿ ನನೆ ನಡ್‌ಸಿಕೆಂತ।
ನಿಮ್ಮನೆಗೆ ಬಂದುಟು ಈ ಹೆಣ್ಣ್ ಮಗಳ್॥

ಎಂದೆಂದೂ ನೀವಿವಳ ಕೈ ಹಿಡ್‌ದ್ ಕಾಪಾಡಿ
ನಿಮ್ಮನೆಗೆ ಸೇರಿದಾ ಈ ಗೂಡೆ ಇವಳ್॥
ಅತ್ತೆ ಮಾವನ ಸೇವೆ ಅಪ್ಪ ಅವ್ವನ ಸೇವೆಂತ।
ಅತೀ ಜಾಣ್‌ಮೆ ಹೆಣ್ಣಾಗಿ ನಿ ಮಾಡೊಕು॥

ನಿನ್ನ ದೇವುರು ಇನ್ನ್‌ಮುಂದೆ ಗಂಡನೆ ಮುಂದೆ।
ಬೇರೆ ದೇವುರು ಇಲ್ಲೆ ಗಂಡನಾಎದ್‌ರ್॥
ನಿನ್ನ ಬೊದ್‌ಕ್‌ಗೆ ದಾರಿ ನಿನ್ನ ಗಂಡನ ಮುಂದೆ।
ಗಂಡ ಅವ ಮಾತ್ರಲ್ಲ ಸರ್ವಸ್ವನವನೆ॥

ದಾಸಿತೇಳೀದ್ ತಿಳಿದ್ ಪತಿನ ಸೇವೆನ ಮಾಡ್।
ಮನೆ ಒಳಗೆ ನೀ ಮಾತ್ರ ಮಂತ್ರಿನೆ ಅವಂಗೆ॥
ಏನೆ ಊಟ ಇಕ್ಕಿರೆನು ನಿನ್ನ ಗಂಡಂಗೆ ನೀನ್।
ನೀನ್‌ವಂಗೆ ಹೆಣ್ಣಲ್ಲ ಅವನವ್ವ ನೀನ್।

ಗಂಡನಾ ಮನಸ್‌ನ ಒಲಿಸಿನೀ ಜೊತೆಗಿರೊಕು।
ನಗುನಗುತನೆ ಕುಷಿಲಿ ನೀವ್ ಬಾಳೊಕು॥
ಹೆತ್ತವರ ಮನೆ ಬುಟ್ಟ್ ಹೊರಗೆ ಹೋಗಳ ಮಗಳೇ॥
ನಿಂಗೆ ಭಾಗ್ಯ ಭೋಗನ ಕೊಡುವ ದೇವುರ್‌ಗವು ಮುಂದೆ॥

ಈ ಮನೆಲಿ ಇರುವ ಜನ ನಿನ್ನ ದೇವುರುಗ।
ನಿಂಗೆ ನಾನೇನ್ ಉಡುಗೊರೆನ ಕೊಡೊಕು ಮಗಳೆ॥
ಏನ್ ಉಡುಗೊರೆ ಕೊಟ್ಟ್ ಕಳ್‌ಸಕು ಮಗಳೆ॥
ಮಾವನ ಮನೆಗೋವ ಮುದ್ದಿನಾ ಮಗಳೆ॥

ದೇವುರೆ ಕೊಟ್ಟಿರುವ ವಸ್ತು ವಾಹನನ ಕೊಡೊಕೊ?।
ಕಡು ಬಡತನಲಿ ಬೆಂದ್ ಬಾಡಿ ಹೋದರು ನಾವು।
ಅತೀ ಪ್ರೀತಿಲಿ ನಿನ್ನ ಸಾಂಕಿ ಸಲಹಿಯೊಳೊ।
ನಿಂಗೇನ್ ಬೇಕುಂತ ಕೇಳ್ ನೀ ಮಗಳೆ॥

ಎಡೆಬುಡದೆ ಬಾತಿದ್ದ ಕಸ್ಟಗಳ ಸಹಿಸಿ ನಾವ್।
ಬಡತನದ ಕಡಲ್‌ನನೆ ಮೊಸಿದಡ ಸೇರಿಯೊಳೊ॥
ಇನ್ನೇನ್ ನಿಂಗೆ ನಾ ಕೊಡೊಕು ಮಗಳೇ।
ಏನಾಸೆ ನಿಂಗುಟ್ಟುಂತ ಹೇಳ್ ಮಗಳೆ॥

ನೀ ಹೋಕನ ನಿಂಗೆ ಬುದ್ಧಿವಾದನ ಹೇಳುವೆ।
ಸತಿ ಪತಿಗ ನೀವಿನ್ನ್ ಸುಖಲಿ ಬಾಳಿಂತ॥
ಗಂಡ ಏನೇಳಿರೆನು ಎದ್‌ರ್ ಹೇಳ್ ಬಡ ನೀನ್।
ಅವನೇ ಗತಿ ದೇವುರುಂತ ನಂಬು ನೀ ಮಗಳೆ॥

ನಿಲ್ಲ್ ನೀಕಣ್ಣ್ ಒರೆಸಿಕ ಹೋಕನ ಅಳ್‌ಬಡಮಗಳೆ।
ನಿನ್ನ ಸಾಂಕುವ ಅಪ್ಪವ್ವ ಬನ್ನಿ ಕರ್‌ಕಣಿ ಅವಳ॥
ಎರಡ್ ಮನೆಗೂ ಒಳ್ಳೆ ಬಿರುದು ತಂದ್‌ದ್ ನೀವು।
ನೂರ್ ವರುಷನು ಸುಖಲಿ ಬಾಳಿ ಬೊದ್‌ಕಿ॥

(* ವಿ.ಸೀ.ಯವರ ಕವನಂದ)

ದೇಹದೊಳಗೆ ದೇವ್ರು

ದೇಹದೊಳಗೆ ದೇವರಿದ್ದರು। ಗುಡಿಗೆ ಯಾಕೆ ಹೋದವೆ।
ಒಳೆಗೆ ದೇವ್ರುರ ಮರ್ತ್ ಗುಡಿಲಿ ಪುಜೆ ಯಾಕೆ ಮಾಡಿವೆ।
ನಮ್ಮ ಮನ್ಸ್ ಶಾಂತಿ ಸಿಕ್ಕಿಕೆ। ದಿನನು ಧ್ಯಾನ ಮಾಡೊಕು।
ಹೃದಯದೊಳಗೆ ದೇವ್ರುರುನ। ದಿನಾ ನಾವು ಕಾಣಕ್॥

ಧ್ಯಾನ ಮಾಡ್ರೆ ಅಂತರಾತ್ಮ। ದಿನನು ಬೆಳಗ್‌ತಿದ್ದದೆ।
ಮನ್ಸ್ ಒಳಗೆ ಇರುವ ಜ್ಯೋತಿ। ಆರದೆನೆ ಇದ್ದದೆ॥
ಹೃದಯಲಿರುವ ಜ್ಯೋತಿ ಅದ್‌ಕೆ। ಎಣ್ಣೆ ಬತ್ತಿ ಎಂತಕೆ।
ಮನಸ್‌ತೇಳುವ ದೀಪ ಸಾಕ್। ದೇವ್ರುರ ನಾವ್ ಹುಡ್‌ಕಿಕೆ॥

ಅಂತರಾತ್ಮ ಶುದ್ಧ ನಾವು। ಮನಸ್ ಇಸಿದ್ ಮಾಡೊಕು।
ಮನಸ್ ಇಸಿದ್ ಧ್ಯಾನ ಮಾಡ್ರೆ ನಮ್ಮ ಹೃದಯ ಬೆಳಗಕ್॥
ಹಠನು ಬೇಕು ದಿಟನು ಬೇಕು। ಆತ್ಮನ ನಾವು ಗೆಲ್ಲಿಕೆ।
ಪರಮಾತ್ಮನ ನಮ್ಮ। ದೇಹದೊಳಗೆ ಕಾಂಬಕೆ॥

ಯಾವ ಮಂತ್ರ ತಂತ್ರ ಕೂಡ। ಧ್ಯಾನದೆದ್‌ರ್ ನಿಲ್ಲದ್
ಯಾವ ವಶೀಕರಣ ಮಾಟ। ಧ್ಯಾನದೆದ್‌ರ್ ಸಲ್ಲದ್॥
ಧ್ಯಾನಯೋಗದಿಂದ ನಮ್ಮ ಮನಸ್ ಸ್ವಚ್ಚ ಮಾಡಕ್।
ಹರಡ್‌ವಂತ ರೋಗ ರುಜನ ಎಲ್ಲ ನಾವು ತಡಿಯಕ್॥

ಧ್ಯಾನಯೋಗ ಕಲಿಯದಕ್ಕೆ। ದೇವಸ್ಥಾನ ಕೋದವೆ।
ಒಳೆಗೆ ಇರುವ ಮೂರ್ತಿಗಳಿಗೆ। ಪೂಜೆ ಮಾಡಿ ಬಂದವೆ॥
ಪೂಜೆ ಮಾಡಿ ತಟ್ಟೆಗಳಿಗೆ। ಕಾಣಿಕೆ ತುಂಬುತಿದ್ದವೆ।
ತಲೆಗೆ ಪೂಜಾರಿ ಟೊಪ್ಪಿ ಮೊಡ್‌ಗಿ। ಬೊಟ್ಟ್ ಹಾಕಿ ಕಳ್‌ಸಿದೆ॥

ಮಾಡಬಾರದ ತೊಪ್ಪು ಮಾಡಿ। ದೇವಸ್ಥಾನ ಕೋದರೂ।
ಅಲ್ಲಿ ಪೂಜೆ ಮಾಡಿ ದುಡ್ಡ್। ಎಷ್ಟೆ ನೀವು ಕೊಟ್ಟರೂ॥
ಮಾಡ್‌ದ ಕೇಡ್, ವಂಚನೆ ಮೋಸ। ಅಲ್ಲಿ ಬುಟ್ಟ್ ಹೋದೆನೊ?।
ನೀವು ಶುದ್ಧ ಮೊನುಷ್ಯರಾಗಿ। ಬೊದ್‌ಕಿಕೆ ನಿವುಗೆ ಸಾಧ್ಯನೊ?॥

ಗುಡಿಲಿ ಪೂಜೆ ಎಷ್ಟೆ ಮಾಡ್ರು ಕರ್ಮ ಬುಟ್ಟ್ ಹೋಗದೆ।
ಮಾಡಿರುವ ಪಾಪ ಕರ್ಮ। ನಿಮ್ಮೊಳಗೆ ಇದ್ದದೆ॥
ಗುಡಿಲಿ ಇರುವ ಮೂರ್ತಿಗೆ ನಿಮ್ಮ। ಕರ್ಮ ಬುಡಿಸಿಕಾಕಿಲೆ।
ಧ್ಯಾನ ಮಾಡ್ರೆ ಮಾತ್ರ ಅದ್। ಬುಟ್ಟ್ ಹೋಗದಿರಿಕಿಲೆ॥

ಋಷಿ ಮುನಿಗ ಎಲ್ಲ ಹಿಂದೆ। ತಪಸ್ ಮಾಡ್‌ತಿದ್ದವು।
ಕಾಡ್ ಬೆಟ್ಟಗುಹೆ ಒಳಗೆ। ಧ್ಯಾನಯೋಗ ಮಾಡ್‌ತಿದ್ದವು।
ಕಠಿಣ ತಪಸ್ ಮಾಡಿ ಅವು। ದೇವುರ್‌ನ ಕಂಡೊಳೊ।
ಭೂಮಿ ಮೇಲೆ ಅವು ದೇವುರ। ಸಮಾನ ಎನಿಸಿಕೊಂಡೊಳೊ॥

* * * * * *

ತೀರ್ಥಯಾತ್ರೆ

ತೀರ್ಥಯಾತ್ರೆಗೆಂತ ಜನಂಗ ಹೋಗುತ್ತಿದ್ದವೆ।
ಅಲ್ಲಿ ಪುಣ್ಯ ನದಿತೇಳಿ ಮಿಂದ್ ಬಂದವೆ।
ಮಿಂದ್ ಪಾಪಕಳ್ತ್ ತೇಳಿ ಜನಂಗ ತಿಳ್ದವೆ।
ಎಸ್ಟೋ ಜನಂಗ ಅ ಮಾತ್ ನಂಬುತಿದ್ದವೆ॥

ಹಳ್ಳಲಿ ಮಿಂದ್ ಸಿದ ದೇವಸ್ಥಾನಕೋದವೆ।
ದೇವುರ್‌ಗೆ ತಲೆಬೊಗ್ಗ್‌ಸಿ ಪೂಜೆ ಮಾಡವೆ॥
ತಾನ್ ಮಾಡ್ದ ತೊಪ್ಪು ಹೊಟ್ಹೋಗ್ತ್ ತೇಳಿವೆ॥
ಈಗ ನಾವು ಬಾರಿ ಒಳ್ಳೆ ಜನಂಗತೇಳಿವೆ॥ತಿ।

ಪವಿತ್ರ ನದಿಂತ ಮಿಂದರೆ ಪಾಪ ಹೊರ್ಟ್ ಹೋದೆನೋ।?।
ಮಾಡ್ದ ಪಾಪ ಎಲ್ಲ ಪರಿಹಾರ ಆದೆನೋ?॥
ಹಾಂಗೆ ನಂಬಿದ ಜನರ ನಾವು ಏನ್ ಮಾಡುದು?।
ಅವುಕೆ ಹೇಂಗೆ ತಿಳ್‌ದ ಜನಂಗ ಬುದ್ದಿ ಹೇಳುದು?॥ ತೀರ್ಥ॥

ಗಂಗೆಯಮುನೆ ನದಿಗ ಎರಡ್ ಶ್ರೇಷ್ಠತೇಳಿವೆ।
ಸುಮಂಗಳನೆ ಅಲ್ಲಿ ಮಿಂದರಾದೆತೇಳಿವೆ॥
ತುಂಗ ಭದ್ರ ಕಾವೇರಿ ಪವಿತ್ರ ತೇಳಿವೆ।
ಅಲ್ಲಿ ಮಿಂದರೆ ಪಾಪ ಕಳ್‌ದ್ ಹೋದೆತೇಳಿವೆ॥ತೀ॥

ಮೋಸ ವಂಚನೆನ ಮಾಡಿ ಪವಿತ್ರ ನದಿಗೆ।
ಹೋದರಲ್ಲಿ ಅವಮಾನ ಹರಿವ ನೀರ್‌ಗೆ॥
ಮನಸ್ ಒಳಗೆ ಕೊಳಕ್‌ತುಂಬಿ ಹೋದವಲ್ಲಿಗೆ।
ಪಾಪ ಕಳ್ತ್‌ತೇಳಿ ತಿರ್‌ಗಿ ಬಂದವಿಲ್ಲಿಗೆ॥

ತೀರ್ಥಯಾತ್ರೆ ಮಾಡಿ ಬಂದ್ ಹೆಂಡ ಕುಡ್ದವೆ।
ಕಂಡವುಕೆಲ್ಲ ಬಾಯಿಗೆ ಬಂದಹಾಂಗೆ ಬೊಯಿದವೆ।
ದೇವುರ್‌ಗೆ ಹರಿಕೆಹೇಳಿ ಬೋಡಿ ಹೊಡ್ದವೆ।
ಅಲ್ಲಿ ಇಲ್ಲಿ ಕಂಡವುಕೆಲ್ಲ ಕಣ್ಣ್ ಹೊಡ್ದವೆ॥ತೀ॥

ಮಕ್ಕ ಎಲ್ಲ ದೇವುರ್‌ಗೆ ಸಮಾನ ತೇಳಿವೆ।
ಹೆಣ್ಣ್ ಮಕಳೇ ಕೆಡ್‌ಸಿ ಕೊಂದ್ ಮೋರಿಗಾಕಿವೆ॥
ಪುನಃ ತಪ್ಪು ಮನ್ನಿಸಿಕೆ ಯಾತ್ರೆಗೋದವೆ।
ತೊಪ್ಪು ಮನ್ನಿಸಿಕೆ ದುಡ್ಡ್ ಹುಂಡಿಗಾಕಿವೆ॥

ಸತ್ಯ, ನ್ಯಾಯ, ಧರ್ಮ ಎಲ್ಲೂ ಇಲ್ಲದಾಗುಟು।
ದೇವುರ ಭಯ। ಜನಕೆ ಇಂದ್ ಹೊರ್‌ಟ್ಕೆ ಹೋಗುಟು।
ದೇವುರಿಂದ್ ಜನಕೆ ಹೆದ್‌ರಿ ಬೆತ್ತಲಾಗುಟು।
ಜನಕೆ ನ್ಯಾಯ ಸಿಕ್ಕದೆಲ್ಲ ಕತ್ತಲಾಗುಟು॥ತೀ॥

ಮಾರ್ಗ ಬದಿಲಿ ಕುದ್ದ ಜನಕೆ ಭವಿಷ್ಯ ಕೇಳಿವೆ।
ಮಾಡ್‌ದ ತೊಪ್ಪು ಇನ್ನ್‌ನಮ್ಮಲುಟ್ಟೊಕೇಳಿವೆ॥
ಪುಣ್ಯಕ್ಷೇತ್ರಕೋಗಿ ಪವಿತ್ರ ಆತೊಂತ ಕೇಳಿವೆ।
ಮಕ್ಕಳ ಹೆತ್ತ ಅಪ್ಪ ಅವ್ವ ಅಳುತ ಇದ್ದವೆ॥

ಸತ್ಯಲಿರುವ ಕಾಲಬೇಗ ಬರ್ಲಿತೇಳೊಮೊ।
ಜನಂಗ ಒಳ್ಳೆವಾಗಲಿಂತ ನಾವು ಬಯಸೊಮೊ।
ಮೂರ್ಖರೆಲ್ಲ ಒಳ್ಳೆಬುದ್ಧಿ ಬೇಗಕಲಿಯಲಿ॥
ನಮ್ಮ ದೇಶಕಿರುವ ಕೀರ್ತಿ ಎತ್ತಿ ಹಿಡಿಯಲಿ ॥ತೀರ್ಥ॥

* * * * * *

ಬಿಸಿಲ್

ಮೈಕೈ ಸುಟ್ಟು ಹೋಗುತ ಉಟ್ಟು ಅಷ್ಟೊಂದುರಿವ ಬಿಸಿಲ್
ಜನಂಗ ಕಳ್ದವೆ ಕಸ್ಟಲಿ ಕೆಲ್ಸ ಮಾಡಿಕಂಡ್ ಕತ್ತಲೆ ಹಗಲ್।
ಆಕಾಶ ನೋಡ್ರೆ ಕಂಡದೆ ಮೇಲೆ ಒಮ್ಮೊಮ್ಮೆ ಕಪ್ಪು ಮೋಡ
ಮಳೆನು ಬಾದುಲೆ ಏನಪ್ಪ ಮಾಡ್ದು ಇಂತ ಬಿಸಿಲ್ ಬೇಡ।

ಮಧ್ಯಾನದೂಟಕೆ ಹಳ್ಳಿನ ಜನಕೆ ಕೂಸಲಕ್ಕಿ ಗಂಜಿನೆ ಸಾಕ್
ಹೊಟ್ಟೆ ತುಂಬ ಉಣ್ಣೊಕುತಾದ್ರೆ ಒಣಗಿದ ಮೀನೆ ಬೇಕು।
ಕೊಟೂತೇಳುದು ಕಪ್ಪು ಹೇಂಟೆ ಇಸಿಟುಕಂಡದೆ ಮೊಟ್ಟೆ।
ಬಿಸ್‌ಲ್‌ಗೆ ಮೊಟ್ಟೆ ತಿಂದ್‌ದ್ ಗೇಸ್ ನೋಡಿನಿ ಅತ್ತಿಗೆ ಹೊಟ್ಟೆ॥

ಮರಗಳಲೆಲ್ಲ ಸೊಪ್ಪು ಉದುರಿ ಮರಗ ಕಂಡದೆ ಬೋಳ್।
ಬಿಸ್‌ಲ್‌ಗೆ ಹಟ್ಟಿಗೆ ಸೊಪ್ಪುನು ತರೊಕು ಎಂತಕೆ ಹೇಳುದು ಗೋಳ್।
ಅರ್ಕಿಲ್ ಹಿಂಗೆ ಇನ್ನೂ ಇರ್ದು ಒಂದೆರಡ್ ತಿಂಗ।
ಅಲ್ಲಿನು ಮೂರಲಿ ಬತ್ತಿನು ಹೋಗುಟು ಕಾವೇರಿ ಗಂಗ ತುಂಗ।

ಎಲ್ಲಿನು ನೀರ್ ಇಲ್ಲದ ಕಾರಣ ನೋಡಿಕೆ ಆದುಲೆ ತೋಟ
ಹೇಂಗಪ ಜನಂಗ ಜೀವನ ಮಾಡುದು ಮಾಡಕೊಲೆದಿನ ಊಟ।
ಸೆಕೆಗಾಲಲಿ ಜನಂಗ ಜಾಲ್‌ಲಿ ಮೊಲಗೆವೆ ಉಮ್ಮಣಿದುಟ್ಟುಕಾಟ।
ಹುಷಾರಾಗಿರಿ ನಿಮ್ಮನೆ ಹೊರುವೊ ಕಳ್ಳರದುಟ್ಟು ಕಾಟ।

ಬಿಸ್‌ಲ್‌ಲಿ ಬೆಗರಿಗೆ ಮಿಯದೆ ಇದ್ದರೆ ಮೈಕೈಯೆಲ್ಲ ಅಂಟ್।
ಮಿಯಕೆ ನೀರ್ ಇಲ್ಲದೆ ಕೆಲಜನ ಮೈಕೈ ಹೊಡ್ದವೆ ಸೆಂಟ್॥
ಆದರು ಕೆಲ ಜನ ಸ್ಟೈಲ್‌ಗೆ ಹಾಕಿವೆ ಬಿಸ್‌ಲ್‌ಗೆ ಟೈಟ್ ಪೇಂಟ್।
ಬಿಸಿಲ್‌ಗೆ ಮೈಯೆಲ್ಲ ಬೆಂದ್ ಹೋದರು ಹಳಬರ್ ಬುಡಿಕಿಲೆ ಕೋಟ್॥

ಮನೆ ಬದಿ ಹಳ್ಳ ಕೆರೆನೂ ಇದ್ದರೆ ಮನೆವೆಲ್ಲವು ಮಾಡಿವೆ ಸ್ನಾನ
ಮಾಡಿದ ಅಡಿಗೆನ ನಾಯಿಗ ತಿಂದರೂ ಯಾರಿಗು ಇಲ್ಲೆದ್ ಗೇನ।
ಕಣ್ಣೆ ಕಾಣದ ಮನೆಲಿರುವಜ್ಜಿಗೆ ಎಂತಕೆ ಹೇಳುದು ಕೋಪ।
ಮಾಡಿದ ಅಡಿಗೆನ ತಿಂದಾ ನಾಯಿಗೆ ಹಾಕುದು ದಿನ ಇಡಿ ಶಾಪ।

ಕಾಡ್‌ಲಿ ಹುಲ್ಲ್ ಮೇಯಕೆ ಇಲ್ಲದೆ ಹಸ್‌ಗಳು ಕೊಡ್ದುಲೆ ಹಾಲ್।
ಇಂತ ಸಮಯಲಿ ಎಲ್ಲರ ಮನೆಲೂ ಕಣ್ಣ ಕಾಫಿನೆ ಮೇಲ್।
ಬಿಸ್‌ಲ್‌ಗೆ ಒಡ್‌ದ್ ಎಸ್ಟೊ ಜನರ ನೋಡಿನೆ ಹಿಮ್ಮಡಿಕಾಲ್।
ಎಂಭತ್ ವರ್ಷ ಪ್ರಾಯನು ಆದ ಅಜ್ಜನ ಕಾಲೇ ಮೇಲ್।

ಬೇಸಿಗೆ ಕಾಲಲಿ ಕಂಡರೆ ಬುಡ್‌ಬಡಿ ಕಾಡ್‌ಲಿ ಸಿಕುವ ಜೇನ್।
ಗಿಡ ಮೂಲಿಕೆಗಳ ಅವುಷದಿ ಸೇರಿದ ಜೇನ್‌ನ ರುಚಿಯದ್ ಏನ್।
ತಲೆ ಮೈಮಿಯದೆ ತೊರ್ಸುತ ಇರುವ ಗೂಡೆನ ಪಾಡದ್ ಏನ್।
ಅಯ್ಯೊ ನಾನ್ ಏನ್‌ಂತ ಹೇಳುದು ತಲೆತುಂಬ ತುಂಬಿಟು ಹೇನ್॥

ಕಾಡ್‌ಲಿ ಸರಯನ ಕಾಸಿಕನಿದ್ದವೆ ನೋಡಿಕೆ ಎಲಿನಾಂಗೆ ಜನಂಗ।
ಕಾಸಿದ ಸರಯನ ಕುಡ್ದವು ಬಾಕನ ಆಗಿದ್ದವೆ ಅವ್ರು ಹುಲಿಗ।
ಬೇಸಿಗೆಲೆಸ್ಟೊ ಮನೆಗಳ ಗೋಡೆಲಿ ಸಂದ್‌ಗಳಲಿದ್ದದೆ ಚಗಣೆ।
ಯಾರಿಗೆ ಹೇಳಲಿ ಕತ್ತಲೆಗೆ ನಿದ್ದೆ ಮಾಡದೆ ಮನೆವರ ಬವಣೆ॥

ಎಂತಾ ಬಿಸಿಲಿದ್ ಸುಟ್ಟದೆ ಕಾಲ್ ಬರಿಕಾಲ್‌ಲಿ ನಡೆಕೆಬೊತ್ತ್।
ಹಸಿ ಹುಲ್ಲು ತಿಂಬಕೆ ಬೇಲಿನ ಹಾರಿ ಹೋಗುಟು ತಿಮ್ಮನ ಎತ್ತ್।
ಇರುವಾಗ ಆಸ್ತಿನ ಭಾಗ ಮಾಡಿದ್ ಮಕ್ಕಳಿಗದರ ಕೊಟ್ಟ್
ಮಾಡಿದ ಪಾಲ್‌ಲಿ ಹೆಚ್ಚ್ ಕಮ್ಮಿಯಾದರೆ ಅಪ್ಪಂಗೆ ಸಿಕ್ಕುದು ಪೆಟ್ಟ್॥

ಎಮ್ಮೆ ಕೋಣಂಗ ಸೆಕೆಗೆ ಇದ್ದವೆ ನೀರ್‌ಲಿ ತುಂಬಾ ಹೊತ್ತ್।
ಹಂದಿಗೆ ಕೆಸರೆ ಇಷ್ಟಾತೇಳುದು ಜಗತ್ತ್‌ಗೆ ಅದ್ ಗೊತ್ತ್॥
ಹರಿವ ನೀರ್ ಬತ್ತಿ ಹೋಗಿದ್ ಹೊಂಡಲಿ ಇದ್ದರೆ ಮೀನ್॥
ಹೊಂಡಂದ ಹಿಡ್ದಾ ಮೀನಾ ಗೈಪು ರುಚಿನ ಯಾಕೆ ಹೇಳಲಿ ನಾನ್॥

ಬಿಸ್‌ಲ್‌ಲಿ ನಡೆಕನ ಬೋಳು ತಲೆವು ತಲೆಗೆ ಇಸಿವೆ ಟೊಪ್ಪಿ।
ಕುಡೆಕೆ ನೀರ್‌ನ ಬದಲ್ ತಂದವೆ ಕತ್ತಲೆಗೆ ಸರಯದ ಕುಪ್ಪಿ॥
ಕುಡ್ದದ್ ಹೆಚ್ಚಾಗಿ ಹೆಣ್ಣ್‌ನ ಗೇನಲಿ ಮನೆ ನಾಯಿಗೆ ಕೊಟ್ಟವೆ ಪಪ್ಪಿ।
ಬೊಳ್ಪುಗೆ ಎದ್ದ್ ಅವ್ವ ತಾದು ವಾಮಿಟ್ ಎತ್ತಿಕೆ ಚಿಪ್ಪಿ॥

ಮಕ್ಕ ಮೈಕೈ ತೊರ್ಸಿಕಂಡಿದ್ದವೆ ನೋಡಿದ್ ಅದರ ಅಜ್ಜಿ।
ಮಕ್ಕಳ ಹಕ್ಕಲೆ ಕರ್‌ದ್ ನೋಡಿರೆ ಗಂಟಲ್ ಬುಡ ತುರಿಕಜ್ಜಿ॥
ಸುಮ್ಮನೆ ಇರುದುಲೆ ಮಕ್ಕ ನೋಡಿ ಮಕ್ಕ ಹರಂಡಿವೆ ಉಜ್ಜಿ।
ಮಕ್ಕಳ ಸಾಂಕಿಕೆ ಅಪ್ಪವ್ವನು ಅಲ್ಲ ಮನೆಲಿ ಬೇಕೊಂದು ಅಜ್ಜಿ॥

ಸೂರ್ಯನೆ ಇಲ್ಲದಿದ್ದರೆ ಜಗತ್ತ್‌ಲಿ ಜೀವಿಗಳಿರಿಕೆ ಇಲ್ಲೆ"
ಬಿಸ್‌ಲ್‌ನ ಕೊಡುವ ಸೂರ್ಯನ ಜನಂಗ ಎಂದೂ ಮರೆಕೆ ಇಲ್ಲೆ।
ಬೇಸಿಗೆ ಬಿಸ್‌ಲ್‌ನ ವರ್ಣಿಸುದೆಂತಕೆ ಪ್ರಕೃತಿ ಗುಣತಾನೆ।
ಜೀವದ ರಕ್ಷಕ ಸೂರ್ಯಂಗೆ ದಿನನೂ ನಮಿಸೊಕು ನಾವುತಾನೆ॥

* * * * * *

ಜೀವನನೆ ಬಲು ಘೋರ

ಜೀವನನೆ ಬಲು ಘೋರ ಮನುಷ ಭೂಮಿಗೆ ಭಾರ
ಪ್ರಕೃತಿ ವಿರುದ್ಧ ನಡಿತುಟ್ಟು ಸಮರ।
ಸತ್ಯ ಧರ್ಮನ ಜನಂಗ ಮರ್ತರೂ ನಾಡ್‌ಲಿ
ಕೊನೆಗುಳಿದು ಸತ್ಯನೆ ಎಂದೆಂದು ಅಮರ॥

ಭೂಮಾತೆಗೂ ಇಂದ್ ನೆಮ್ಮದಿನೆ ಇರದಾಗಿ
ಕಣ್ಣೀರ್ ಸುರಿಸಿದೆ ಮೊನಷ್ಯರನೆ ಕಂಡ್।
ತನ್ನ ಮಡಿಲ್‌ಗೆ ಜನಂಗ ಕೊಡುವಂತ ಬೇನೆಗಳ
ಸಹಿಸಿಕಂಡ್‌ದ್ ಉಟ್ಟು ಅದರೆಲ್ಲ ಉಂಡ್॥

ಪಂಚಭೂತಗ ಎಲ್ಲ ಕಲುಷಿತವಾಗಿಂದ್
ಕಲಿಯುಗ ಮುಗಿಯಲಿ ಬೇಗ ಹೇಳುತೊಳೊ ಇಂದ್।
ನವಗ್ರಹಗಳು ಕೂಡ ಮೊನುಷರಾಕೃತ್ಯನ ನೋಡಿ
ಅತಿ ದುಃಖಪಡುತ ಒಳೊ ಅವರ ನಡಕೆಗೆ ಇಂದ್॥

ಶಾಂತಿ ಕಳಕೊಂಡತ ನವಗ್ರಹಗ ಒಟ್ಟಾಗಿ
ಮೊನುಷನಹಂಕಾರಕೆ ಶಿಕ್ಷೆ ಬೇಗ ಕೊಡಿಕಿರುವೊ।
ಹರಕೆನ ಕುರಿಗಳಂತಾಗಿಂದ್ ಜನಂಗೆಲ್ಲ
ಹೇಂಗಪ್ಪ ದೊಡ್ಡವರ ಜೊತೆ ಬೊದ್‌ಕಿ ಇರುವೊ?।

ಕಲಿಯುಗನು ಮುಗಿಯಕ್ಕೆ ಇನ್ನೆಚ್ಚಿ·ಸಮಯಿಲ್ಲೆ
ಬೆರಳೆಣಿಕೆ ವರ್ಷಗಳೆ ಇರುದು ಅಸ್ಟೆ॥
ಭ್ರಷ್ಟರ ಧರ್ಬಾರ್ ಆಡಳಿತ ಕೊನೆ ಆಕೆ
ಕಲ್ಕಿ ದೇವುರೆ ಹುಟ್ಟಿ ಬಂದುಟಸ್ಟೆ॥

ಅರ್ಥವಿಲ್ಲದ ಸ್ವಾರ್ಥ ಮೊನುಷನಹಂಕಾರನ
ಸೃಷ್ಟಿಸಿದ ಆ ದೇವುರು ದಿನಾ ನೋಡುತಿರ್ದು।
ಇನ್ನೆಸ್ಟ್ ದಿನ ಇಂತ ನೀಚ ಕೃತ್ಯನ ಅವನು
ನೋಡಿಕಂಡ್ ಹೇಂಗಪ್ಪ ಸುಮ್ಮನಿರ್ದು॥

ಕಾನೂನು ಎರಡುಟ್ಟು ದೊಡ್ಡವರ ಕೈಯೊಳಗೆ
ಭಕ್ಷಿಸುವವರ ರಕ್ಷಣೆಗೆ ಕಾನೂನು ಒಂದ್।
ಸಣ್ಣ ತೊಪ್ಪಾದರೂ ಬಡಜನರ ಶಿಕ್ಷಿಸುವ
ಸಹಿಸಲಾಗದ ಕಾನೂನು ಉಟ್ಟು ಇನ್ನೊಂದು॥

ಅನ್ಯಾಯಗಳ ಸರಮಾಲೆ ರಕ್ಷಿಸೊವೆ ಮಾಡುತೊಳೊ
ಸತ್ಯ ನ್ಯಾಯಲಿದ್ದರೂ ಬಡವರ ಕಾಪಾಡೊವಿಲ್ಲೆ।
ಸೃಷ್ಠಿನನೆ ಸೃಷ್ಟಿಸಿದ ದೇವನೊಬ್ಬನೆ ಇಂದ್
ನಗು ನಗುತ ನೋಡ್ತುಟ್ಟು ದೊಡ್ಡವರ ಲೀಲೆ॥

ರಕ್ಷಕರೆ ಭಕ್ಷಕರಾಗಿ ಮೆರೆವ ಕಲಿ ಕಾಲ ಇದ್
ಭಗವಂತನೊಬ್ಬನೆ ಅದಕೆಲ್ಲ ಸಾಕ್ಷಿ।
ಇದ್ದದರ ಇದ್ದಾಂಗೆ ಹೇಳಿಕಾಗದೀ ದಿನಲಿ
ಜನಂಗ ಒಳೊ ಅದ್‌ಕೆಲ್ಲ ಮೂಕಸಾಕ್ಷಿ॥

* * * * * *

ಭಯಂಕರ ಬೇಟೆ

ಯಾಗೊಳೊ ಹಿಂದೆ ನಡ್‌ದಂತ ಒಂದ್। ಭೇಟೆನ ವಿಷಯನ ಈಗ।
ದಿನನೂ ನೆನ್‌ಪುಗೆ ಬರುತ್ತನೆ ಉಟ್ಟುಂತ। ಬರ್ದೆ ಬುಟ್ಟೆನ ಬೇಗ॥
ನಾವೆಲ್ಲ ಹುಟ್ಟಿ ಬೆಳ್‌ದದ್ ಹಿಂದೆ। ಊರ್‌ಲಿ ಹಳ್ಳಿನ ಮನೆಲಿ।
ಈಗೊಳು ಹಳ್ಳಿ ಹಾಂಗನೆ ಉಟ್ಟು। ಹೋದರೆ ಕಾಣಕ್ ಅಲ್ಲಿ॥

ಪಟ್ಟಣ ಜೀವನ ನಾವ್‌ಗೆಲ್ಲ ಗೊತ್ತ್‌ಲೆ। ಅಂದ್‌ನ ದಿನಲಿ ಆಗ।
ಹಳ್ಳಿನ ಬುಟ್ಟ್‌ದ್ ಪೇಟೆನ ಜೀವನ। ಗೊತ್ತಾದ್ ನಾವುಗೆ ಈಗ।
ಹಿಂದೊಂದು ನಡ್‌ದ ಭೇಟೆನ ಕಥೆನ। ಹೇಳಿರೆ ನಂಬಿಕಿಲೆ ಬೇಗ।
ಮನಸ್‌ಲಿ ಅದರ ಇಸಿಕೆನು ಆದುಲೆ। ಅದ್‌ಕೆ ಬರ್ದನೆ ಈಗ।

ಕಾಡ್ ಮಾಸತೇಳಿರೆ ಅಂದ್। ನಾವೆಲ್ಲೊವು ಇಸ್ಟ ಪಡೊವು।
ಕೋಳಿ ಹಂದಿ ಮೊನ್‌ನ ಎಲ್ಲ। ಕಂಡಿತ ನಾವೆಲ್ಲ ಬುಡೊವು।
ಸಣ್ಣ ಪ್ರಾಯಲಿ ಆಗಲೆ ನಾವೆಲ್ಲ। ಬೇಟೆಗೆ ಹೋಗುತ್ತಲಿದ್ದೊ।
ಕಾಡ್‌ಲಿ ಹಕ್ಕಿ ಮೊಲಗಳ ಕಂಡರೆ। ಬೇಟೆ ಆಡುತಲಿದ್ದೊ॥

ನಮ್ಮೂರು ಹಳ್ಳಿಲಿ ಎಂಕನು, ಈರನು। ನೆರೆಕರೆಲಿರುವ ಮನೆವು।
ತಿಂಗಳಿಗೊಮ್ಮೆನೊ ಎರಡೊ ಸರ್ತಿ। ಬೇಟೆಗೆ ಹೋಗುತ ಇರುವೊ।
ಹಾಂಗೆನೆ ಒಂದಿನ ಕತ್ತಲಗಿಬ್ಬೊರು। ಭೇಟೆಗೆ ಹೋಗಿದ್ದೊ।
ಕಾಡೊಳಗಾದ ಕಥೆಗಳ ಊರ್‌ಗೆ। ಬಂದವು ಹೇಳಿದ್ದೊ॥

ಕತ್ತಲೆ ಊಟನ ಮುಗಿಸಿದ್ ತಲೆಗೆ। ಲೈಟ್‌ನ ಕಟ್ಟಿ ಹೊರ್ಟಿದ್ದೊ।
ಕೇಪುನ ಬೆಡಿನ ಹೆಗಲಿಗೆ ಇಸಿದ್। ಯಾರಿಗು ಹೇಳದೆ ಹೋಗಿದ್ದೊ।
ಸಣ್ಣ ಕಾಡ್‌ಲಿ ಬೇಟೆನೆ ಬೇಡಂತ। ಆನೆಕಾಡಿಗೆ ಹೋಗಿದ್ದೊ।
ಏಳೊ ಎಂಟೊ ಮೈಲದ್ ದೂರನ। ನಡ್‌ಕಂಡೆ ಕಾಡ್‌ನ ಸೇರಿದ್ದೊ॥

ಎಸ್ಟ್ ದೂರ ಹೋದರು ಕಾಡ್‌ಲಿ। ಬೇಟೆನೆ ಅವುಕೆ ಆತ್‌ಲ್ಲೆ।
ಬೇಟೆನೆ ಆಗದೆ ಅವುಕು ಕೂಡಾ। ಮನೆಗೆನೆ ಬಾಕೆ ಮನ್‌ಸಿಲ್ಲೆ॥
ಕಣ್ಣ್‌ಗೆ ಯಾವ ಜಾತಿನ ಪ್ರಾಣಿನು। ಕಾಂಬಕೆ ಅವುಕೆ ಸಿಕ್ಕಿತ್‌ಲೆ।
ಮನೆಂದ ಕಾಡ್‌ಗೆ ಹೋದಾ ಗಳಿಗೆನು। ಸರಿಯಿಲ್ಲೊ ಅದ್ ಗೊತ್ತ್‌ಲ್ಲೆ॥

ಕಾಡ್‌ಲಿ ನಡ್‌ದ್ ಬೊಚ್ಚಿಟು ಇವುಕೆ। ಕುದ್ದವೆ ಒಂದ್ ಮರದಡಿಗೆ।
ಕಸ್ಟ ಬಂದರು ಹತ್ತಿಕೆ ಆಕಿಲೆ ಮರಕೆ ಕಂಡಿತ ಇಬ್ರೊರಿಗೆ।
ಹತ್ತೆ ನಿಮಿಷ ಆಗುದು ಅಸ್ಟೆ। ಏನೊ ಶಬ್ದ ಬಲ್ಲೆ ಒಳಗೆ।
ಲೈಟ್ ಬುಟ್ಟ್‌ದ್ ನೋಡಿರೆ ದೊಡ್ಡ। ಕಣ್ಣ್‌ಗ ಕಂಡವೆ ಅದರೊಳಗೆ।

ಕುದ್ದಲಿಂದೆದ್ದ್‌ದ್ ಅಲ್ಲಿಯೆ ನೋಡಿರೆ। ನೂರಾರ್ ಕಣ್ಣ್‌ಗ ಅದರೊಳಗೆ।
ಅಯ್ಯೋ ಅದರ ಹೇಳುದು ಹೇಂಗೆ। ಹೆದ್‌ರಿದ್ ಹೇಳಿವೆ ಅವು ನಾವುಗೆ।
ನೋಡಿರೆ ಪ್ರಾಣಿನ ಕಣ್ಣೇ ಅಲ್ಲದ್। ಕೆಂಪು ಕಣ್ಣ್‌ಗೆ ಕಂಡಾಂಗೆ।
ಅಂತಾ ಕಣ್ಣ್‌ಗೆ ಹೊಡ್‌ದರೆ ಗುಂಡ್। ತಾಂಗಟ ಇಲ್ಲೆ ಅದ್ ಹೇಂಗೆ?॥

ಇಬ್ಬರ ಮೈನು ಬೆಗರಿದ್ ಚಂಡಿ। ಹೆದ್‌ರಿ ಬುಟ್ಟೊಳೊ ಅವು ಹಾಂಗೆ।
ಇಬ್ಬರ ತಲೆ ಕೂದಲ್ ಕೂಡಾ। ಹೆದ್‌ರಿದ ನಿತ್ತುಟು ನೆಟ್ಟಂಗೆ॥
ಇಬ್ಬರ ಬಾಯಿಲಿ ಮಾತೆ ಬಾರದೇ ಕಣ್ಣ್‌ಗಂದ್ ಬುಟ್ಟ್‌ದ್ ಬುಟ್ಟಾಂಗೆ।
ಇಬ್ರೊರು ನೆನಿಸೊಳೊ ಇಂತಾ ಕಸ್ಟಲಿ। ಮನೆಗೆ ಇನ್ನ್ ಹೋದೇಂಗೆ?।

ಈರಂಗೆ ಕೇಳ್‌ದೆ ಬಲ್ಲೆನ ಒಳಗೆ। ಮೊನ್‌ಸನೆ ಜೋರಾಗಿ ಮರ್‌ಟಾಂಗೆ।
ಎಂಕಂಗೆ ಕಂಡದೆ ಯಾವುದೊ ಗೂಡೆ। ಹಕ್ಕಲೆಬಾ ಅಂತ ಕರ್ದಾಂಗೆ॥
ಇಬ್ರೊರಿಗಾಗುಟು ಹೆದ್‌ರಿದ್ ಅಲ್ಲಿ। ಕೈಕಾಲ್‌ಗೆರಡೂ ಬಿದ್ದಾಂಗೆ।
ಮನ್‌ಸ್‌ಲಿ ಕೂಡಾ ಆಗುಟು ಅವುಕೆ। ಬೊದ್‌ಕಿ ಇದ್ದರು ಸತ್ತಾಂಗೆ॥

ಆದರು ಓಡಿವೆ ಇಬ್ರೊರು ಈಗ। ಎಲ್ಲಿನು ನೋಡದೆ ಮನೆಕಡೆಗೆ।
ದಾರಿಲಿ ಇದ್ದದ್ದೆ ಮರ ಒಂದದರಲಿ। ಮೊನ್‌ಷನೆ ಒಬ್ಬದ್ ನಿತ್ತಾಂಗೆ॥
ಗಲ ಗಲತೇಳಿ ಮರನನೆ ಆಡ್‌ಸಿದೆ। ಮರನೆ ಮೈಗೆ ಬಿದ್ದಾಂಗೆ।
ವಿಕಾರ ಕಂಡದೆ ಅದರ ದೇಹ। ತಲೆಕೂದಲ್ ಹರಂಡಿದ್ ಬುಟ್ಟಾಂಗೆ॥

ಇಬ್ರೊರು ನೋಡಿವೆ ಅದರಾಕಣ್ಣ್‌ಗ। ದೊಡ್ಡದ್ ಸಣ್ಣದ್ ಆದಾಂಗೆ।
ತಾನೆ ಆಗುತ ಇದ್ದದೆ ಕಣ್ಣ್‌ಗ। ಕೆಂಪುನು ನೀಲಿನು ಕಂಡಾಂಗೆ॥
ಎಣ್ಣೆಲಿ ಬಾಡಿದ್ ಕಿಚ್ಚಿಗೆ ಬಿದ್ದುಟು। ಆಗುಟು ಅವರ ಕಥೆ ಹಾಂಗೆ।
ಇಬ್ರೊರಿಗಾಗುಟು ಬೊದುಕುವ ಆಸೆ। ಮನಸ್‌ಂದ ಅದ್ ಬುಟ್ಟಾಂಗೆ॥

ಅಲ್ಲಿಂದ ಇಬ್ಬೊರು ರಭಸಲಿ ಓಡಿಯೊಳೊ। ನೋಡದೆ ಬಲ್ಲೆ ಮುಳ್ಳೊಳಗೆ।
ಆದರೆ ಪ್ರೇತ ಬಂದುಟು ಹಿಂದೆನೆ। ಇವುಕೆನೆ ಕಾಣದೆ ಜತೆ ಜೊತೆಗೆ॥
ಓಡಿಕನಿಬ್ಬೊರು ಮನ್‌ಸ್‌ಲಿ ನೆನಿಸೊಳೊ। ಅವರ ಊರ್‌ನ ದೇವುರಿಗೆ।
ಆಗಳೆ ಪ್ರೇತನು ಬುಟ್ಟುದು ಹೋಗುಟು। ಗೊತ್ತ್‌ಲೆ ಎಲ್ಲಿಗೆ ಬೇರೆಡೆಗೆ॥

ಇಬ್ಬರಿಗಾಸೆ ಬೇಗನೆ ಹೋಗಿ। ಸೇರಿಕೆ ಅವರ ಮನೆಗಳಿಗೆ।
ಎಲ್ಲಿನು ನೋಡಿರು ದಾರಿನೆ ಇಲ್ಲೆ। ಆದರು ಹೋದವೆ ಅಂದಾಜಿಗೆ॥
ಬೊಚ್ಚಿದ್ ನಡೆಕೆನೆ ಬೊತ್ತದ ಕಸ್ಟಲಿ। ನಡ್‌ಕಂಡ್ ಹೋಕನ ಇಬ್ಬೊರಿಗೆ।
ಕಾಣುತ ಇದ್ದದೆ ಹೊಳೆಬದಿಲಿ ಜನ। ಕಿಚ್ಚಿ ಹೊತ್ತಿಸಿ ಕುದ್ದಾಂಗೆ॥

ಚಳಿಕಾಸಿಕೆ ಮೊನ್‌ಷರ್ ಕುದ್ದೊಳೊತೇಳಿ। ಹೋದರೆ ಸಂಗತಿ ಬೇರಲ್ಲಿ।
ಮೊನುಷರು ಇಲ್ಲೆ ನೀರೂಹರಿದುಲೆ। ತುಂಬಿದ ಮರಗಳ ಕಾಡಲ್ಲಿ॥
ಚಳಿ ಜರ ಬಂದದ್ ಒಬ್ಬನೊಬ್ಬ। ತೊಬ್ಬಿಕಂಡ್ ಕುದ್ದವೆ ಅವು ಅಲ್ಲಿ॥
ಎಂತದ್ ಹೇಳುದು ಯಾರಿಗೆ ಹೇಳುದು। ಬೇರೆವು ಯಾರ್ ಒಳೊ ಅಲ್ಲಿ॥

ಇಬ್ಬೊರು ತೊಬ್ಬಿದ್ ಕುದ್ದದ್ ಹೊರತು। ಬೇರೇನು ಗೊತ್ತ್‌ಲೆ ಅವುಕಲ್ಲಿ।
ಸೊಯೆನೆ ತೊಪ್ಪಿದ್ ಬಿದ್ದೋದ ವಿಷಯ। ಕಂಡಿತ ಗೊತ್ತಾದು ಹೇಂಗಲ್ಲಿ॥
ತಲೆಗೆ ಕಟ್ಟಿದ ಲೈಟ್‌ನ ಬಲುಬುನು। ಒಡ್‌ದೆ ಹೋಗುಟು ಬಿದ್ದಲ್ಲಿ।
ಬೋಧನೆ ತೊಪ್ಪಿದ್ ಒಳ್ಳದೆ ಆತ್। ಕಂಡಿತ ಅವುಕೆ ಕುದ್ದಲ್ಲಿ॥

ಬೊಳುಪುಗೆ ಎಸ್ಟೊ ಹೊತ್ತ್‌ಗೆ ಎಚ್ಚರ। ಅಗಿದ್ ನೋಡಿರೆ ಅವುಕಲ್ಲಿ।
ನೆತ್ತಿ ಮೇಲೆನೆ ಸೂರ್ಯನು ಕಂಡದ್। ಆಶ್ಚರ್ಯ ಆಗುಟು ಅವುಕಲ್ಲಿ॥
ಅಂತು ಮಧ್ಯಾನ ಕಾಡ್‌ಂದ ಮನೆಗೆ। ಇಬ್ಬೊರು ಬಂದವೆ ಅಂದಲ್ಲಿ।
ಇನ್ನವು ರಾತ್ರಿ ಬೇಟೆಗೆ ಹೋಕಿಲೆ। ಗ್ರಹಿಸೊಳೆ ಹಾಂಗೆ ನಾನಿಲ್ಲಿ॥

* * * * * *

ನಾಟಿ ಮಾಡೊಮೊ

ನಾಟಿ ಮಾಡೊಮೊ ನಾವು। ನೇಜಿ ನೆಡೊಮೊ।
ಬೆಳೆಲಾಯಕ್ ಬರ್ಲಿಂತೇಳಿ। ಕೈ ಮುಗಿಯೊಮೊ।
ಹೂಡುತೊಳೊ ಕೆಸರ್‌ಗದ್ದೆ। ರೈತರಿಗೆ ಇಲ್ಲೆ ನಿದ್ದೆ।
ನಾಟಿ ಕೆಲ್ಸ ಮುಗಿವವರೆಗೆ ದಿನನು ಹೀಂಗೆನೆ॥

ಬುಡದೆ ಮಳೆ ಬರ್ತಉಟ್ಟು। ಮೇಲೆ ನೋಡ್ರೆ ಗುಡ್ಗ್‌ತುಟ್ಟು।
ಕೆಸರ್‌ಗದ್ದೆ ಒಳೆಗೆ ಜನಂಗ। ನೇಜಿ ನೆಡುತೊಳೊ।
ಹೆಣ್ಣ್‌ಗಂಡ್ ಜತೆಗೆ ಕೂಡಿ। ನೇಜಿ ನೆಡುವ ರಭಸ ನೋಡಿ।
ಅಜ್ಜಿ ಕೆಲ್ಸ ನೇಜಿ ನೆಡುತ। ಹಾಡ್ ಹಾಡ್ತೊಳೊ॥

ನಾಟಿ ಕೆಲ್ಸ ಮಾಡ್ವ ಸಮಯ। ಪೇಟೆಲಿರುವ ಹಳ್ಳಿ ಜನಂಗ।
ಅವರ ಮನೆ ಕೆಲ್ಸಂತೇಳಿ। ಊರ್‌ಗೆ ಬಂದವೆ।
ನಾಟಿ ಕೆಲ್ಸ ಮಾಡಿ ಮತ್ತೆ ಬೇರೆ ಕೆಲ್ಸ ಇಲ್ಲೆಂತೇಳಿ
ಬಂದ ಮಕ್ಕ ಮತ್ತೆ ಪೇಟೆ ಚಾಕ್ರಿಗೋದವೆ॥

ಸೊಂಟ ಬೊಗ್ಗಿದುಡಿವ ಕೆಲ್ಸ। ಅದರ್ಲಿ ಉಟ್ಟು ಬಾಳ ಭವಿಷ್ಯ।
ಹಳ್ಳಿ ಬಾಳ್‌ಂತೇಳ್ವೆ ಅದರ। ಸುಖನೆ ಬೇರೆನೆ।
ಮೈ ಕೈ ಕೆಸರ್ ಆದರೇನ್। ಬಾಯಿಗೆ ಮೊಸರ್ ಹಾಲು ಜೇನು
ಹಳ್ಳಿಂತೇಳ್ದು ಹಳ್ಳಿ ಜನಕೆ। ದೇವಲೋಕನೆ॥

ಇಂದ್ ನಾಟಿ ನಾವ್ಗೊ ಅವು। ನಾಳೆ ನಾಟಿ ಅವುಕೆ ಇವು।
ಗದ್ದೆ ಇರುವ ನಾಡ್ ಜನಂಗ। ಮಾಡ್ದು ಹೀಂಗೆನೆ।
ಅದ್ಲ್ ಬದಲ್ ಮಾಡಿಕಂಡ್। ಹಳ್ಳಿರೈತರೆಲ್ಲ ಗದ್ದೆ
ನಾಟಿಕೆಲ್ಸ ನಾಡ್ ಜನಂಗ। ಮಾಡ್ದು ಹೀಂಗೆನೆ।

ಹಳ್ಳಿ ಕೆಲ್ಸ ಮಾಡಿಕಿಂದ್। ಜನಂಗ ಯಾರು ಸಿಕ್ಕುದುಲ್ಲೆ।
ನಾಡ್‌ಲಿಂದ್ ನಮ್ಮ ಕೆಲ್ಸ। ನಾವೆ ಮಾಡೊಕು।
ಹಳ್ಳಿಲಿರ್ದು ಒಗ್ಗಟ್ಟ್। ಅದೇ ಹಳ್ಳಿ ಜನರಗುಟ್ಟ್।
ಯಾಕೆ ನಾವು ಬೇರೆವುಕೆಲ್ಲ। ದಮ್ಮಯ ಹಾಕೂಕು?॥

ನಾಟಿ ಕೆಲ್ಸ ಮುಗ್ಧಮೇಲೆ। ಸೂಟ್ ಬೂಟ್ ಹಾಕಿಕಂಡ್।
ಪೇಟೆಗೋಗಿ ಹಳ್ಳಿ ಜನರ। ಗತ್ ನೋಡೊಕು।
ಹಸಿರ್ ಊರ್‌ಲಿರುವ ನಮ್ಮ। ಕೆಸರ್ ಗದ್ದೆ ಕೆಲ್ಸ ಮಾಡ್ರೆ
ಉಸಿರ್ ಕಟ್ಟಿದಾಂಗೆ ಆದೆ। ಮಾಡಿ ನೋಡೊಕು॥

* * * * * *

ಅಲ್ಲಿನೂ ಉಟ್ಟು- ಇಲ್ಲಿನೂ ಉಟ್ಟು

ಅಲ್ಲಿ ದೇವರು ಉಟ್ಟು ಇಲ್ಲಿನೂ ಉಟ್ಟು,
ಈ ವಿಶ್ವದೊಳಗೆ ಅವ ಎಲ್ಲಿಲ್ಲಿ ಉಟ್ಟು॥
ದೇವಸ್ಥಾನದ ಒಳಗೆ ಮಾತ್ರನೆ ಅಲ್ಲ,
ಅವಂದೆ ಈ ಲೋಕ ಇದ್ ಅವಂದೆನೆ ಎಲ್ಲ॥

ಮಂದಿರಲೆ ನಾವವನ ಪೂಜಿಸೊಕುಂತಿಲ್ಲೆ
ಎಲ್ಲಿ ಇದ್ದರು ಇರ್ದು ಅವಂದೆನೆ ಲೀಲೆ
ಅವನ ಕಾಂಬಕೆ ದೂರ ನಾವ್ ಹೋಕುಂತಿಲ್ಲೆ,
ನಿತ್ತಲೆ ನೀ ಬೇಡ್ ಅವ ಇರ್ದು ಅಲ್ಲೆ।

ದೇವುರಲಿ ನಂಬಿಕೆ ಇರೊಕುಂತ ಹೇಳಿ,
ದೇವುರಲಿ ಭಯ ಭಕ್ತಿ ಬರಲಿಂತ ಹೇಳಿ
ದೇವುರ್‌ಗೆ ಅಂಜಿ ಜನ ಬೊದೊಕುಂತೇಳಿ,
ದೇವರ ಗುಡಿಂತೇಳಿ ಮಾಡಿಯೊಳೊ ನೋಡಿ॥

ಒಬ್ಬರ ಎಲ್ಲರ ಅನುಕೂಲಕಾಗಿ,
ಗುಡಿ ಇದ್ದರೆ ಅಲ್ಲಿ ಜನ ಎಲ್ಲ ಹೋಗಿ,
ಪೂಜೆ ಪುರಸ್ಕಾರಗಳ ಒಂದ್ ಕಡೆ ಮಾಡಿ,
ಜನಬಾಕೆ ಗುಡಿಗಳ ಮಾಡುತೊಳೊ ಕೇಳಿ॥

ದೇವಸ್ಥಾನದ ಒಳಗೆ ದೇವುರವ ಇರ್ದು॥
ಎಸ್ಟೊ ಜನಕೆಲ್ಲ ಅದ್ ಹೀಂಗೆ ಗೊತ್ತಿರ್ದು।
ಎಲ್ಲಿ ನಾವ್ ಪೂಜಿಸಿರು ಅವ ಅದರ ನೋಡ್ದೆ।
ಎಲ್ಲಿ ಮೊರೆಯಿಟ್ಟರು ಅವಂಗೆ ಅದ್ ಕೇಳ್ಟೆ ॥

ಊರ್ ಜನಂಗೆಲ್ಲವೂ ಒಟ್ಟಾಗಿ ಕೂಡಿ,
ಜನರ ನಂಬಿಕೆಗಾಗಿ ಗುಡಿಯೊಂದು ಮಾಡಿ।
ಕಲ್ಲ್ ದೇವುರ ಅಲ್ಲಿ ಸ್ಥಾಪನೆಮಾಡಿ।
ಪೂಜಿಸುವೊ ಊರ್‌ಜನ ಒಟ್ಟಾಗಿ ಕೂಡಿ॥

ಮಡಿಯುಟ್ಟ್ ಮಂದಿರಕೆ ಜನ ಎಲ್ಲ ಬಂದ್।
ಹಣ್ಣ್‌ಕಾಯಿ ಫಲಪುಷ್ಪ ದೇವುರ್‌ಗೆ ತಂದ್।
ನೈವೇದ್ಯ ಮಾಡಿರೆನ ಜನಕಿರ್ದು ತೃಪ್ತಿ.
ಅದರಿಂದಲೆ ಜನರ ಮನಕೆ ಆದೆ ಸಂತೃಪ್ತಿ॥

ನಾವ್ ಕಟ್ಟಿದಾ ಗುಡಿಲಿ ದೇವುರ್‌ಗೆ ಶಕ್ತಿ,
ಉಟ್ಟುಂತ ಜನ ತಿಳ್‌ದ್ ಗುಡಿತೇಳ್ರೆ ಭಕ್ತಿ।
ತೊಪ್ಪು ಮಾಡಿರೆ ಜನಂಗ ಹರಿಕೆಗಳ ಹೊತ್ತ್,
ಅರಿಕೆ ಮಾಡುವ ವಿಷಯ ಎಲ್ಲವುಕು ಗೊತ್ತ್॥

ಮನಿಸಿಗೆ ಆಗದಾ ಪಾಪ ಕರ್ಮಗಳ ಮಾಡಿ
ಎಷ್ಟೊ ಜನ ದೇವುರ್‌ಗೆ ಕೈ ಮುಗ್ದ್ ಬೇಡಿ।
ನಾ ಮಾಡ್ದ ಪಾಪಗಳ ಎಲ್ಲ ನೀ ಕ್ಷಮಿಸಿ
ಬೇಡಿವೆ ಹೀಂಗೆ ಜನ ಕಣ್ಣೀರ ಸುರಿಸಿ।

ದೇವುರ್‌ಗೆ ಬೇಕಿರ್ದು ಹೃದಯದಾ ಭಕ್ತಿ,
ತಿಂಡಿ ನೈವೇದ್ಯಕೆ ಅವಂಗಾದುಲೆ ತೃಪ್ತಿ।
ನಮ್ಮ ಅವಗುಣಗಳ ಸುರ್‌ಗೆ ಸರಿಮಾಡಿ,
ಮತ್ತೆ ಭಕ್ತಿನ ಸುರಿಸಿ ದೇವುರಲಿ ಬೇಡಿ॥

ತನ್ನದಲ್ಲದ ದುಡ್ಡ್ ಅದರ ಕೂಡಿ ಹಾಕಿ,
ಲಕ್ಷಗಟ್ಟಲೆ ಅದರ ಹುಂಡಿಗೆ ಹಾಕಿ॥
ಮೋಸದ ದುಡ್ಡ್‌ನ ದೇವುgೆಂತ ಚೆಲ್ಲಿ,
ಬಂದರೂ ದೇವುರವ ಮನ್ನಿಸುದೊ ಇಲ್ಲಿ॥

ದೇವುರು ಏನೊಂದು ಕೇಳಟನೆ ಇಲ್ಲೆ,
ದುಡ್ಡ್ ಎಸ್ಟಾದರೂ ಕೊಡೊಕುಂತ ಇಲ್ಲೆ।
ಈ ಲೋಕವೆಂಬುದೆ ದೇವುರ ಜಾಗ।
ಅದರೊಳಗೆ ನಾವ್ಗೆಲ್ಲ ಕೊಟ್ಟುಟವ ಜಾಗ।

ನಾ ಮಾಡ್ದ್ ನನ್ನದಿದ್ ಹಿಂಗೇಳಿವೆ ಜನಂಗ।
ದೇವುರು ಕೊಟ್ಟದಿದ್‌ತೇಳಿಕೆ ಅವುಕೆಲ್ಲ ಭಂಗ
ಸುಖ ಬಯಸಿ ಬಂದವೆ ಜನ ಮುಂದೆ ಮುಂದೆ,
ಮಾಡಿದಾ ಕರ್ಮಗ ಇರ್ದು ಬೆನ್ನ್ ಹಿಂದೆ॥

ಅರಿಷಡ್ ವರ್ಗಗಳ ಜನ ಎಲ್ಲ ಬುಟ್ಟ್,
ನ್ಯಾಯ ಸತ್ಯನ ಜನಂಗ ಮನ್ನೊಳಗೆ ಇಟ್ಟ್,
ಮಾಡುವಾ ಕಾರ್ಯ ಅದ್ ಸಾರ್ಥಕನು ಆದೆ,
ಸತ್ತರೂ ಜನರಾತ್ಮ ದೇವುರನೆ ಸೇರ್ದೆ ॥

* * * * * *

ಧ್ಯಾನ

ಧ್ಯಾನ ಮಾಡಿ ಧ್ಯಾನ ಮಾಡಿ। ಧ್ಯಾನ ದಿನನು ಮಾಡೊಕು।
ಧ್ಯಾನ ಮಾಡಿ ಶುದ್ಧ ಮನಸ್। ಅದರ ನೀವು ಪಡಿಯೊಕು।
ಧ್ಯಾನ ಮಾಡಿರೆ ಜನಕೆ ಒಳ್ಳೆದ್। ಅದರ ಜನಂಗ ತಿಳಿಯೊಕು।
ಶಾಂತವಾಗಿ ಮನಸ್ ಇಸುವ। ಕ್ರಮನ ನಾವು ಕಲಿಯೊಕು।

ಮನಸ್ ಒಳಗೆ ಎಸ್ಟೊ ಆಸೆ। ದಿನನು ಬರುತಿದ್ದದೆ।
ಕಂಡ್ ಮುಟ್ಟಿದೆಲ್ಲ ನಾವುಗೆ। ಬೇಕುಂತದ್ ಬಯಸಿದೆ।
ಅದರ ಪಡೆವವರೆಗೆ ಜನರ। ಮನಸ್ ಶಾಂತ ಆಕಿಲೆ।
ಮನಸ್ ಖುಷಿ ಪಡುವವರೆಗು। ಮನಸ್ ಸುಮ್ಮನಿರಿಕಿಲೆ।

ಧ್ಯಾನ ದಿನಾ ಮಡೊಕು ಜನರ। ನಡತೆ ಸರಿಮಾಡಿಕೆ।
ಅವಗುಣಗ ತುಂಬಿ ಇರುವ। ಬೊದ್‌ಕ್ ಅಂದಗೊಳಿಸಿಕೆ।
ಹೊಣೆಯಾರೂ ಅಲ್ಲ ಜನರ। ಮನಸ್ ಅದ್ ಕೆಟ್ಟರೆ।
ಮನಸ್ ಸರಿ ಆದು ಮನಸ್‌ಲಿರುವ ಆಸೆ ಬುಟ್ಟರೆ॥

ಧ್ಯಾನಯೋಗ ಮಾಡಿ ಹರಿವ। ಮನಸ್ ತಡೆ ಹಿಡಿಯೊಕು।
ದೇವರೊಲುಮೆ ಬಯಸಿ। ಅವನ ದಿನಾ ನಾವು ಬೇಡೊಕು॥
ಅದೊಂದೆ ಸತ್ಯದಾರಿ ಜನಕೆ। ನಿಲ್ಲದೆ ಅದರ್ಲಿ ನಡೆಯೊಕು।
ಎಡರು ತೊಡರ್ ಏನೆ ಬಂದರು। ಸಾಗಿ ದಡನ ಸೇರೊಕು॥

ದೇವುರು ಕೊಟ್ಟ ಜೀವ ಇದ್। ಸಾರ್ಥಕ ನಾವ್ ಮಾಡೊಕು।
ದೇವುರು ಮರ್‌ತ್ ಜಂಜಾಟ। ಬಾಳ್ ಸಾಕ್। ಅದರ ತಡಿಯೊಕು॥
ಆರರರಿವು ಇರುವ ಮೊನುಷ। ಎಲ್ಲನು ಒಳ್ಳೆದ್ ಬಯಸೊಕು।
ಧ್ಯಾನ ಮಾಡಿ ಬಯಕೆ ಬುಟ್ಟ್। ಕ್ರೂರ ನಡತೆ ತ್ಯಜಿಸೊಕು॥

* * * * * *

ಮಳೆರಾಯ

ಸುಡುವಾ ಬಿಸ್‌ಲ್‌ಗೆ ಭೂಮಿನ ತಣಿಸಿಕೆ। ಸುರಿಯಲಿ ಮಳೆರಾಯ।
ಕೃಷಿಕನ ಕಸ್ಟನ ನೀಗಿಕೆ ಧರೆಗೆ। ಬರಲಿ ಮಳೆರಾಯ।
ನಾಡ್‌ಲಿ ಕಾಡ್‌ನ ಉಳಿಸಿಕೆ ಬೆಳೆಸಿಕೆ। ಬರೊಕು ಮಳೆರಾಯ।
ದೇಶಕೆ ಬರುವ ಬರಗಾಲನ ನೀಗಿಕೆ। ಬರಲಿ ಮಳೆರಾಯ॥

ನೀರಿಲ್ಲದೆ ಭೂಮಿ ಬರಡಾಗುದು ಕಂಡ್‌ದ್। ಬರಲಿ ಮಳೆರಾಯ।
ನೀರಿಲ್ಲದೆ ಜನರ ದಾಹನ ತಣಿಸಿಕೆ। ಬರೊಕು ಮಳೆರಾಯ॥
ನೀರಿಲ್ಲದೆ ಹರಡುವ ಕಾಯಿಲೆ ಅಳಿಸಿಕ। ಬರಲಿ ಮಳೆರಾಯ।
ನೀರಿಲ್ಲದೆ ಜನರ ಸಂಕಟ ನೀಗಿಕೆ। ಬೀಳಲಿ ಮಳೆರಾಯ॥

ನೀರಿಲ್ಲದೆ ಭೂಮಿಲಿ ಜೀವಿಗ ಇರಿಕಿಲೆ। ಬರಲಿ ಮಳೆರಾಯ।
ಪ್ರಾಣಿಸಂಕುಲ ಜೀವಕೋಟಿಗೆ। ನೀರ್‌ನ ಕೊಡ್ ನೀ ಮಳೆರಾಯ।
ಬಿಸ್‌ಲ್‌ಗೆ ಉರಿವ ಕಾಡ್‌ಗಿಚ್ಚಿನ ತಣಿಸಿಕೆ। ನೀರುಣಿಸ್ ಮಳೆರಾಯ।
ಎಲ್ಲೆಲ್ಲಿನು ತುಂಬಿದ ಕೊಳೆಕೆಸರಳಿಸಿಕೆ। ಬರೊಕು ಮಳೆರಾಯ॥

ಕಾಡ್‌ಗ ಹಸಿರ್‌ಲಿ ಕಂಗೊಳಿಸುತ ಕಾಂಬಕೆ। ಕಾರಣ ಮಳೆರಾಯ।
ಕಾಡ್‌ಲಿ ಮರಗಿಡ ಹೂವುಗ ಅರಳಿ। ಘಮ ಘಮಿಸಲಿ ಮಳೆರಾಯ।
ಬತ್ತಿರುವ ಕೆರೆ ಕುಂಟೆಗ ತುಂಬಲಿ। ಬಂದದ್ ಮಳೆರಾಯ।
ಮಾನವ ನಿರ್ಮಲ ಮನಸ್‌ಲಿ ಇರಿಕೆ। ಸುರಿಯಲಿ ಮಳೆರಾಯ॥

ಕಾಲ ಕಾಲಕೆ ಮಳೆಬೆಳೆ ಆಗಿದ್। ನೆಮ್ಮದಿ ಕೊಡೊಕು ಮಳೆರಾಯ।
ಭೂಮಿ ಬೆಳೆನನೆ ನಂಬಿದ್ ಬೊದ್‌ಕಿವೆ। ಕನಿಕರಿಸ್ ಮಳೆರಾಯ।
ಕುಡಿವಾ ನೀರ್‌ಗೆ ಜನಪರದಾಡುದು। ನೋಡುತೊಳೊನೀ ಮಳೆರಾಯ।
ಮಳೆನೇ ಸುರಿಸ್‌ದ್ ಪ್ರಳಯನ ಮಾತ್ರ। ಭೂಮಿಲಿ ಮಾಡ್ಬಡ ಮಳೆರಾಯ॥

* * * * * *

ಕುದ್ಕನ ಬೀಲ ಕಡ್ತ್ ಅಜ್ಜಿ

ಹಳ್ಳಿಲಿ ಒಂದ್ ಮನೆಲಿ ಅಜ್ಜಿ ಕೋಳಿ ಸಾಂಕ್ತಿತ್॥
ಕೋಳಿಗಳ ಮಾರಿದ್ ಅಜ್ಜಿನ ಜೀವನ ಪೊರ್ಲುಲಿ ನಡೆತ್ತಿತ್॥
ಕೋಳಿಗ ಎಂಟ್ ಹತ್ತೇನಲ್ಲ ನೂರರ ಮೇಲಿತ್॥
ಅಜ್ಜಿ ಒಬ್ಬಳೆ ಮನೆಲಿ ಇದ್ದ್‌ದ್ ಜೀವನ ಮಾಡ್ತಿತ್॥

ಅಜ್ಜಿನ ಮನೆಲಿ ಅಜ್ಜಿ ಒಂದ್ ನಾಯಿ ಸಾಕಿತ್।
ಯಾರೆ ಮನೆಗೆ ಹೋದರು ನಾಯಿ ಕಚ್ಚೆಕೆ ಬರ್ತಿತ್।
ಬಂದವುಕೆ ನಾಯಿ ಕಚ್ಚಿದೇಂತ ಅಜ್ಜಿ ಕಟ್ಟಿ ಹಾಕ್ತಿತ್।
ಕಟ್ಯಾಕಿದ ತೊಪ್ಪಿಗೆ ನಾಯಿ ಬೊಗ್ಳದ್ ಸುಮ್ಮನೆ ಇರ್ತಿತ್॥

ಅಜ್ಜಿಗೆ ಹಂಚಿ ಹಾಕಿದ ಒಂದ್ ಹಳೆ ಮನೆಯಿತ್।
ಅಜ್ಜಿಗೆ ಹಿತ್ತಲ್ ಜಾಗೆನು ಎರಡ್ ಎಕ್ರೆಂದ ಮೇಲಿತ್॥
ಅಜ್ಜಿಗೆಕಸ್ಟ ಬಂದರೆ ದೂರಲಿ ಮನೆನೂ ಒಂದಿತ್।
ಹಾಂಗಾಗಿ ಅಜ್ಜಿ ಅವಳ ಊರ್‌ಲಿ ಬಾರಿ ಸುಖಲಿತ್॥ ಹ॥

ಪ್ರಾಯನು ಅಜ್ಜಿಗೆ ಕಮ್ಮಿ ಇಲ್ಲೆ ಅರವತ್ತರ ಮೇಲಿತ್।
ಅಜ್ಜಿ ಕೋಳಿಗಳೊಟ್ಟಿಗೆ ಇದ್ದ್ ಲ್ಯಾಕ್‌ಲಿ ನೋಡ್ತಿತ್॥
ಅಜ್ಜಿನ ಹೇಂಟೆಗ ಕೆಲವು ಕಾಪುಲಿ ಮೊಟ್ಟೆ ಇಸ್ತಿತ್।
ಪಿಳ್ಳೆಗೆ ಆಗುವವರೆಗೂ ಮೊಟ್ಟೆನ ಹಾಂಗೆನೆ ಬುಡ್ತಿತ್॥

ಕಕ್ಕೆನ ಗಿಡಿಂಜನ ಕಾವಲುಕಾಯಕೆ ಅಜ್ಜಿಗೆ ಕಸ್ಟಿತ್।
ಅತ್ತಿಂದಿತ್ತ ಇತಂದತ್ತ ಕಕ್ಕೆಗ ಹಾರಾಡ್‌ತಿರ್ತಿತ್।
ಪಿಳ್ಳೆನ ಹೊತ್ತುಕೊಂಡ್ ಹೋದುಂತ ಅಜ್ಜಿಗೆ ಹೆದ್‌ರಿಕೆನೂ ಇತ್।
ಹಾಂಗಾಗಿ ಪಿಳ್ಳೆಗಳ ಯಾಗೋಳು ಅಜ್ಜಿ ಬರ್ಜಿಲಿ ಮುಚ್ಚ್‌ತ್ತಿತ್॥

ಅಜ್ಜಿನ ಮನೆನ ಕಾಲಿ ಜಾಗಲಿ ಕಾಡುನು ಬೆಳ್‌ದಿತ್।
ಅದರ ಒಳಗೆ ಕುದ್‌ಕಂಗ ಕೆಲವು ಬಂದ್ ಸೇರಿತ್।
ಅಜ್ಜಿನ ಕೋಳಿಗ ಒಂದೊಂದಾಗಿ ಕಾಣೆ ಆಗ್ತಿತ್।
ಕಟ್ಟಿ ಹಾಕಿ ನಾಯಿನ ಸಾಂಕಿದಕೆ ತೊಂದರೆ ಕಾದಿತ್।

ಅಜ್ಜಿ ಒಂದಿನ ಕೋಳಿಗಳೊಟ್ಟು ಲೆಕ್ಕ ಹಾಕಿತ್ತ್।
ನೂರರ ಮೇಲೆನೆ ಇದ್ದ ಕೊಳಿಲಿ ತುಂಬಾ ಕಮ್ಮಿತ್ತ್।
ಯಾರಿಗೆ ಹೇಳಲಿ ಅಜ್ಜಿನ ಕೋಪ ಹೇಳಿಕೆನೆ ಬೊತ್ತ್।
ಕೋಳಿನ ಕದ್ದೊಳೊ ತೇಳಿದ್ ಗ್ರಹಿಸಿ ಶಾಪ ಹಾಕ್‌ತಿತ್ತ್॥

ಅಜ್ಜಿನೆ ಒಂದಿನ ಕುದ್ಕಕೋಳಿನ ಹೊರುದರ ನೋಡಿತ್ತ್।
ಹಾಂಗಾಗಿ ಅಜ್ಜಿ ಬಾರಿ ಒಂದ್ ಉಪಾಯ ಹುಡ್‌ಕಿತ್ತ್।
ಕೈಲೊಂದು ಕತ್ತಿ ಹಿಡ್‌ಕಂಡ್ ಅಜ್ಜಿ ಗೂಡೊಳಗಡೆ ಮೊಲ್‌ಗ್‌ತಿತ್ತ್।
ಎರಡೂ ಮೂರ್‌ದಿನ ಅಜ್ಜಿ ಮೊಲ್‌ಗಿದ್ ಕಾದ್ ಕುದ್ದಿತ್ತ್॥

ಯಾಗೊಳು ಕೋಳಿನ ಗಂಟಲ್ ಹಿಡಿವ ಅಭ್ಯಾಸ ನರಿಗಿತ್ತ್।
ಅಜ್ಜಿ ಮೊಲ್‌ಗಿದ ಕಡೇದಿನ ಕುದ್ಕ ಗೂಡಕ್ಕಲೆ ಬಂದಿತ್ತ್।
ಅತ್ತ ಇತ್ತ ಸುತ್ತೊಳು ನೋಡಿದ್ ಕುದ್ಕ ಗೂಡೊಳಗೆ ನುಗ್ಗಿತ್ತ್।
ಕುದ್‌ಕ ಕೋಳಿನ ಹಿಡಿಯಕೆ ಅಜ್ಜಿನ ಮೇಲೆನೆ ಕುದ್ದತ್ತ್।

ಕುದ್ಕ ಅಜ್ಜಿನ ಮೇಲೆನೆ ಕುದ್ದದ್ ಅಜ್ಜಿಗೆ ಗೊತ್ತಾತ್।
ಹರಿತದ ಕತ್ತಿನ ಎತ್ತಿದ್ ಕುದ್ಕನ ಬೀಲಕೆ ಕಡ್ಡಿತ್ತ್।
ಹುಕ್ಕೆ ಹುವ್ವಂತ ಗೂಡ್‌ಂದ ಹೊರಗಡೆ ಕುದ್ಕ ಓಡಿತ್ತ್
ಅಜ್ಜಿ ನೋಡಿರೆ ಕುದ್ಕನ ಬೀಲ ಗೂಡೊಳಗೆ ಬಿದ್ದಿತ್ತ್।

ಅಲ್ಲಿಂದೀಚೆಗೆ ಕುದ್ಕ ಕೋಳಿನ ಕದಿಯಕೆ ಬರಟ್ಟಿಲ್ಲೆ
ಬೇರೆ ಕುದ್ಕಂಗ ಇದರ ನೋಡಿದ್ ಕೋಳಿನ ಕದೆಟಿಲ್ಲೆ।
ಅಜ್ಜಿ ಮಾಡಿದ ಇಂತ ಉಪಾಯ ಯಾರೂ ಮಾಡಿತ್ತಿಲೆ
ಅಜ್ಜಿ ಮಾಡಿದ ಉಪಾಯ ಸುರ್‌ಗೆ ಯಾರೂ ನಂಬಿತ್‌ಲೆ

ಅಜ್ಜಿ ಮಾಡಿದ ಸಾಹಸ ಊರ್‌ಲಿ ಎಲ್ಲವುಕು ಗೊತ್ತಾತ್।
ಸಂಶಯಪಟ್ಟವು ಕೆಲ್ಲವುಕೆ ಅಜ್ಜಿ ಬೀಲನ ತೋರ್‌ಸಿತ್ತ್।
ಈಗ ಅಜ್ಜಿನ ಕೋಳಿನ ತಕಂಬಕೆ ಗಿರಾಕಿ ಹೆಚ್ಚಾತ್॥
ಕುದ್ಕನ ಕೊಂದ ಅಜ್ಜಿಂತ ಊರ್‌ಲಿ ದೊಡ್ಡ ಹೆಸರಾತ್॥

* * * * * *

ಯಾರ್ ಒಳ್ಳೊವು ಯಾರ್ ಕೆಟ್ಟವು?

ಯಾರ್ ಒಳ್ಳೊವು। ಯಾರ್ ಕೆಟ್ಟವು। ಯಾರಿಗೂ ಅದ್ ಗೊತ್ತ್‌ಲೆ।
ಯಾರ್ ಮೋಸನೊ। ಯಾರ್ ಸಾಚನೊ। ಯಾರ್ ನೀಚನೊ ಗೊತ್ತ್‌ಲೆ।
ಯಾರ್ ನೆಗಾಡಿವೆ ಯಾರ್ ಅತ್ತವೆ ಯಾಕೆತೇಳುದು ಗೊತ್ತ್‌ಲೆ।
ಯಾರ್ ಹೊಗಳಿವೆ ಯಾರ್ ದೂರಿವೆ ಅವರ ಗುಟ್ಟುನು ಗೊತ್ತ್‌ಲೆ॥

ಯಾರ ಮನಸ್‌ಲಿ ಏನು ಉಟ್ಟೊ ಯಾರಿಗೂ ಅದ್ ತಿಳಿಕಿಲೆ।
ಯಾವ ಹುತ್ತಲಿ ಎಂತ ಹಾವು ಉಟ್ಟುತೇಳಿಕೆ ಆಕಿಲೆ॥
ಯಾರ್ ಒಳಗೆನೆ ಕೇಡ್ ತುಂಬಿಸಿ ಸಭ್ಯರಾಂಗೆನೆ ಇದ್ದವೆ।
ಎದ್‌ರ್ ಮೆತ್ತಂಗೆ ಇದ್ದ್ ಹಿಂದೆಂದ ಚೂರಿ ಬೆನ್ನ್‌ಗೆ ಹಾಕಿವೆ॥

ಕೆಲವು ಸೂತ್ರದಾರರಾಗಿ ಪೆದ್ದನಾಂಗೆನೆ ಅವು ಇದ್ದವೆ।
ಅವುಕೆ ಇವುಕೆನು ಚಾಡಿ ಹೇಳಿದ್ ಬೇರೆವರ ಎತ್ತಿಕಟ್ಟಿವೆ।
ಹೆಚ್ಚಿನ ಮನೆಗಳಲಿ ಅಂತವು ನೋಡಿಕೋದರೆ ಇದ್ದವೆ।
ಯಾರ ಎದ್‌ರ್‌ಗು ಏನು ಹೇಳದೆ ವಿಷಯ ಆಲಿಸ್‌ತಿದ್ದವೆ॥

ಅಣ್ಣ ತಮ್ಮನ ತಮ್ಮ ಅಣ್ಣನ ನಂಬಿಕಾಗದ ದಿನ ಇದ್।
ಅಕ್ಕ ತಂಗೆನ ತಂಗೆ ಅಕ್ಕನ ದೂರ ಇಡುವ ಸಮಯಿದ್।
ಮನೆನ ಮಕ್ಕಳೆ ಹೆತ್ತವರನೆ ಕೊಲ್ಲಿಕಿಂದ್ ಹೋದವೆ।
ಅದರ ಪಾಪಕೆ ಪ್ರಾಯಶ್ಚಿತ್ತನ ಸತ್ತ ಮೇಲೆನು ಕಂಡವೆ।

ಒಂದೆ ಕುಟುಂಬಲಿ ನಂಟ್ರ್‌ಗಳಲಿನು ಜನಕೆ ಇದ್ದವೆ ವೈರಿಗ।
ಬೇರೆ ಹೊರೆಗೆವು ಯಾರೂ ಇರ್ದುಲೆ ಕಂಡಿತವುಕೆ ಶತ್ರುಗ।
ಹುಳುಕು ಕೇಡ್ ಇದ್ದರದರ ಗುಣಪಡಿಸಿಕು ಆಕಿಲೆ।
ರಕ್ತಲೆ ಅದ್ ಬಾವ ಕಾರಣ ಗುಣಪಡಿಸಿರೆನು ಅದ್ ಹೋಕಿಲೆ॥

ಕುಟುಂಬದೊಳಗೆನೆ ನೋಡಿ ನೀವು ಎಸ್ಟೊ ನಡ್ದದೆ ಜಗಳಗ।
ಅವರ ಒಳಗೆನೆ ಎರಡ್ ಪಾರ್ಟಿ ಕಟ್ಟಿ ನಡ್ದದೆ ಕಾಳಗ।
ಜಗಳ ನಡೆಕೆ ಬೇಡ ಕಾರಣ ಚಾಡಿ ಮಾತೆ ಸಾಕದ್।
ನಮ್ಮ ಜನಂಗಳು ಅದ್‌ಕೆ ಸರಿಯೊಳೊ ಏನೆ ಹೇಳಿರು ನಂಬುದು॥

ಎಸ್ಟೆ ಓದಿದ್ ಡಿಗ್ರಿ ಮಾಡಿರು ಏನು ಉಟ್ಟು ಪ್ರಯೋಜನ।
ಹುಳುಕು ನಂಜ್ ಕೇಡ್ ಇದ್ದರೆ ಅವುನೂ ನಿಶ್ಪ್ರಯೋಜನ।
ಏನೆ ಚಾಡಿ ಹೇಳಿರದರ ಎದ್‌ರ್ ಎದ್‌ರ್ ಕೇಳೊಕು।
ಅಂತ ಬುದ್ಧಿನೆ ಜನಕೆ ಇಲ್ಲೆ ಯಾಕೆ ಹೇಳ್ದರ ನಂಬೊಕು॥

ಕೇಡ್ ಇರುವ ಜನಕೆ ಹುಟ್ಟುವ ಮಕ್ಕ ಕೂಡ ಅವರಂತವೆ।
ಎಸ್ಟೆ ವಿದ್ಯೆ ರೂಪ ಇದ್ದರು ಮಕ್ಕ ಕೂಡಾ ಅವರಂತವೆ।
ಈ ಊರಿಗೆಲ್ಲ ತಾನೆ ರೌಡೀಂತ ಜನರಿಗ ತಿಳಿಯಕೆ ಬಯಸಿವೆ।
ಕುಡ್‌ಸಿ ಗುಂಪುಲಿ ಹೊಡೆಕೆ ಬಂದವೆ ಒಬ್ಬನಿದ್ದರೆ ಓಡಿವೆ॥

ಜಲಸ್, ಕೇಡ್, ಹುಳುಕುತೇಳುದು ಇರಿಕೆ ಆಗದ್ ಮನುಷಂಗೆ।
ಅದುಟ್ಟುತಾದರೆ ಬೇರೆವರ ಅಲ್ಲ ಕುಟುಂಬನೆ ಅವು ಕೊಂದಾಂಗೆ
ಆದರೂ ಅದ್ ಅವರ ಯೋಗ್ಯತೆ ಏನ್‌ತೇಳುದು ತೋರ್‌ಸಿದೆ।
ಅವುಕೆ ಇದ್ದ ಘನತೆ ಗೌರವ ಜನರ ಮನಸ್‌ಂದ ಅಳ್‌ಸಿದೆ॥

ಕೆಲವು ಹೆಣ್ಣ್‌ಗ ತನ್ನ ಗಂಡನ ತನ್ನ ಕೈಯೊಳಗಿಸಿದ್ದವೆ।
ತನ್ನ ಮಾನ ಮೊರ್ಯಾದಿಗಂಜಿದ್ ಹೆಣ್ಣ್‌ನೊಟ್ಟಿಗೆ ಬಾಳಿವೆ।
ಸ್ವಂತ ಇಚ್ಛೆಂದ ಗಂಡ ಎಂದಿಗು ಏನು ಮಾಡಿಕೆಬೊತ್ತದ್
ಹೆಣ್ಣ್ ಮಾತ್‌ನ ಮೀರಿ ಹೋದರೆ ಅಪಾಯ ಕಟ್ಟಿ ಇಟ್ಟದ್॥

* * * * * *

ಕುಲದೇವುರು.

ಕುಲದೇವುರುನ ನಂಬಿ ನಾವೆಲ್ಲ ಇರೊಮೊ।
ಅವನನ್ನೆ ನಂಬಿಕಂಡ್ ನಾವೆಲ್ಲ ನಡೆಮೊ।
ಅವನ ಅಗಾಧ ಶಕ್ತಿನನೆ ನಾವೆಲ್ಲ ಬೇಡಿ।
ಅವಂಗೆ ಶರಣಾಕು ದುಶ್‌ಚಟನ ದೂಡಿ ॥

ಬೇರೇನು ಬೇಡ್ದುಲೆ ದೇವುರೆ ನಾ ನಿನ್ನ ।
ನಿನ್ನ ಪ್ರೀತಿ, ಕರುಣೆ ಕಾಪಾಡಲಿ ನನ್ನ ॥
ಹರಸ್ ನೀ ಹರಸ್‌ತಿರ್ ಅನುದಿನನು ನಾವ್ಗೆ ।
ನಿನ್ನ ಹೆಸರೇಳಿರೆ ಬಾದು ಚೈತನ್ಯ ।
ನಿನ್ನ ಮಕ್ಕಂತ ತಿಳ್ದ್ ಕೊಡ್ ನಾವ್ಗೆ ಏಳ್ಗೆ ॥

ನಿನ್ನ ಪೂಜಿಸುತ್ತಿರುವ ಜನಕೆ ಕೊಡ್ ಶಕ್ತಿ।
ನಿಂಗಿ ನಮಿಸಿನೆ ಅವುಕೆ ಕೊಡ್ ಮುಂದೆ ಮುಕ್ತಿ।
ನಿನ್ನ ಹೆಸರೇಳಿಕೆ ಬಾದು ಚೈತನ್ಯ।
ನೀ ಹರಸಿರೆ ನಮ್ಮ ಈ ಬಾಳ್ ಧನ್ಯ॥

ಈ ಭೂಮಿ ಈ ಲೋಕ, ನಿನ್ನ ಕೈಲಿರ್ದು ।
ನೀ ನೈದ ಬಲೆ ಒಳಗೆ ಬೇಡ ನಾವ್ ಬೀಳ್ದು ।
ಕಸ್ಟ ಸುಖ ಕೊಟ್ಟಳ ಜನ ಜನಿಸಿಕನೆ ಬರ್ದ್ ॥
ಮುಂದೆ ಸುಖ ಜೀವನನ ಕೊಡ್ ಅವುಕೆ ಕರ್ದ್ ॥

ನೆಪ ಮಾತ್ರಕೆ ನಾವು ಮೊನ್‌ಷರಾಗಿಯೊಳೊ।
ಕಸ್ಟ ನಸ್ಟಗಳೆಸ್ಟೊ ಅನುಭವಿಸುತ ಒಳೊ ॥
ಎಂದ್ ಇಳಿಸಿಯ ನಮ್ಮ ಕರ್ಮದಾ ಹೊರೆನ?।
ಎಂದ್ ಮೇಲೆತ್ತಿಯ ಕೈ ಹಿಡ್ದ್ ನಮ್ಮನ್ನ ?॥

ನಿಸ್ಸಾರವಾಗಿಟ್ಟು ಮೊನ್‌ಷನ ಈ ಬೊದ್‌ಕ್ ।
ತುಂಬಿಸೊಳ ಇದರೊಳಗೆ ನೂರೆಂಟ್‌ಕೆಡ್‌ಕ್ ॥
ಅಂಬಿಗನೆ ನೀನಾಗಿ ನಡೆಸ್ ಈ ದೋಣಿ ॥
ನಿನ್ನ ಕೈಯೊಳಗುಟ್ಟು ಅದರ ಚುಕ್ಕಾಣಿ ॥

ಹಳ್ಳಿ ಜನರ ಹಿರಿಮೆ

ಮಲೆನಾಡ್‌ನ ಜನಗಳಿಗಿರುವಾ ಧೈರ್ಯ
ಕಂಡಿತ ಎಲ್ಲವ್ಕೆ ಇರಿಕಿಲ್ಲೆ।
ಮೆಚ್ಚಿನೆ ನಾನವುಕಿರುವಾ ಧೈರ್ಯನ
ಹೇಳಿನೆ ನಿವುಗೆ ಈಗಿಲ್ಲೆ॥

ಕಾಡ್‌ನ ಮಧ್ಯಲಿ ತೋಟದ ಒಳೆಗೆ
ಮನೆ ಮಾಡಿಕಂಡಿರ್ದು ಅವು ಅಲ್ಲೆ।
ಅವರಾ ಧೈರ್ಯ ಸಾಹಸ ಕಥೆನ
ಹೇಳಿಕೆ ಹೋದರೆ ಮುಗಿಯಕಿಲೆ॥

ಹಳ್ಳಿಲಿ ಶಾಲೆಗ ಅತಿ ದೂರಲಿ ಇರ್ದು
ಸಂಗತಿ ನಿವುಗೆಲ್ಲ ಗೊತ್ತುಟಲೆ।
ಏನೆ ಚಳಿಮಳೆ ಇದ್ದರು ಶಾಲೆಗೆ
ನಡಕಂಡ್ ಹೋಗದೆ ವಿಧಿ ಇಲ್ಲೆ॥

ಹಳ್ಳ ದಿನ್ನೆಗಳ ಹತ್ತಿ ಇಳ್ದ್ ನಡದರು
ಬೊಚ್ಚಟ ಮಾತ್ರ ಅವುಕಿಲ್ಲೆ।
ಪೇಟೆನ ಮಕ್ಕ ಹೀಂಗೆಲ್ಲ ನಡ್‌ದರೆ
ಮೊಲ್‌ಗಿರೆ ಮತ್ತವು ಎದ್ರಿಕಿಲೆ॥

ಗಂಡ್‌ಗ ಮಿಲಿಟರಿಗೋದರೆ ಹೆಣ್ಣ್‌ಗ
ಇದ್ದವೆ ಧೈರ್ಯಲೆ ಅವು ಮನೆಲೆ।
ಎಂತಾ ಧೈರ್ಯದ್ ಎಂತಾ ಮನಸದ್
ಹೆಣ್ಣ್‌ನ ನಾವೆಲ್ಲ ಮೆಚ್ಚೊಕೊಲೆ॥

ಹಗಲ್‌ಲಿ ಅವರ ತೋಟಕೆ ಹೋದರೆ
ಕೆಲಸ ಮಾಡದೆ ಸುಮ್ಮನಿರಿಕಿಲ್ಲೆ।
ಕೆಲಸ ಮುಗಿಸಿದ್ ಬಂದದ್ ಮನೆಗೆ
ಮನೆ ಕೆಲಸ ಮಾಡಿವೆ ಅವು ಕುಸಿಲೆ॥

ಶೀತ ಕೆಮ್ಮು ಜರ ಕಾಯಿಲೆ ಯಾವುದು
ಅವರಕ್ಕಲೆ ಎಂದಿಗು ಸುಳಿಯಕಿಲೆ।
ನಿಜಕೂ ಹೇಳಿನೆ ಎಸ್ಟೊ ಜನಗಿಂದ್
ಆಸ್‌ಪತ್ರೆಗೆಂತವು ಹೋತೇಲೆ॥

ತೋಟಲಿ ಕೆಲ್‌ಸ ಮಾಡದವು ರಾತ್ರಿಗೆ
ಎರಡ್ ಪೆಗ್ಗ್ ಹಾಕದೆ ಮೊಲಿಗಿಕಿಲೆ।
ಮಾಸದ ಗೈಪು ಮಾಡಿರೆ ಆ ದಿನ
ಕುಪ್ಪಿ ಕಾಲಿಯಾದರು ಗೊತ್ತಾದುಲೆ॥

ಎಸ್ಟೆ ಕುಡ್‌ದರು ಆರೋಗ್ಯದ ಮೇಲೆ
ಪರಿಣಾಮ ಕೆಟ್ಟದ್ ಆಕಿಲ್ಲೆ।
ಕಸ್ಟ ಬಿದ್ದವು ಜೀವನ ನಡ್‌ಸಿವೆ
ಪೆಗ್ಗ್ ಹಾಕಿರು ಅದರ್ಲಿ ತೊಪ್ಪಿಲ್ಲೆ॥

ಕಾಡ್‌ಗೆ ಬೇಟೆಗೆ ಹೋದರೆ ನಾಡವು
ಮಿಗಗಳ ತಾರದೆ ಬುಡಿಕಿಲ್ಲೆ।
ಕಾಡಂದಿ ಬೊರಿಕ, ಮೊಲಗಳ ಕಂಡರೆ
ಗುಂಡವು ಹೊಡಿಯದೆ ಇರಿಕಿಲ್ಲೆ॥

ಅಂದ್‌ನ ಕಾಲಲಿ ನಡೆತಿತ್ತ್ ಹಾಂಗೆಂತ
ಇಂದದ್ ಒಂದುನು ನಡಿಯಕಿಲೆ।
ಬೇಟೆಗೂ ಲೈಟಿಗು ಹೋಗಿದ್ ಮಿಗನ
ಕೊಂದರೆ ಮನೆಕಡೆ ಬಾಕಿಲ್ಲೆ॥

ಹಳ್ಳಿಲಿ ನೆಂಟರ ಉಪಚರಿಸಿದಾಂಗೆ
ಬೇರೆವು ಯಾರೂ ಉಪಚರಿಸಿಕಿಲೆ।
ಮಲೆನಾಡನ ಜನಕೆ ಇರುವಾ ಪ್ರೀತಿ
ಊಹಿಸಿಕದರ ಆಕಿಲ್ಲೆ॥

ಮನೆಗೆ ಬಂದವು ಯಾರೆ ಆಗಲಿ
ಸತ್ಕಾರ ಮಾಡದೆ ಬುಡಿಕಿಲ್ಲೆ।
ನಂಟ್ರ್‌ಗೆ ಉಪಚಾರ ಮಾಡುವ ಕ್ರಮನ
ಮಲೆನಾಡ್‌ಗೆ ಹೋಗದೆ ಕಲೆಕಲ್ಲೆ॥

ಅಂದಾ ಚೆಂದಲಿ ದೇಹದ ಕಾಂತಿಲಿ
ನಾಡ್‌ನ ಜನಕೆ ಸಮಯಾರಿಲ್ಲೆ।
ಹೆಣ್ಣ್‌ನ ನಡೆ ನುಡಿ ಮಾತ್‌ಗ ಎಲ್ಲ
ಜನರ ಮನಸೆಳೆದಿರಿಕಿಲ್ಲೆ॥

ಗಟ್ಟಿ ಮುಟ್ಟ್ ಮೈಕಟ್ಟು ಇರ್ದು
ಎದ್‌ರ್ ಮಾತಾಡಿಕೆ ಹೆದ್‌ರ್‌ಕಿಲ್ಲೆ।
ಸುಳ್ಳು ವಂಚನೆ ಮೋಸಗ ಎಲ್ಲಾ
ಅವರ ಹಕ್ಕಲೆ ನಡೆಕಿಲ್ಲೆ॥

ನ್ಯಾಯದ ಜೀವನ ನಡೆಸಿವೆ ನಾಡೊವು
ಯಾರ ಹಂಗುನು ಅವುಕಿಲ್ಲೆ।
ನಂಬಿದ ಕುಲದೇವುರ ಆಶೀರ್ವಾದ
ಇದ್ದರೆ ಯಾಗೋಳು ಹೆದ್‌ರ್‌ಕಿಲ್ಲೆ॥

* * * * * *

ಒಣ್‌ಂಗಿಲ್ ಮೊನ್

ಮಾಪುಳೆ ಹೋದೆ ಒಣಗಿಲ್ ಮೊನ್। ಮಾರಿಕೆ ಎಲ್ಲಾ ಮನೆಗೆ।
ಹಳ್ಳಿಲಿ ಮನೆಗಳ ದಿನ ಎಲ್ಲ ಸುತ್ತಿದೆ। ಜೀವನ ಅದೆ ಅವಂಗೆ।
ಮೊತ್ತಿ ಕುರ್ಚಿ, ಇಟ್ಟಿ ಹೀಂಗೆ। ತರತರ ಮೊನುಟ್ಟು।
ಬೊಂಗುಡೆ ಭೂತಾಯಿ ಬೊಳ್ಳಿಕಾರ್‌ಂತ। ಎಸ್ಟೊ ಹೆಸರುಟ್ಟು।

ಮಾಪುಳೆ ತಿಂಗಳಿಗೊಮ್ಮೆ ಬಂದರೆ। ಗೊತ್ತಾದೆ ಜನಕೆಲ್ಲ।
ಒಣಗಿದ ಮೊನ್‌ನ ವಾಸನೆ ಹಬ್ಬಿದೆ। ಊರೊಳಗೆ ಎಲ್ಲ।
ಮೊನ್ ಮಾರಿಕೆ ಮಾಪುಳೆ ಹಿಂಗೆ। ದಿನ ಎಲ್ಲ ಓಡ್ಯಾಡಿ।
ಕತ್ತಲೆ ಆದರೆ ನಿತ್ತದೆ ಒಂದ್। ಗೊತ್ತಿದ್ದ ಮನೆ ನೋಡಿ।

ಮೊಲ್‌ಗಿಕೆ ಅವಂಗೆ ತಲೆದಿಂಬ್ ಬೇಡ। ಮೊನಿದ್ದ ಗೋಣಿ ಸಾಕ್।
ಅದರ ವಾಸನೆ ಮೂಕ್‌ಗೆ ಅವಂಗೆ। ನಿದ್ದೆ ಮಾಡಿಕೆ ಬೇಕು
ಅಂತ ಸುಖನ ಪಡೆಕುತಾದರೆ। ಮಾಪುಳ್ಳೆ ಆಗಿ ಹುಟ್ಟಿರೊಕು।
ವಾಸನೆ ಮೊನಿಂತ ಬೊಯ್ಯವರೆಲ್ಲ। ಅವನ ಒಟ್ಟಿಗೆ ಮೊಲ್ಲುಗಸೊಕು।

ಒಣಗಿದ ಮೊನ್‌ನ ಹಾಳ್‌ಂತ ತಿಳಿಬಡಿ। ಜನಗೆಸ್ಟೊ ಪಟ್ಟವೆ ಇಸ್ಟ।
ಕೆಂಡಲಿ ಸುಟ್ಟ ಮೊನ್‌ನ ವಾಸನೆ ಬಂದರೆ ಕೆಲವುಕೆ ಕಸ್ಟ।
ತುಂಬಾ ಊಟನ ಮಾಡಿಕೆ ಆದೆ। ಮೊನ್‌ನ ಆ ರುಚಿಗೆ॥
ಎಣ್ಣೆಲಿ ಹೊರ್ದ ಮೊನಿದ್ದರೆ ಅನ್ನ। ಕಾಲಿಯಾದು ಒಂದೆಗಳಿಗೆ।

ಬಿಡ್‌ವಿಲ್ಲದೆ ಕೆಲ್ಸಗ ಹಳ್ಳಿಲಿ ಇದ್ದರೆ। ಗೈಪೆ ಮಾಡಿಕಿಲೆ।
ಸುಟ್ಟಾ ಮೊನ್ ಇದ್ದರೆ ಅವುಕೆ। ಬೇರೇನೂ ಬೇಕುಂತಿಲ್ಲೆ।
ಎಂತಾ ಸಾಂಬಾರ್ ಪಲ್ಯಗ ಇದ್ದರು। ಮೊನ್‌ನ ಎದ್‌ರ್ ಏನಿಲ್ಲೆ।
ಮೊನೊಂದು ಇದ್ದರೆ ಎಂತಾ ಸಮಯಲು। ಊಟಕ್ಕೆ ತೊಂದರೆ ಏನಿಲ್ಲೆ॥

ಹಳ್ಳಿಲಿ ಬೆಸಿಗೆಲಿ ಮೊನೆ ಇರದ। ಬೆಸಿಗೆನು ಹೆಚ್ಚಿಗೆ ಇರಿಕಿಲ್ಲೆ।
ಮಳೆಗಾಲಲಿ ಕೆಲವು ಮೊನ್ ಸುಟ್ಟ್‌ಕಂಡ್। ಉಂಬೊದು ಒಲೆಬುಡಲೆ
ಎಣ್ಣೆಲಿ ಹೊರ್ದ ಮೊನ್‌ನ ಆ ರುಚಿ। ಪೇಟೆವುಕೇನೂ ಗೊತ್ತೇಲೆ।
ಪೇಟೆಲಿ ಮೊನ್ ಹೊರ್ದರೆ ಮೊನ್। ಮೂಕ್‌ಂದ ಕೈ ಅವು ತೆಗೆಕೇಲೆ॥

ಕೊಸಲಕ್ಕಿ ಗಂಜಿಗೆ ಎಣ್ಣೆಲಿ ಹೊರ್ದ। ಮೊತ್ತಿ ಮೀನೆ ಇರೊಕು।
ಹೊಟ್ಟೆ ಒಡಿವಾಂಗೆ ಉಂಬಂತ ಜನರ। ಹಳ್ಳಿಲೆ ನೋಡೊಕ್ಕು।
ಕಾಯಿ ಪೊಜ್ಜಿಗೆ ಮುರ್‌ದಾಕಿ ಮೀನ್‌ನ। ಊಟನ ಮಾಡೊಕ್ಕು॥
ಉಂಡ್‌ದ್ ಗೊರಿಕೆನ ಹೊಡ್‌ಕಂಡ್ ಮೊಲುಗುವ। ಜನರಾ ನೋಡೊಕ್ಕು॥

ಮಾಪುಳೆ ಮೀನ್ ತಂದರೆ ಮನೆಗೆ। ನಾಯಿಗ ಓಡೋಡಿ ಬಂದವೆ।
ಊಟ ಮಾಡವನ ಬಾಯಿನ ನಾಯಿಗ। ನೊಡುತ ಕುದ್ದಿದ್ದವೆ।
ಊಟ ಮಾಡಿಕನ ತಲೆಮುಳ್ಳ್ ಬೀಲನ। ನಾಯಿಗೆ ಹಾಕಿವೆ।
ಏರಿದ ಬೆಲೆಂದಾಗಿ ಯಾವುದುನು ಬುಡದಿಂದ್। ಜನಂಗಳೆ ತಿಂದವೆ॥

ಆಕಡೆ ಮನೆವು ಹೊರ್ದರೆ ಮೀನ್ ಈ ಕಡೆ ಮನೆವುಕೆ ಆಸೆ।
ಮೂಕ್‌ಗೆ ಬೊಡಿವಂತ ವಾಸನೆ ತಡ್ಕಂಡ್। ಹೊಯಿದ್ ತಿಂದವೆದೋಸೆ॥
ಗಂಡಂಗೆ ಹೆಣ್ಣ್ ಮೀನ್‌ತಾಕೆ ಹೇಳುದು। ಗಂಡಂಗು ತಿಂಬಕೆ ಆಸೆ।
ಹಿಂಬತ್ ಗಂಡ ಮೀನ್‌ತಂದ್ ಹೆಣ್ಣ್‌ನ। ನೋಡುದು ತಿರ್‌ಗಿಸಿ ಮೀಸೆ॥

* * * * * *

ಚಾಚ್ ಚಾಚ್ ನೀಪಾಟ್

ಚಾಚ್...ಚಾಚ್ ನೀ ಪಾಟ್। ಅಳು ನಿಲ್ಲಿಸಿ ಬೇಗಕಣ್ ಮುಚ್ಚ್।
ನೀನ್ ಅತ್ತರೆ ಇಲ್ಲಿ ಗುಮ್ಮ ಬಾದು।
ಅಳುವ ಮಕ್ಕಳ ಮಾತ್ರ ತಕಂಡ್ ಹೋದು।
ಹೆದ್ರ್‌ಬಡ ನಾ ಒಳೆ ನಿದ್ದೆ ಮಾಡ್।
ಗುಮ್ಮ ಬಂದರೆ ಅದ್‌ಕೆ ಹೊಡಿವೆ ನೋಡ್॥

ಏ ಗುಮ್ಮ ನೀನಿಲ್ಲಿ ಬಾದು ಬೇಡ।
ನನ್ನ ಕೂಸ್‌ಗೆ ತೊಂದರೆ ಕೊಡುದುಬೇಡ।
ಗುಮ್ಮನೀ ಹೊರಟೋಗ್ ಕಾಡ್ ಒಳಗೆ।
ನನ್ನ ಕೂಸ್ ನಿದ್ದೆ ಮಾಡ್ದೆ ತೊಟಿಗಿಲೊಳಗೆ॥

ಅಳ್‌ಬೇಡ ಬಂಗಾರ ನೀನೀಗ।
ಸುಖ ನಿದ್ದೆ ಮಾಡ್ ನೀ ಬೇಗ।
ದೇವುರ ಪ್ರಸಾದನೆ ನೀನ್ ನಾವುಗೆ।
ನನ್ನ ಪ್ರಾಣನೆ ಕೊಡುವೆ ನಾನ್ ನಿಂಗೆ॥ ಚಾಚ್॥

ನಮ್ಮನೆಗೆ ನೀನೊಂದು ಹುಣ್ಣಿಮೆ ದೀಪ।
ನಿಂಗಿಲ್ಲೆ ಯಾರಲ್ಲು ಏನೊಂದು ಕೋಪ।
ನಿನ್ನ ತೊದಲ್ ಮಾತೆಲ್ಲ ಸ್ವರ್ಗನೆತಾದು।
ನಿನ್ನ ಬಾಳ್ ನೊರೆ ಹಾಲ್ ಜೇನ್‌ನೆ ಆದು॥

ನಿನ್ನಿಂದ ಮನೆ ಕಸ್ಟ ತೊಲಗಿ ಹೋದು।
ಮನೆ ಮಂದಿಗೆಲ್ಲನು ಸಂತೋಷತಾದು॥
ಕಸ್ಟ ಸುಖಗ ಎಲ್ಲ ನಿಂಗೇನ್ ಗೊತ್।
ನೀನೀಗ ದೇವುರು ಕಾಪಾಡ್ವ ಸೊತ್ತ್॥ ಚಾಚ್॥

ಆಕಶಲಿ ಚಂದಿರನ ನಾ ತೋರಸುವೆ।
ಹಾಲನ್ನ ಕಲ್‌ಸಿದ್ ನಾ ಊಡ್ಸುವೆ॥
ಗುಮ್ಮ ಈಗಿಲ್ಲೆ ಅದ್ ಹಾರಿಹೋತ್।
ನೋಡಲ್ಲಿ ನನ್ನ ಕೂಸ್ ನಿದ್ದೆ ಮಾಡ್ತ್॥

ನಿನ್ನಿಂದ ಈ ನಮ್ಮ ಮನೆ ಬೆಳಗಲಿ।
ನಿನ್ನಿಂದ ನಾವ್‌ಗೆಲ್ಲ ಕೀರ್ತಿ ಬರ್‌ಲಿ।
ಗುರು ಹಿರಿಯರ ಆಶೀರ್ವಾದ ನಿಂಗೆ ಇರ್‌ಲಿ
ನಿನ್ನ ಬಾಳ್ ಭವಿಷ್ಯ ಪ್ರಜ್ವಲಿಸಲಿ॥ ಚಾಚ್॥

ತಿಳಿನೀಲಿ ಆಕಾಶ

ತಿಳಿ ನೀಲಿ ಆಕಶಲಿ ಬೆಳ್ಳಿ ಮೋಡಗ ಎಲ್ಲ।
ಬೆಳ್‌ಗುವ ಆ ಪೊರ್ಲು ನೋಡ್ ಒಮ್ಮೆ।
ಅಲ್ಲಿ ಆ ಆಕಶಲಿ ಗುಂಪು ಗುಂಪುಲಿ ಸೇರಿ
ಕಾಂಬಂತ ಆ ನೋಟ ನೋಡ್ ಇನ್ನೊಮ್ಮೆ॥

ಮೇಲೆ ತಾರೆಗಳ ಸೊಬಗ್। ಮಧ್ಯ ಮೋಡದ ಬೆಡಗ್।
ಕೆಳಗಿರುದು ಈ ಭೂಮಿ ಜೀವಿಗಳ ತಾಣ॥
ಅದರ ಅನುಭವ ಸವಿನ ಸವಿನಯತೊಳೊ ನಾವಿಲ್ಲಿ
ಈ ಭೂಮಿ ಒಳಗಿರುವ। ಮೊನುಷ ಜಾಣ॥

ಮೇಲೆ ಮೋಡಗಳ ಮೇಲೆ। ಸುಡುವ ಸೂರ್ಯನ ಕಿರಣ।
ಏನ್ ಶಕ್ತಿನೊ ಇದ್ ಏನ್ ಅದ್ಭುತನೊ॥
ತಾನ್ ತನ್ನನೆ ಸುತ್ತಿ ತನ್ನ ಹೊಂಬಣ್ಣಲಿ
ಈ ಲೋಕನೆ ಬೆಳಗಿಸುದು ಇದ ಏನ್ ಅದ್ಭುತನೊ॥

ಕರಿ ಕತ್ತಲೆನ ಒಳಗೆ ಚಂದ್ರನ ಆಸೆಳೆತ
ಸವಿಯುತೊಳೊ ಜನ ಎಲ್ಲ ಮನಸ್ ಒಳಗೆ॥
ದೇವ್ರ ನಿಯಮನೆ ಬೇರೆ ಮೊನ್‌ಷ್ಯ ಕಲ್ಪನೆಗಿಂತ
ಅದ್ ತಿಳ್‌ದೆ ಜನಂಗ ಒಳೊ ಸೃಟ್ಟಿಯೊಳಗೆ॥

ದೇವುರ್‌ದೆ ಸೃಷ್ಟಿ ಇದ್ ಅವಂದೆನೆ ಕೊಡುಗೆಯಿದ್
ಎಲ್ಲದಕು ಕಾರಣನೆ ಆ ಕರ್ತ ತಾನೆ?।
ಮೊನುಷ ರೂಪನ ಪಡ್‌ದ್ ನಾವೆಲ್ಲ ಅವನಡಿಲಿ
ಬಯಸಿದರ ಪಡಿಯಕೆ ಆದ್ಲೆ ತಾನೆ?।

* * * * * *

ಅರ್ಥಪೂರ್ಣ ಬೊದುಕು

ಅರ್ಥಪೂರ್ಣವಾದ ಬೊದ್‌ಕ್ ಜನಂಗ ನಾವು ಬಯಸೊಕು।
ವ್ಯರ್ಥ ಬೊದ್‌ಕ್ ತಪ್ಪೊ ಸರಿನೊ ಅದರ ಮುಂದೆ ತಿಳಿಯೊಕು॥
ಕಷ್ಟ ಸುಖನೊ ಏನೆ ಇರ್‍ಲಿ ಸಹಿಸಿಕೊಂಡ್ ಬೊದುಕೊಕು।
ಒಳ್ಳೆ ಮನುಷ್ಯನಾಗಿ ನಾವು ಜೀವನನ ಕಳಿಯೊಕು॥

ಮೊನ್‌ಷಗುಣ ಏನ್‌ಂತ ನಾವುಗೆ ಗೊತ್ತೆ ಇರೊಕು।
ಕರುಣೆ ಸಹನೆ ದಯಾಗುಣ ನಮ್ಮಲದ್ ಬೆರಿಯೊಕು।
ಮನಸ್ ಬೇನೆ ಮಾಡುವವರ ಮನಸಾರೆ ಕ್ಷಮಿಸೊಕು।
ಹೃದಯ ತುಂಬಿ ದಾನ ಧರ್ಮ ಮಾಡಿಕಂಡೆ ಇರೊಕು॥

ಸುಳ್ಳ್ ಕಪಟ ವಂಚನೆನ ಬುಟ್ಟ್ ದೂರ ಸರಿಯೊಕು।
ಸತ್ಯದಿಂದ ನಡಿವ ಬೊದ್‌ಕ್ ಅದರ ಕಂಡ್ ಹಿಡಿಯೊಕು।
ಬೇರಯವುಕೆ ಹೊರೆನೆ ಆಗಿ ಯಾಕೆ ಬಾಳ್ ಸವೆಯೊಕು।
ಸಿರಿತನ ಇರುವವರ ಕಂಡ್ ಹರುಷ ಪಡೊಕು॥

ಕಷ್ಟ ಪಡದೆ ಸುಖದ ಬೊದ್‌ಕ್ ಅದರ ಮುಂದೆ ಮರಿಯೊಕು।
ಸತ್ಯ ದಾರಿ ಹುಡುಕಿರುಟ್ಟು ಅದರ ಹುಡುಕಿ ನೋಡೊಕು।
ನಮ್ಮ ಘನತೆ ಕುಂದು ಕೊರತೆ ಅದಕೆ ಅಂಜಿ ಬೊದುಕೊಕು
ನ್ಯಾಯವಂತನಾಗಿ ನಮ್ಮ ಬೊದ್‌ಕ್ ನಾವು ಕಾಣೊಕು॥

ಶುದ್ಧ ಮನಸ್ ಇದ್ದ್ ಎದ್ದ್ ಗದ್ದುಗೆನ ಏರೊಕು।
ಒಳ್ಳೆ ಜನಂಗಳೊಟ್ಟಿಗಿದ್ದ್ ಒಳ್ಳೆದನ್ನೆ ಕಲಿಯೊಕು।
ಮನಸ್ ಶುದ್ಧ ಇದ್ದರವ ಎಂದೂ ಕೆಳಗೆ ಹೋದುಲೆ।
ಅಶುದ್ಧ ಮನಸ್ ಇದ್ದರವ ಎಂದೂ ಮೇಲೆ ಬಾದುಲೆ॥

ಮೊನ್‌ಷ ಬಾಳ್ ಶ್ರೇಷ್ಠ ಅದರ ಸಾರ್ಥಕ ನಾವು ಮಾಡೊಕು
ಒಳ್ಳೆ ಕೆಲ್ಸ ಮಾಡಿ ನಾವು ದೇವುರ ಕರುಣೆ ಪಡಿಯೊಕು
ಜನ್ಮ ಪಡ್ಡ ಮೊನ್‌ಷ ಜೀವ ದೇವುರುಗಂಜಿ ಬೊದುಕೊಕು
ದೇವುರ ಗುಣ ಬಂದ್ ಮುಂದೆ ದೇವುರ ಪಾದ ಸೇರೊಕು॥

* * * * * *

ಬರಲಿ ಹೊಸ ಪಕ್ಷ

ನಾಡೊಳಗೆ ಮೂಡಿ ಬರಲೊಂದು ಹೊಸ ಪಕ್ಷ
ನ್ಯಾಯ ಸತ್ಯಲಿ ನಡಿವ ಜನರಾಡಳಿತ ಪಕ್ಷ।
ಸುಳ್ಳು ವಂಚನೆ ಮೋಸ ಮಾಡದಾ ಪಕ್ಷ।
ನಿರ್ಭೀತಿಯಿಂದ ಜನ ಬೊದುಕುವ ಪಕ್ಷ॥

ಕೊಲೆ ಸುಲಿಗೆ ಎಂದಿಗೂ ಸಹಿಸದಾ ಪಕ್ಷ।
ಗೂಂಡಾಗಿರಿನ ಮೆಟ್ಟಿ ನಿಲ್ಲುವಂತ ಪಕ್ಷ।
ಕಳ್ಳ ಕಾಕರ ಹುಟ್ಟ್ ಅಡಗಿಸುವ ಪಕ್ಷ।
ಕಾನೂನು ಸದುಪಯೋಗ ಮಾಡುವ ಪಕ್ಷ ॥ ನಾಡೊ॥

ಜನರ ಏಳಿಗೆ ಬಯಸಿ ದುಡಿವಂತ ಪಕ್ಷ।
ಬಡ ಜನರ ಹಸಿವೆನ ನೀಗುವ ಪಕ್ಷ।
ನಾಡ್‌ನೇಳ್ಗೆಗಾಗಿ ದುಡಿವಂತ ಪಕ್ಷ।
ಸತ್ಯಲೆ ಜನಸೇವೆ ಮಾಡುವ ಪಕ್ಷ॥

ಕಲಬೆರೆಕೆ ಎಲ್ಲ ತಡೆ ಹಿಡವಂತ ಪಕ್ಷ।
ನಾಡ್‌ಲೆಲ್ಲ ಶಾಂತಿ ಕಲ್ಪಿಸುವ ಪಕ್ಷ।
ಎಲ್ಲೆಡೆನು ಸ್ವಚ್ಛತೆನ ಕಾಪಾಡುವ ಪಕ್ಷ।
ಎಲ್ಲ ಸೌಕರ್ಯ ಹಳ್ಳಿಗೆ ನೀಡುವ ಪಕ್ಷ ॥ನಾಡೊ॥

ಲಂಚ ಆಮಿಶಗಳ ತಡೆಗಟ್ಟುವ ಪಕ್ಷ।
ಲಂಚ ತೆಕಂಡರೆ ಜೈಲ್‌ಗಟ್ಟುವ ಪಕ್ಷ।
ಆಡಳಿತದವುಕೂ ಬುದ್ಧಿ ಕಲ್‌ಸುವ ಪಕ್ಷ।
ಸತ್ಯ ಮಾರ್ಗಲಿ ಜನರ ನಡಸುವ ಪಕ್ಷ॥

ಓಟಿಗೋಸ್ಕರ ನೋಟ್ ಬಯಸದಾ ಪಕ್ಷ।
ಉದ್ಯೋಗ ಎಲ್ಲವುಕು ಕೊಡಿಸುವ ಪಕ್ಷ।
ಜಾತಿ ಭೇದನ ಎಂದೂ ಮಾಡದಾ ಪಕ್ಷ।
ಮೋಸಗಾರರ ಆಸ್ತಿ ಕಬಳಿಸುವ ಪಕ್ಷ ॥ ನಾಡೊ॥

ಅತ್ಯಾಚಾರಕ್ಕೆ ಕಠಿಣ ಸಜೆ ಕೊಡುವಂತ ಪಕ್ಷ।
ಹೆಣ್ಣಿಗೆ ಗೌರವನ ಕೊಡುವಂತ ಪಕ್ಷ।
ನಿರ್ದಯಿಗಳ ಗಲ್ಲಿಗೇರಿಸುವ ಪಕ್ಷ।
ನಿರ್ಮಲ ಮನಸಿರುವ ಆಡಳಿತ ಪಕ್ಷ ॥ ನಾಡೊ॥

ದೇಶದೊಳಗನ್ಯಾಯ ಅಳಿಸುವ ಪಕ್ಷ।
ವಂಚನೆನ ಸಹಿಸದ ಆಡಳಿತ ಪಕ್ಷ।
ದೇವುರುನು ಒಪ್ಪುವ ಅಂತೊಂದು ಪಕ್ಷ।
ದೇವುರಾಶೀರ್ವಾದಲಿ ಬರಲಿ ನಾಡಿಗೊಂದು ಪಕ್ಷ ॥ನಾಡೊ॥

* * * * * *

ಬಡಂವ

ದೇಶಲಿ ದೊಡ್ಡವು ಎಸ್ಟೆ ಇದ್ದರು
ಬಡ ಜನ ಅವುಕೆಂತ ಹೆಚ್ಚಿ ಒಳೊ।
ಬಡವರ ಯಾರುನು ಕೇಳೊವು ಇಲ್ಲದೆ
ಅವರನೆ ಎಲ್ಲವು ತುಳಿಯುತೊಳೊ॥

ದುಡ್ಡ್‌ಲಿ ಬಡತನ ಬಡವಂಗೆ ಇದ್ದರು
ಗುಣಲಿ ಬಡತನ ಅವಂಗಿಲ್ಲೆ।
ಗುಣ ಒಂದಕೆ ಮಾನ್ಯತೆ ಸಿಕ್ಕಿದೆಯಲ್ಲದೆ।
ಬರೆ ದುಡ್ಡ್‌ಗೆ ಮಾನ್ಯತೆ ಸಿಕ್ಕುದುಲೆ॥

ದುಡ್ಡೊಂದಿದ್ದರೆ ದೊಡ್ಡವ ತಿಳಿಬಡಿ
ಒಳ್ಳೆ ಗುಣ ಅವಗಿರ್ದುಲ್ಲೆ॥
ನಯ ವಿನಯ ಗುಣ ಬಡವಂಗೆ ಇದ್ದದೆ
ಹಣವಂತಂಗೆ ಮಾತ್ರ ಅದ್ ಇಲ್ಲೆ॥

ಅಹಂಕಾರತೇಳುದು ಬಡವಂಗೆ ಇಲ್ಲೆ
ಬೊದುಕುದೂ ಅವ ಬಡತನಲೆ॥
ದೊಡ್ಡವನಕ್ಕಲೆ ಹಣ ಎಸ್ಟೊ ಇರುದು।
ಗರ್ವ ಅಹಂಕಾರನ ಅವ ಬುಡಿಕಿಲ್ಲೆ॥

ಹಣ ಒಂದಿದ್ದರೆ ಸಾಲದ್ ಈ ಹಣ
ಖರ್ಚಿ ಮಾಡಿಕೆ ಮನಸ್‌ಲ್ಲೆ।
ಹಣ ಮಾಡುವ ವಿಷಯನ ಒಂದನೆ ಯೋಚಿಸಿ।
ಮೊಲ್‌ಗಿರು ನಿದ್ದೆ ಮಾಡಿಕಿಲೆ॥

ಓದಿರೆ ಬುದ್ಧಿ ಬಂದದೆ ತೇಳುವ।
ಮಾತ್‌ನ ನಾನ್ ನಂಬುದ್‌ಲೆ।
ಓದದ ಜನಂಗಳು ಇಂದೊಳೊ ಎಸ್ಟೊ।
ಅವುಕೆ ಗುಣನಡತೆಲಿ ಸರಿಸಮ ಯಾರಿಲ್ಲೆ॥

ಓದಿರೆ ಲೋಕದ ವಿಷಯನ ತಿಳಿಯಕ್
ಬಡ ಜನಕೆ ಅದ್ ಬೇಕಿಲ್ಲೆ।
ನಾಳೆದ್ ನ್ಯಾಯಲಿ ದುಡಿವಾ ಯೋಚನೆ
ಬುಟ್ಟರೆ ಮನ್‌ಸಿಲಿ ಬೇರಿಲ್ಲೆ॥

ದುಡ್ಡ್‌ನ ಕೂಡ್‌ಸಿ ಇಸುವಾ ಮೊನುಷಂಗೆ
ಚಂಚಲ ಇದ್ದದೆ ಮನಸಲ್ಲೆ।
ದೊಡ್ಡವಂಗು ಬಡವಂಗು ವ್ಯತ್ಯಾಸ ಹುಡ್‌ಕಿರೆ
ಉತ್ತರ ಸಿಕ್ಕಿದೆ ನಿವುಗಿಲ್ಲೆ॥

ದೊಡ್ಡವ ದೊಡ್ಡವರ ಸ್ನೇಹನಗಳುಸುದು
ಬಡವನ ತಂಟೆಗೆ ಹೋಕಿಲ್ಲೆ
ಬಡವಂಗೆ ಬಡವನೆ ಕಸ್ಟಕೆ ಆದು
ದೊಡ್ಡವ ಸಹಾಯ ಮಾಡಿಕಿಲ್ಲೆ॥

ಬೆಳ್ಳಿ ಬಂಗಾರ ದೊಡ್ಡವು ತಕಂಡ್‌ದ್
ಮನೆ ಒಳಗಿಸುವೊ ಭದ್ರತೆಲಿ।
ಉಪಯೋಗ ಮಾಡದೆ ಅದರ ಜನಂಗ
ಮನಯೊಳಗಿಸಿರೆನು ಫಲ ಇಲ್ಲೆ।

ಕಳ್ಳರ ಹೆದ್‌ರಿಕೆ ದೊಡ್ಡಗಿರ್ದು
ಬಡವಂಗೆ ಯೋಚನೆ ಅದ್ ಇಲ್ಲೆ।
ಇರುವ ಒಡವೆನ ಹಾಕಿ ಓಡಾಡಿಕೆ
ಹೆದ್‌ರ್‌ಕೆ ಅವರ ಬುಡಿಕಿಲ್ಲೆ॥

ದೊಡ್ಡೊವು ಬಂಗಾರ ಎಸ್ಟೆನೆ ಮಾಡ್‌ಸಿರು
ಮನಸಿಗೆ ಸಾಕ್‌ತಾಕಿಲ್ಲೆ।
ಚಿನ್ನ ಚಿನ್ನಂತ ಚಿನ್ನಂತ ಹೆಣ್ಣ್‌ಗೆ
ಚಿನ್ನದ ಹುಚ್ಚು ಬುಡಿಕಿಲ್ಲೆ॥

ಹಣವಂತರ್ ತಿಂಬೊದು ಕುಡಿದೂ ಕೂಡಾ
ಹೆಚ್ಚಿಗೆ ಇರ್ದು ಹೋಟೆಲ್‌ಲೆ।
ಬಡವ ಅಂಬೆಲಿ ಗಂಜಿನ ತಿಂದರು
ಆರೋಗ್ಯ ಇರ್ದು ಅವನಲ್ಲೆ।

ದೊಡ್ಡವರಿಗಿರುವ ಕಾಯಿಲೆ ಯಾವುದು
ಬಡವನ ದೇಹಕೆ ಬಾಕೇಲೆ।
ದೊಡ್ಡವ ಕಾಯ್ಲೆಗೆ ಬಲಿಯಾದರೆ ಮತ್ತೆ
ಕಾಯಿಲೆಗ ದೇಹಂದ ಹೋಕಿಲ್ಲೆ॥

ದೊಡ್ಡೊವು ಯಾರಿಗು ದಾನನ ಮಾಡ್ಕಿಲೆ
ಮಾಡುವ ಮನಸೂ ಅವುಕಿಲ್ಲೆ॥
ಯಾರ್ ಯಾರದುಡ್ಡ್‌ನ ಕೊಳ್ಳೆ ಹೊಡ್ದರು
ಬಡ ಜನರಾಕಡೆ ನೋಡಿಕಿಲೆ॥

ಚೆನ್ನದ ಮಂಚಲಿ ಮೊಲ್ಗಿರು ದೊಡ್ಡವ
ಸುಖನಿದ್ದೆನ ಅದರ್ಲಿ ಮಾಡಿಕಿಲ್ಲೆ॥
ಬಡವ ನೆಲಲಿ ಮೊಂದ್ರಿಲಿ ಮೊಲ್‌ಗಿರು
ಕಾಂಬಂತ ಸುಖ ಅದ್ ಯಾರಿಲ್ಲೆ॥

ಕುಟುಂಬದ ಜಗಳ ಹೆಚ್ಚಿಗೆ ನಡಿದು
ದೊಡ್ಡವರ ಮನೆಯೊಳಗಲ್ಲೆ।
ಬಡವಂಗೆ ಹೊಟ್ಟೆ ಬಟ್ಟೆಗಿದ್ದರೆ ಸಾಕ್
ಸುಖಸಂಸಾರ ನಡಿದಲ್ಲೆ॥

ಬಡಜನ ಕಸ್ಟಲಿ ಕೂಡ್‌ಸಿಟ್ಟ ದುಡ್ಡ್
ಸತ್ಯದ ದುಡ್ಡ್ ಇರುದಲ್ಲೆ।
ದೊಡ್ಡವರ ವಿಷಯನ ನಾಯಾಕೆ ಬರಿಯಲಿ
ಎಲ್ಲವುಕೂ ಅದ್ ಗೊತ್ತುಟಲೆ॥

ದೊಡ್ಡವ ಬಡವ ಯಾರೆ ಇರ್‌ಲಿ
ಗುಣ ನಡತೆಗ ಎಲ್ಲನು ಸರಿ ಇರಲಿ॥
ದೊಡ್ಡವ ಬಡವಂತ ಇರಿಕೆ ಬೊತ್ತದ್
ಎಲ್ಲಾ ಜನಂಗ ಸರಿಸಮ ಇರಲಿ॥

* * * * * *

ಮೊನ್‌ನ ನಾಯಿ ತಿಂದುಟ್ಟು

ನಂಟ್ರ್‌ಗೆ ಗೈಪುಗೆ। ಹಸಿಮೊನ್ ತಂದದ್। ನಾಯಿನೆ ತಿಂದುಟ್ಟು।
ಮನೆ ನಾಯಿನು ಇಂದ್। ಎಲ್ಲಿಗು ಹೋಗದೆ। ಮೂಲೆಲಿ ಮೊಲ್‌ಗಿಟ್ಟು॥
ನಂಟರ್‌ಗ ಕತ್ತಲೆಗೆ। ನಿತ್ತವೆ ಗೈಪುಗೆ। ತರಕಾರಿನು ಏನಿಲ್ಲೆ।
ನಡ್‌ಕಂಡೆ ಹೋಗಿ। ತಾಕೆನು ಅಂಗಡಿ। ದೂರನು ಕಮ್ಮಿಲ್ಲೆ॥

ಯಾಕೆಂತ ಗೊತ್ತ್‌ಲೆ। ನಾಯಿನು ಮಧ್ಯಾನ। ಗಂಜಿನೆ ತಿಂದತಿಲೆ।
ತಟ್ಟೆಲಿ ಗಂಜಿನ। ಹಾಕಿದ್ ಕರೆಕನ। ನಾಯಿನು ಬಾತೇಲೆ॥
ನಂಟ್ರ್‌ಗೆ ಗೈಪುಗೆ। ತಂದ ಮೊನ್। ನಾಯೆಲ್ಲಾ ತಿಂದುಟ್ಟು।
ಅವ್ವಂಗೆ ಗೈಪುಗೆ ಮೊನ್ ಇಲ್ಲದೆ ಬೇಜರ ಆಗುಟ್ಟು॥

ನಂಟ್ರ್‌ಗೆ ಗಮ್ಮತ್। ಮಾಡದೆ ಇದ್ದರೆ। ಮೊರಿಯಾದಿನೆ ಹೋದೆ।
ನಂಟ್ರ್‌ಗೆ ಉಪಚಾರ। ಮಾಡದೆ ಇದ್ದರೇ। ಬೇಜಾರನು ಆದೆ॥
ಮೊನ್ ಹಜಿರ್। ಮಾಡಿ ಹಾಕಿದ। ಅಳಗೆನ ಮುಚ್ಚಿತ್‌ಲೆ।
ಹಾಂಗಾಗಿ ನಾಂಯಿ। ಮೊನ್‌ನ ತಿಂದರು। ನಾಯಿದ್ ತೊಪ್ಪಿಲ್ಲೆ॥ ನ॥

ಬೀದಿ ನಾಯಿನು। ಅಲ್ಲದ್ ನಮ್ಮ। ಮನೆ ನಾಯಿನೆ ನೋಡಿ।
ಮಾಸ ಮೊನ್। ತಂದರೆ ನಾಯಿನ ಕೊಟೆಗೆಲಿ ಕಟ್ಟಿಬುಡಿ।
ಮೊನ್ ತುಂಬಿದ್। ಅಳೆಗೆನ ಅವ್ವ ಮುಚ್ಚಿಸಿತ್‌ಲೆ ಯಾಕೆ?।
ನಾನ್ ಮನೆಲಿ। ಇಲ್ಲದ ದಿನ ನಾಯಿಗೆ। ಹೊಡಿ ಬಡಿ ಜೋಕೆ॥

ನಂಟ್ರ್‌ಗ ಬಂದೆ ಬುಟ್ಟೊ ಮನೆಗೆ। ಮನೆವುಕೆ ಕುಸಿ ಆತ್।
ಅಂಗಡಿಂದ ಮೊನ್। ಕೋಳಿ ತಾಕಾಕಿಲ್ಲೆ। ಕತ್ತಲೆ ತಡ ಆತ್॥
ಮನೆಕಡೆ ಬರುವ। ಕೊನೆ ಬಸ್ ಕೂಡಾ। ಆಗಲೆ ಹೊರ್‌ಟೋತ್।
ಸೈಕಲ್ ಒಂದೆ। ನಮ್ಮಲಿ ಇರುದು। ಅದ್‌ನೂ ಕದ್ದೋತ್॥

ಇದ್ದೊಂದು ಹೇಂಟೆನ ನಿನ್ನನೆ ಬಂದ್। ಕುದ್ಕ ಹೊತ್ತುಟು।
ನಮ್ಮಲಿ ಇರುವ। ನಾಯಿನು ಕಚ್ಚುದು। ಬೊಗುಳುದು ನಿಲ್‌ಸಿಟ್ಟು॥
ನಂಟರ್‌ಗ ಒಳಗೆ। ಕುದ್ದೊಳೊ ಅವುಕೆ ವಿಷಯ ಗೊತ್ತ್‌ಲ್ಲೆ।
ನಡ್ಡ ವಿಷಯ। ಹೇಳುದು ಹೇಂಗೆ। ಹೇಳಿರು ತೊಪ್ಪಿಲ್ಲೆ॥

ನಂಟರ್‌ಗೆ ಉಂಬಕ್ಕೆ। ಕೂಸಲಕ್ಕಿ ಹುಗ್ಗೆನ। ಮಾಡಿದ್ ಆಗುಟ್ಟು।
ಕಾಯಿ ಪೊಜ್ಜಿ ಕಡ್‌ದ್‌ದ್ ಬೇಳೆ। ಸಾರ್‌ನು ಮಾಡಿಯಾಗುಟ್ಟು॥
ಬೆಸೆಗೆಂದ ಒಣಂಗಿಲ್। ಮೀನ್‌ನ ಸುಟ್ಟ್। ಚಟ್ನಿಗೆ ಬೆರೆಸುಟ್ಟು।
ಬೇಸಿಗೆ ಬಿಸ್‌ಲ್‌ಗೆ। ಚಪ್ಪರಿಸಿ ಉಂಡರೆ। ಬಾರೀ ರುಚಿ ಉಟ್ಟು॥

ನಂಟ್ರ್‌ಗಳೀಗೆಲ್ಲ। ಉಂಬಕೆ ಒಳಗಡೆ। ಬನ್ನಿಂತ ಕರ್ದಿದ್ದೊ।
ಹಾಕಿದ ಮಣೆಲಿ। ನಂಟ್ರ್‌ಗ ಕಾಲ್‌ಗಳ। ಮೊಡ್‌ಚಿದ್ ಕುದ್ದಿದ್ದೊ॥
ಮಾಡಿದ ಅಡಿಗೆನ। ನಂಟ್ರ್‌ಗೆ ಎಲ್ಲ। ಉಂಬಕೆ ಇಕ್ಕಿದ್ದೊ।
ಹೊಟ್ಟೆ ಬಿರಿವಾಂಗೆ। ನಂಟ್ರ್‌ಗ ಖುಶಿಲಿ। ಎಲ್ಲವು ಉಂಡಿದ್ದೊ॥

ಊಟ ಮುಗಿಸಿ। ನಂಟ್ರ್‌ಗ ಎಲಾಡಿಕೆ। ಎಲ್ಲವು ತಿಂದಿದ್ದೊ।
ರುಚಿಯಾದ ಊಟ। ಕೊಟ್ಟ ಅವ್ವನ। ಎಲ್ಲವು ಹೊಗಳಿದ್ದೊ॥
ಒಲೆಂದ ಸೌದೆಲಿ। ಕಿಚ್ಚಿ ತಂದ್ ಬೀಡಿನ। ಹೊತ್ತಿಸಿದ್ದೊ।
ಮನೆ ತುಂಬ ಬೀಡಿ। ಹೊಗೆನ ತುಂಬಿಸಿ। ನಂಟ್‌ರ್ ಹೊರ್‌ಟೋದೊ॥ನ॥

* * * * * *

ನಾನ್ ನಾನ್

ನಾನ್ ನಾನ್, ನಾನ್‌ತೇಳಿ ಜನಂಗ ಬೀಗ್‌ತಿದ್ದವೆ।
ನಾನ್ ತೇಳಿರೆ ಏನ್‌ಂತ ಕೇಳಿರೆ ನಾನ್ ಎಲ್ಲಂತೇಳಿವೆ॥
ಯಾವುದೊಂದು ಕೆಲ್‌ಸ ಮಾಡಿರು ನಾನ್ ಮಾಡ್‌ದ್‌ತೇಳಿವೆ।
ಅಲ್ಲಿ ಎಲ್ಲ ಆಕೆ ಅದ್ ನಾನ್ ಕಾರಣತೇಳಿವೆ ।

ನಾನ್‌ತೇಳಿರೆ ಅದರ ಅರ್ಥ ತಾನೆಂತವು ತಿಳ್‌ದವೆ।
ಅವನೆ ಅವನ ಹೊಗಳಿಕಂಡ್ ಜಂಭ ಕೊಚ್ಚಿಕಂಡವೆ।
ನನ್ನ ಬುಟ್ಟರೆ ಬೇರಯಾರು ಇಲ್ಲೆ ತೇಳೀ ತಿಳ್‌ದವೆ।
ಧರೆಗೆ ತಂದ್ ಅವನ ಪೊರೆದ ದೇವುರ್‌ನ ಮರ್ತವೆ ॥

ರೂಪ ಅಂದ ಚೆಂದ ಎಲ್ಲ ತಾನೆತೇಳಿ ತಿಳ್‌ದವೆ ।
ಈ ದೇಹ ಮನಸ್ ಅವರದಲ್ಲ ಇನ್ನ್ಯಾಕೆ ಹೆಮ್ಮೆಪಟ್ಟವೆ॥
ನಾನ್‌ತೇಳುವ ಜಂಭ ದೇವುರು ಬೇಡತೇಳಿ ಬುಟ್ಟದ್।
ಅದರ ಜನಂಗ ಇಟ್ಟ್‌ಕಂಡ್ ಜನಂಗ ಹೋಗೊಳೊ ಕೆಟ್ಟ್‌ದ್॥

ದೇವುರ ಕರುಣೆ ಇಲ್ಲದಿದ್ದರೆ ಹುಲ್ಲು ಕಡ್ಡಿ ಆಡ್‌ದುಲೆ ।
ಅವನದಯ ಇಲ್ಲದಿದ್ದರೆ ಜೀವ ಕೋಟಿ ಇರಿಕಿಲೆ॥
ಸೃಷ್ಟಿಕರ್ತ ಅವನೆ ಆದರು ನಾನ್‌ತವ ಹೇಳ್‌ದುಲೆ।
ಮೊನ್‌ಷ ಮಾತ್ರ ಅಹಂಕಾರ ಎಂದೂ ಅವ ಬುಡ್‌ದುಲೆ ॥

ಹೃದಯದೊಳಗೆ ಕತ್ತಲಿದ್ದರೆ ಅಹಂಕಾರ ತಾನೆ ಬಂದದೆ।
ಕಯಿಲಿದುಡ್ಡ್ ಹೆಚ್ಚಿಗಿದ್ದರು ಗರ್ವ ಅವುಕೆ ಇದ್ದದೆ ॥
ತುಂಬಿದಂತ ಕೊಡಪಣಗ ಎಂದೂ ತುಳಕಟಿಲ್ಲೆದ್ ।
ಖಾಲಿಚೀಲ ಆದರದ್ ಸರೂತ ಅದ್ ನಿಲ್ಲದ್ ॥

ನಮ್ಮದ್‌ಂತ ಯಾವುದಿಲ್ಲೆ ಸೃಷ್ಟಿಯೊಳಗೆ ಇದ್ದದ್ ।
ಇದ್ದದ್ ಜೀವರಾಶಿಗಂವ ಉಪಯೋಗಕೆಂತ ಬುಟ್ಟದ್ ॥
ಯಾವ ನ್ಯಾಯ ಅದರ ನಾವು ನನ್ನದ್‌ಂತ ಹೇಳೊದು?॥
ನನ್ನದ್‌ಂತ ಹೇಳುವ ಜನರ ನಾನ್ ಏನ್‌ತೇಳುದು ॥

ಕಷ್ಟಬಾಕನ ಜನಂಗ ಎಲ್ಲ ದೇವುರ ಮೊರೆ ಹೋದವೆ ।
ನಾನ್‌ತೇಳುವ ಜನಂಗ ಈಗ ದೇವುರ್‌ಗೆ ಹರ್ಕೆ ಹೇಳಿವೆ ॥
ವೈದ್ಯ ಮೊದ್ದ್ ಕೊಡುದು ಹೊರ್‌ತ್ ಗುಣ ಮಾಡುದು ದೇವುರೆ ॥
ಆಗ ನಾನ್ ತೇಳ್ದು ಮರ್‌ತ್ ದೇವುರ ನೆನಪು ಮಾಡಿವೆ ॥

ದೇವುರ್‌ಂದ ಬಂದದ್ ನಾವು ಅದರ ಮುಂದೆ ತಿಳಿಯೊಕು।
ಬೇರೆಯವರ ಹೃದಯದೊಳಗು ದೇವುರ ನಾವುಕಾಣೊಕು ॥
ಯಾರು ಅಮರರಲ್ಲ ನಾವು ನಾಲ್‌ಕ್ ದಿನದ ಬಾಳಿದ್ ।
ನಾನ್ ನನ್ನದ್ ನನ್ನಂದಾಗಿ ಹೇಳ್ದು ಜನಂಗ ತೊಪ್ಪದ್ ॥

ಭುಮಿಲಿ ಕರ್ಮ ಮುಗಿಸಿಬಾಕೆ ದೇವುರೆ ನಮ್ಮ ಕಳ್‌ಸಿಟು।
ಕರ್ಮ ಮುಗಿಸಿ ಆದ ಮೇಲೆ ಅವುಕೆ ಬಾಕೆ ಹೇಳಿಟು ॥
ನಿಜವಾಗಿ ನಮ್ಮ ಮನೆ ಇರ್ದು ದೇವುರ ಹಕ್ಕಲೆ ಅಲ್ಲಿನೆ।
ಭೂಮಿಲಿ ಇರುವ ಜನಂಗ ಎಲ್ಲ ಇಲ್ಲಿ ಇರ್ದು ಸುಮ್ಮನೆ ॥

ನಾನ್ ನಾನ್‌ಂತ ಹೇಳಿರೆ ನೀವು ದೇವುರ್‌ಗೆ ಖುಷಿ ಆಕಿಲೆ।
ಮರಳಿ ನೀವು ನಿಮ್ಮ ಮನೆಗೆ ದೇವುರ ಹಕ್ಕಲೆ ಹೋಕಿಲೆ॥
ಸಕಲ ವಿಧಲಿ ನಾನ್ ಅಲ್ಲ ನೀನ್‌ತವನ ಪೂಜಿಸಿ ।
ಆಗ ನಿಮ್ಮ ಕರೆಕು ಸಾಕ್ ನಿಮ್ಮ ಜಂಭಮನ್ನಿಸಿ ।

ಪೂರ್ಣಪ್ರಜ್ಞೆ ಇರುವ ಪರಶಿವನ ನೀವು ನೆನೆಯೊಕು।
ನೀವು ನೀನ್‌ತೇಳುದು ಪರಶಿವಂಗೆ ಅದ್ ಸಲ್ಲೊಕು॥
ಮನಸ್ ಒಳಗೆ ಇರುವ ಅಹಂಕಾರನೆಲ್ಲ ತ್ಯಜಿಸೊಕು।
ಮೊನುಷ ಅಹಂಕಾರ ಬುಟ್ಟ್ ಭೂಮಿಯೊಳಗೆ ಬಾಳೊಕು॥

* * * * * *

ಲಾಲ್ ಭಾಗ್

ಎಸ್ಟೊಂದು ಬಣ್ಣ ಎನೇನೊ ವರ್ಣ ಎಂತಾ ಪೊರ್ಲದ್।
ಹೂಗಳದೆ ಸ್ವರ್ಗ ಕಾಂಬ ಲಾಲ್‌ಭಾಗದ್।
ಲಾಲ್‌ಭಾಗ್ ಬೆಂಗಳೂರ್‌ನ ಮಧ್ಯಲುಟ್ಟದ್।
ವರ್ಷಕೊಮ್ಮೆ ಆದರು ಜನಂಗ ನೋಡೊಕು ಅದ್॥

ಲಾಲ್‌ಭಾಗ್ ಒಳಗೆ ಹಸಿರ್ ಹಾಸಿದಾಂಗಿದ್ದದೆ।
ಸಾವಿರಾರ್ ಜಾತಿನ ಹೂವ ಒಳಗೆ ಕಂಡದೆ॥
ಉಸಿರ್‌ನೊಳಗೆ ಗಂಧ ಘಮನ ಕೊಡುತಲಿದ್ದದೆ।
ಲಾಲ್‌ಭಾಗ್‌ನ ಸೌಂದರ್ಯ ಹೇಳಿಕಾದುಲೆ ॥ ಅಹಾ॥

ಲಾಲ್‌ಭಾಗ್ ಒಳಗೆ ತಂಪು ಗಾಳಿ ಬೀಸುದು।
ಹಸಿರ್ ಮರ, ದೈಗ ಅಲ್ಲಿ ಎದ್ದ್ ಕಾಂಬೊದು॥
ಮನಸ್‌ಲೆಂತ ಮರುಕ ಇದ್ದರು ಅಲ್ಲಿ ಮತ್ತೋ‌ದು।
ಲಾಲ್‌ಭಾಗ್‌ಲಿ ಒಂದು ಸುತ್ತ್ ಬಂದರೆ ಗೊತ್ತಾದು॥

ಹಸ್‌ರ್ ಕೆಂಪು ನೀಲಿ ಬಿಳಿದ್ ಬಣ್ಣದೂವುಗ।
ಗೊಂಚಲ್ ಆಗಿ ಇರುದು ರಾಶಿ ರಾಶಿ ಹೂವುಗ॥
ನೇರಳೆ ಕೇಸರಿ ಹಳದಿ ಮನಸೆಳೆವ ಹೂವುಗ।
ಅಕ್ಷರಿಲ್ಲೆ ವರ್ಣಿಸಿಕ್ಕೆ ಅದರ ಸೊಬಗ್ ॥ಅಹಾ॥

ಹುಣ್ಣಿಮೆ ಚಂದ್ರ ಲಾಲ್‌ಭಾಗನ ಪೊರ್ಲು ನೋಡುದು।
ಹಗಲ್ ಸೂರ್ಯ ಲಾಲ್‌ಭಾಗ್‌ಗೆ ಮೆರಗು ತುಂಬುದು॥
ಅದರ ಒಳಗೆ ನಡುಲಿ ಇರ್ದು ಗಾಜ್ ಮನೆ ಅದ್।
ಲಾಲ್‌ಭಾಗ್‌ನ ಪೊರ್ಲು ಒಮ್ಮೆ ನೋಡಿ ಸವಿಯದ್॥

ಲಾಲ್‌ಭಾಗ್ ಒಳಗೆ ಮರಲಿ ಹಕ್ಕಿಗಳಿರುವೊ।
ಬಣ್ಣ ಬಣ್ಣದ ಹೂಗಳ ನೋಡಿ ಚೆಲ್ಲಾಡುವೊ॥
ಲಕ್ಷಗಟ್ಟಲೆ ಜನಂಗ ಲಾಲ್‌ಭಾಗ್‌ಗೆ ಹೋಗುವೊ।
ಜನ್ಮ ಸಾರ್ಥಕ ಆತ್‌ತೇಳಿ ನೋಡಿ ಹೊಗೊಳುವೊ ॥ ಅಹಾ॥

****

ಒಂದೆ ನುಡಿ ಒಂದೆ ನಡೆ

ಒಂದೆ ನಡೆನು ಒಂದೆ ನುಡಿನು ಒಂದೆ ನಿನ್ನಲಿರೊಕು।
ಜೀವನದುದ್ದಕು ಅದರ ನೀನ್ ಪಾಲಿಸಿಕಂಡ್ ಬರೊಕು॥
ಕಸ್ಟ ಸುಖ ಅದ್ ಏನೆ ಬಂದರು ಅದರ ಎದುರೊಸೊಕು।
ನಿನ್ನಲಿ ನ್ಯಾಯ ಸತ್ಯನೆ ಇದ್ದರೆ ಯಾರಿಗೆ ಹೆದುರೊಕ್ಕು॥

ದ್ವೇಷ ಅಸೂಯೆ ನಿಮ್ಮಲಿ ಇದ್ದರೆ ಅದರ ನೀ ಬುಡೊಕು।
ನಾನ್ ತೇಳುದು ಇರಿಕೆ ಬೊತ್ತದ್ ಇದ್ದರೆ ಅಳಿಸೊಕ್ಕು॥
ದೊಡ್ಡವ ಬಡವ ಎಲ್ಲರ ಜತೆಗೆ ಖಂಡಿತ ನೀ ಬೆರೆಕು॥
ಬೇಡುತ ಭಿಕ್ಷುಕ ಬಂದರೆ ಮನೆಗೆ ದಾನನ ಮಾಡೊಕ್ಕು ॥ ಒಂದೆ॥

ಬೇಡದ ಚಟಗ ಇದ್ದರೆ ಖಂಡಿತದರ ನೀ ಬುಡೊಕು।
ನಿನ್ನ್‌ನ ನೀನೆ ತಿದ್ದುತ ಸುರ್‌ಗೆ ನೀ ಸರಿಯಾಗಿರೊಕು॥
ಬೇಡದ ಮಾತ್‌ಗ ಕೇಳಿರೆ ಕೆಬಿಗೆ ದೂರಕೆ ನೀ ಹೋಕು।
ದುಷ್ಟ ಜನಗಳ ತಿಳ್‌ದರೆ ಅವರ ಸ್ನೇಹನೆ ಬುಟ್ಟಿರೊಕು॥

ಸಜ್ಜನಗಂತ ಗೊತ್ತಾದರೆ ಅವರ ಜತೆ ನೀ ಸೇರೊಕ್ಕು।
ಒಳ್ಳೆವರ ಜತೆ ಸೇರಿರೆ ನೀನ್ ಒಳ್ಳೆದೆ ಕಲಿಯಕ್॥
ಒಳ್ಳೆದ್ ನೀನ ಕಲ್ತ್‌ದ್ ಅದರ ಬೇರೆವುಕೆ ಹೇಳೊಕ್ಕು।
ಹೆಂಡಸರಾಯ ಸಿಗರೇಟ್ ಬೀಡಿ ಅದರ ದೂರಿಸೊಕು ॥ ಒಂದೆ॥

ಹೆತ್ತ ಅವ್ವ ಅಪ್ಪನ ನಿ ಕೊನೆವರೆಗಿನು ನೋಡೊಕ್ಕು।
ಅವರ ಸೇವೆನ ಮಾಡಿದ್ ಅವರ ಋಣನ ತಿರಿಸೊಕು॥
ಭಗವಂತನ ಕರುಣೆ ಬಿಡದೆ ನೀನ್ ದಿನನೂ ಬೇಡೊಕ್ಕು।
ಭಗವಂತಗೆ ನೀತಲೆಬಾಗಿದ್ ಅವನ ಸೇವೆನ ಮಾಡೊಕ್ಕು॥

ನಿಷ್ಠೆಂದಳೆ ದಿನ ಮಡುವ ಕೆಲಸನ ನೀನ್ ಮಾಡೊಕ್ಕು।
ದೇವುರು ಮೆಚ್ಚುವ ಕಾರ್ಯನ ಮಾಡ್ ದೇವುರು ಕುಸಿಪಡೊಕು॥
ಯಾವುದೆ ಕೆಲಸನ ಮಾಡಿಕೆ ಮುಂದೆ ಮನಸ್ ಶುದ್ಧಿರೊಕು।
ನೀನೆ ಮಾಡಿದ ಕೆಲಸನೆ ಆದರು ನಂಬಿಕೆ ನಿಂಗಿರೊಕು ॥ ಒಂದೆ॥

* * * * * *

ಹಳ್ಳಿ ಗೂಡೆ

ಹಳ್ಳಿ ಗೂಡೆ ಅಲ್ಲಿ ನೋಡ್
ಎಸ್ಟ್ ಪೊರ್ಲು ಉಟ್ಟು ನೋಡ್
ಡೆಲ್ಲಿ ಗೂಡೆನಾಂಗೆ ಇವಳ ಸ್ಟೈಲ್ ಕಂಡದೆ॥
ನಡಿವ ತಳಕ್ ಬಳಕ್ ನೋಡ್
ಸೊಂಟ ತಿರುಗ್‌ತುಟ್ಟ್ ನೋಡ್
ಹಳ್ಳಿಗೂಡೆ ಪೇಟೆ ಸೇರಿ ಹೇಂಗೆ ಕಂಡದೆ॥

ಎಣ್ಣೆ ಕಪ್ಪುಗೂಡೆ ಉಟ್ಟು
ಉದ್ದ ಜಡೆ ಅದ್‌ಕೆ ಉಟ್ಟು
ಹಳ್ಳಿ ಗೂಡೆಗಿರುವ ಪೊರ್ಲು ಎದ್ದ್ ಕಂಡದೆ॥
ಮೆಲ್ಲ ಮೆಲ್ಲ ಹೋಗುತುಟ್ಟು
ಮೇಲೆ ಕೆಳಗೆ ನೊಡುತುಟ್ಟು
ತುಂಬಾ ಧೈರ್ಯಲಿರುವ ಗೂಡೆನಾಂಗೆ ಕಂಡದೆ॥

ಓದು ಮುಗಿಸಿ ಬಂದುಟಿಲ್ಲಿ
ಕೆಲ್ಸ ಮಾಡ್‌ದೆ ಕಂಡದಿಲ್ಲಿ,
ಏನೊ ದೊಡ್ಡ ಕೆಲಸಲೀಗ ಉಟ್ಟುಕಂಡದೆ।
ಹೇಳಿಕದ್ ಹಳ್ಳಿಗೂಡೆ
ನೋಡಿಕದ್ ಪೇಟೆಗೂಡೆ,
ಪೇಂಟ್ ತುಂಡ್ ಶರಟ್ ಹಾಕಿ ಪೊರ್ಲು ಕಂಡದೆ॥

ನಮ್ಮ ನಾಡ್ ಗೂಡೆಗಿಂದ್।
ಪೇಟೆಗೋಗಿ ಸೇರಿಕಂಡ್।
ಗುರ್ತು ಹಿಡೆಕೆ ಆಕಿಲವರ ಹಾಂಗೆ ಕಂಡವೆ॥
ನಾಡ್ ಗೂಡೆಗ ನೋಡ್ ಮುಂದೆ।
ಪೇಟೆ ಗೂಡೆಗ ಇವರ ಹಿಂದೆ।
ಹಳ್ಳಿ ಗೂಡೆಗ ಪೇಟೆಲಿ ಜಾಗ ಹುಡ್‌ಕಿಕಂಡವೆ॥

ಹಳ್ಳಿ ತನನ ಎಲ್ಲ ಮರ್ತ್।
ನಮ್ಮ ಗೂಡೆಗ ವಿದ್ಯೆ ಕಲ್ತ್।
ಪೇಟೆಲೊಳ್ಳ ಚಾಕರಿಗೆ ಸೇರಿಕಂಡವೆ॥
ಅವರ ಇವರ ಭಾಷೆ ಕಲತ್।
ಜನರ ಜತೆಗೆ ಕೂಡಿ ಬೆರ್ತ್।
ಹಳ್ಳಿ ಗೂಡೆಗ ದೇಶಕೆನೆ ಹೆಸರ್ ತಂದವೆ

ನಾಡ್ ಗೂಡೆಗ ಓದಿಕೆ ಮುಂದೆ।
ಆಟ ಓಟಲಿ ಇಲ್ಲೆ ಹಿಂದೆ।
ಅಲ್ಲಿಂದ ಇಲ್ಲಿಗೆ ಬಂದ್ ಅವು ಎಲ್ಲರ ಮೀರಿಸಿವೆ॥
ಗೂಡೆಗೆ ಮೊದುವೆ ಮಾಡೊಕೀಗ।
ಗೂಡೆಗ ಹುಷಾರ್ ಇದ್ದರೆ ಬೇಗ।
ಹುಡ್‌ಕೊಕುತಿಲ್ಲೆ ಗಂಡ್‌ಗ ತಾವೆ ಓಡಿ ಬಂದವೆ॥

ಗೂಡೆಗ ತುಂಬ ಓದಿ ಬುಡಿ।
ಅವ್ವ ಅಪ್ಪನ ಸುದ್ದಿ ಬುಡಿ।
ಹಳ್ಳಿಲವು ಕಸ್ಟ ಬಂದ್ ಜೀವನ ಮಾಡಿವೆ॥
ನಿಮ್ಮ ಬೊದ್‌ಕ್ ನೀವೆ ನೋಡಿ।
ಹೆತ್ತವರ ಮಾತ್‌ಕೇಳಿ।
ಓದಿದ್ ಮುಂದೆ ಹೋಗಿ ಒಳ್ಳೆ ಭವಿಷ್ಯ ಕಂಡವೆ॥

* * * * * *

ಕಂಬಳ

ಕಂಬಳತೇಳಿರೆ ಊರ್ ಜನಕೆ ದೊಡ್ಡ ಹಬ್ಬದ್।
ದಕ್ಷಿಣಕನ್ನಡ ಜಿಲ್ಲೆಲಿ ಮಾತ್ರ ನಡಿದು ಹೆಚ್ಚದ್॥
ಊರ್ ಜನಂಗ ಖುಷಿಗೆ ಸೇರಿ ಹಬ್ಬ ಮಾಡಿವೆ।
ಸಾವಿರಗಟ್ಟೆ ಜನಂಗ ಅಲ್ಲಿ ನೋಡಿಕೆ ಸೇರಿವೆ॥

ಉದ್ದ ಅಗಲ ಹೆಚ್ಚಿ ಇರುವ ಕೆಸರ್ ಗದ್ದೆಲಿ।
ಕಂಬಳ ನಡಿದು ಪ್ರತೀ ವರ್ಷ ಅಂತ ಜಾಗೆಲಿ॥
ಸುತ್ತ ಊರ್‌ಗೆ ಕಂಬಳ ವಿಷಯ ಹೇಳಿಕಳ್‌ಸಿವೆ।
ಎತ್ತ್, ಕೋಣ, ಜನಂಗ ಎಲ್ಲ ಹೊಡ್ಕಂಡ್ ಬಂದವೆ॥

ಹೊಟೆ ಕೆಲ್‌ಸ ಮುಗ್‌ದ್ ಆಗಿ ಕೊನೆದಿನಲಿ।
ಊರ ಜನಂಗ ಕಂಬಳ ಮಾಡಿವೆ ಬಾರಿಕುಸಿಲಿ॥
ಸುಮ್ಮ ಸುಮ್ಮನೆ ಓಡ್ಸುದಲ್ಲ ಪಂಥಕಟ್ಟಿವೆ।
ಪಸ್ಟ್ ಬರೊಕುತೇಳಿ ಜನಂಗಪ್ರಯತ್ನ ಪಟ್ಟವೆ॥

ಓಡಿಕೆ ಒಳ್ಳೆ ಹೋರಿಗ ಬೇಕಾದೆ ಅಲ್ಲಿ ಓಡ್‌ಸಿಕೆ।
ಹಾಂಗೆ ಮಾಡಿರೆ ತುಂಬಾ ಜನಂಗ ಬಂದವೆ ನೋಡಿಕೆ॥
ಕೆಲವು ಜನಂಗ ಬೀಜದ ಹೋರಿಗಳಲ್ಲಿಗೆ ತಂದೆವೆ।
ಹಂಗೆ ಇರುವ ಕೋಣಗಳು ಅಲ್ಲಿಗೆ ಬಂದವೆ॥

ಎಣ್ಣೆ ಉಜ್ಜಿದ ಕೋಣಂಗ ಪಳಪಳಾಂತ ಹೊಳ್‌ದವೆ।
ತೆಗ್‌ಡ್, ಹುಲ್ಲ್, ಮೊಡ್ಡಿ ಅವುಕೆ ತಿಂಬಕೆ ಕೊಟ್ಟವೆ॥
ಬೇರೆ ಜನಂಗ ಹಕ್ಕಲೆ ಹೋದರೆ ಕುತ್ತಿಕೆ ಬಂದವೆ।
ಸಾಂಕಿದವನ ಕಂಡರೆ ಮಾತ್ರ ಸುಮ್ಮನಿದ್ದವೆ॥

ಪಂತಕೆ ಮುಂದೆ ಎತ್ತ್ ಕೋಣನ ಓಡ್‌ಸಿ ನೋಡೊಕು।
ಜೋರಾಗಿ ಓಡಿವೊ ಇಲ್ಲೆನೊ ಅದರ ಮುಂದೆ ತಿಳಿಯೊಕು॥
ಎತ್ತ್ ಕೋಣನ ಯಾರೂ ಓಡ್‌ಸಿ ನೋಡಟ ಇಲ್ಲೆ।
ಓಡಿಸಿಕನ ಕೋಲ್‌ಲಿ ಹೊಡ್ದರೆ ಅವು ನಿಲ್‌ಸಟ ಇಲ್ಲೆ॥

ಅಭ್ಯಾಸ ಇಲ್ಲದ ಎತ್ತ್ ಕೋಣಂಗ ಹೇಂಗೆ ಓಡುದು।
ಹೊಡ್‌ದರು ಹೊಡೆದಿದ್ದರು ಅವು ನಿಧಾನ ಓಡುದು॥
ಓಡಸವ ಮಾತ್ರ ಎತ್ತ್‌ಗಳ ಬೀಲ ಬುಡಟಿಲ್ಲೆ
ಬೀಲ ಹಿಡೆದಿದ್ದರೆ ಅವಂಗೆ ಓಡಿಕೆ ಆಕಿಲ್ಲೆ॥

ಓಡ್‌ಸುವವನ ಎತ್ತ್ ಕೋಣಂಗ ಓಡುದು ಎಳಕಂಡ್
ಬೀಲ ಕೈಲಿ ಇದ್ದರೆ ಅಂವ ಹೋದೆ ಹೊಡ್‌ಕಂಡ್॥
ಇವಂಗು ಕೆಸರ್ ಗದ್ದೆಲಿ ಓಡಿದೆ ಅಭ್ಯಾಸ ಎಲ್ಯುಟು?।
ಓಡುವ ಎತ್ತ್‌ನ ಹಿಂದೆ ಓಡಿಕೆ ತುಂಬಾ ಕಷ್ಟಟ್ಟು॥

ಈರನ ಹೋರಿನ ಎದ್‌ರ್ ಯಾವ ಹೋರಿಗ ಇಲ್ಲೆಗಡ।
ಈರನ ಹೋರಿನ ಸೋಲುಸುವ ಹೋರಿಗ ಊರ್‌ಲೆ ಇಲ್ಲೆಗಡ।
ಈರನ ಹೋರಿಗಳ ಕಂಡರೆ ಸಾಕದ ಜನಂಗ ಹೆದ್‌ರಿವೆ।
ಈರನ ಹೋರಿನ ಸಾಹಸನೆಲ್ಲ ಊರವೆ ಹೇಳಿವೆ॥

ಜೋರಾಗಿ ಓಡುವ ಈರನ ಎತ್ತ್‌ಗ ಓಡಿಕೆ ಬಾತ್‌ಲೆ।
ಇಡಿ ಊರ್‌ನ ಜನಕೆ ಬೇಜರ ಹೀಂಗೆ ಆತಲೆ॥
ತಿಮ್ಮನ ಯಾವುದೊ ಒಂದ್ ಕಡ್‌ಸ್ ಬೆದೆಗೆ ಬಂದುಟು।
ಯಾರೊ ಹೇಳ್‌ದೊ ಈರನ ಹೋರಿ ಹರ್‌ಂಬುಳಿಗೋಗುಟು॥

ಹೋರಿನ ಈಗ ಹಿಡ್‌ದ್ ತಾಕೆ ಯಾರಿಗೆ ಧೈರ್ಯುಟ್ಟು?
ಬೊಳ್ಳಿ ಹಾಕಿಕೆ ಹೋದರೆ ಕರ್‌ಲ್ ಕೊಂಬುಲ್ ಬಾಕಿಟ್ಟು
ಹೋರಿನ ತಾಕೆ ಮುಂದೆ ಇಲ್ಲಿಗೆ ಕಡ್‌ಸ್‌ನ ತರೊಕಿಲ್ಲಿ
ಕಡ್‌ಸ್‌ನ ತಂದರೆ ಅದರ ನೋಡಿ ಹೋರಿಬಾದಿಲ್ಲಿ॥

ಅಂತು ಇಂತು ಈರನ ಹೋರಿಗೆ ಪ್ರೈಸ್ ತೊಪ್ಪೋತ್।
ತಿಮ್ಮನ ಒಂದ್ ಕಡ್‌ಸ್‌ಂದಾಗಿ ಏನೇನೊ ನಡ್‌ದೋತ್॥
ಏನೆ ಆಗಲಿ ಈ ವರ್ಷ ಕಂಬಳ। ಇಲ್ಲಿಗೆ ಮುಗ್‌ದೋತ್।
ಓಡಿಕೆ ಬಂದ ಎತ್ತ್ ಕೋಣನ ಹೊಡ್‌ಕಂಡ್ ಹೋಗ್ಯಾತ್॥

ಬರೆ ಕೋಣ ಕಂಬಳತೇಳಿ ಇನ್ನೊಂದು ಉಟ್ಟು।
ಕೋಣಂಗಳ ಮಾತ್ರ ತಂದವೆ ಇಲ್ಲಿಗೆ ಹೋರಿಗಳ ಬುಟ್ಟ್।
ಅದೂ ಇದೂ ನೋಡಿಕೆ ಒಂದೆನೆ ಒಂದೆತರಉಟ್ಟು।
ಎರಡರಲ್ಲು ಓಡಿಕನ ಹೊಡ್ಡವೆ ಸಿಕ್ಕಾಬಟ್ಟೆ ಪೆಟ್ಟ್॥

ಕಂಬಳ ದಿನ ಎತ್ತ್ ಕೋಣಕೆ ಹೊಡಿದು ಎಂತಕೆ?।
ಹೊಡಿಯದೆನೆ ಓಡಿಸಿ ನೀವು ಅಲ್ಲಿ ಪಂಥಕೆ॥
ಕಂಬಳ ಹೆಸ್ರ್ ಹೇಳಿ ಅವುಕೆ ಹಿಂಸೆ ಕೊಡ್‌ಬಡಿ।
ಮೂಕ ಪ್ರಾಣಿಗವು ಪಾಪ ಅದರ ನೀವು ಹೊಡಿಬಡಿ॥

* * * * * *

ರಾಗಿ ತುಂಬಾ ಉಪಯೋಗಿ

ಜನದಿನ ಬಳಸುವ ಆಹಾರಗಳಲಿ
ರಾಗಿನು ಒಂದ್ ಅತೀಮುಖ್ಯ।
ಆರೋಗ್ಯಕೊಳ್ಳದ್ ಬೆಲೆನೂಕಮ್ಮಿ।
ರಾಗಿನೆ ದೇಹಕೆ ಪ್ರಾಮುಖ್ಯ॥

ದೇಹನ ದಿನ ಇಡಿ ತಂಪಾಗಿಸುದು
ಬಡ ಜನ ತಿಂಬಂತ ಈರಾಗಿ।
ದೇಹಲಿ ಕೊಬ್ಬು ಬಾರದ ಹಾಂಗೆನೆ
ನೋಡಿ ಕೊಂಬೊದು ಕರಿರಾಗಿ॥

ಆಗಾಗ ಹಸಿವೆ ಆದರೆ ಅದರ
ತಡೆಗಟ್ಟುದು ತಿನ್ನಿ ನೀವ್ ರಾಗಿ।
ಎಳೆ ಮಕ್ಕಳ ದೇಹಕು ಸೇರಲಿರಾಗಿ
ರಾಗಿ ತುಂಬಾ ಉಪಯೋಗಿ॥

ಕೆಲಜನ ರಾಗಿನ ತಾತ್ಸರ ಮಾಡಿವೆ
ರಾಗಿನ ಗುಣನ ತಿಳಿಯದವು।
ರಾಗಿನ ಬಡ ಜನ ಮಾತ್ರನೆ ತಿಂಬೊದು
ಹಾಂಗೆನೆ ಕೆಲಜನ ತಿಳ್‌ದೇಳವು॥

ದೇಹಕೆರಾಗಿನೆ ಅಮೃತತೇಳಿವೆ
ಹಿರಿಯರ ಮಾತಾದ್ ಸುಳ್ಳಲ್ಲ।
ಇನ್ನಾದರು ಸರಿ ರಾಗಿ ಉಪಯೋಗಿಸಿ
ಆರೋಗ್ಯ ಬಯಸುವ ಜನ ಎಲ್ಲ॥

ರಾಗಿನ ವಿಷಯಲಿ ತಾತ್ಸರ ಬೇಡ।
ಉಂಡ್‌ದ್ ಆರೋಗ್ಯ ಸರಿಪಡಿಸಿ॥
ದೇಹಲಿ ಏನೆ ತೊಂದರೆ ಇದ್ದರು।
ರಾಗಿ ಉಪಯೋಗಿಸಿ ಗುಣಪಡಿಸಿ॥

ಆರೋಗ್ಯ ದಿನನೂ ಬಯಸುವ ಜನಂಗ।
ದಿನ ಊಟ ಮಾಡಿವೆ ಬರೆರಾಗಿ।
ಇರುವಾ ದೇಹನ ಆರೋಗ್ಯಲಿಸಿಕೆ
ಅನ್ನಕು ಮಿಗಿಲ್ ಹಿತರಾಗಿ॥

ದುಡ್ಡುಟ್ಟುಂತ ಒಳ್ಳೊಳ್ಳೆ ಆಹಾರ ತಿಂದವೆ
ದೊಡ್ಡೊವು ಹೋಟೆಲ್ ತಿನ್‌ಸಗಳ।
ಹೋಟೆಲ್ ತಿನ್‌ಸ್‌ಲಿ ಆರೋಗ್ಯ ಕೆಡುದು
ಕೇಳಿನಿ ಹೇಳುವ ಮಾತ್‌ಗಳ॥

ಬೆಲೆಗೆಟಕದ ಆ ಹೊರಗೆನ ತಿಂಡಿಗೆ
ಆಶೆ ಪಡದೆ ಬಯಸಿನಿ ಆರೋಗ್ಯ।
ಮನೆಲೆ ಮಾಡಿದ ಅಡುಗೆನತಿನೊಕು
ದೇಹಕೆ ಖಂಡಿತ ಅದೆಯೋಗ್ಯ॥

ನನ್ನನಿಸಿಕೆ ನಾನೀ ಪದ್ಯಲಿ ಬರ್ದಳೆ
ತಿಂಬೊದೊ ಬುಡುದು ನಿಮ್ಮಿಷ್ಟ।
ಖಂಡಿತ ಹೇಳಿನೆ ನಮ್ಮ ಆರೋಗ್ಯಕೆ
ರಾಗಿನು ಬೇಕು ಅದ್ ಶ್ರೇಷ್ಟ॥

* * * * * *

ಆಶೀರ್ವಾದ
(ಹುಟ್ಟಿದ ಕೂಸ್‌ಗೆ ಆಶೀರ್ವಾದ)

ಜಗತ್ತ್ ತಿಳಿಯದಂತ ಕೂಸ್ ನೀನ್ ಇಂದಿಗೆ।
ಜಗಕೆ ಪ್ರಿಯ ಮಹಿಳೆಯಾಗ್ ನೀನ್ ಮುಂದೆಗೆ ।
ಅಳುದು ನಿಲ್ಲಿಸಿ ನಗೆನ ತರ್‌ಸ್ ಅಪ್ಪ ಅವ್ವಂಗೆ ।
ಜಾಣೆ ಪ್ರವೀಣೆಯಾಗ್ ಬರ್‌ಲಿ ನಿಂಗೆ ಏಳಿಗೆ॥

ವಿಧ್ಯೆ ಬುದ್ಧಿಲಿ ಚತುರೆಯಾಗ್ ನೀನ್ ಓದಿದ್ ।
ನಿನ್ನ ಏಳಿಗೆನ ಬಯಸಿ ನಾವು ಒಳ್ಳೊಕಾದ್‌ದ್ ॥
ದೇವುರ ಪೂಜಿಸ್ ದಿನ ನೀನ್ ಅವನ ನಂಬಿದ್ ।

ಕಪಟ ಮೋಸ ಎಂದೂ ನಿಂಗೆ ಬಾದೆ ಬೇಡದ್ ।
ಸತ್ಯನ್ಯಾಯ ಧರ್ಮ ಎಲ್ಲ ನಿನ್ನಲಿರಲದ್ ॥
ಗುರುಹಿರಿಯರಿಗೆ ಮನ್ನಣೆನ ನೀನ್ ಕೊಟ್ಟ್‌ದ್।
ಅವರ ಆಶೀರ್ವಾದ ನಿನ್ನ ಮೇಲೆ ಇರಲದ್ ॥

ಬುದ್ಧಿವಂತಳಾಗಿ ನೀನ್ ಜ್ಞಾನವಂತಳಾಗಿದ್।
ದಾನವಂತಳಾಗ್ ನೀನ್ ಜನರ ಪ್ರೀತಿಗಳಿಸಿದ್ ॥
ಧನವಂತಳಾಗ್ ನೀನ್ ದೊಡ್ಡಪದವಿ ಏರಿದ್ ।
ದಯಾವಂತಳಾಗ್ ನೀನ್ ಜನರ ಕಸ್ಟ ತಿಳ್‌ದ್‌ದ್ ॥

ವೀರ ವನಿತೆಯಾಗ್ ಭಾರತ ಭೂಮಿ ನೀನ್ ನೆನ್‌ಸಿದ್।
ಆರೋಗ್ಯವಂತಳಾಗಿ ಬೊದ್‌ಕ್ ಬೊದ್‌ಕ್ ಬಯಸಿದ್॥
ಕೀರ್ತಿವಂತಳಾಗ್ ನೀನ್ ನೀತಿವಂತಳಾಗಿದ್।
ಬಂಧು ಆಗ್ ಬಡಮನೆನ ಬಾಗಿಲ್‌ಗಳ ತೆಗ್‌ದ್‌ದ್॥

ದ್ವೇಷ ಅಸೂಯೆ ಮಾಡುದು ಬೇಡ ಯಾರನೂ ನಿ ನೋಡಿದ್।
ಎಲ್ಲ ಜನರ ಪ್ರೀತಿಗಳಿಸ್ ಎಲ್ಲರೊಟ್ಟಿಗೆ ಸೇರಿದ್॥
ಸಣ್ಣ ಕೂಸ್ ಈಗ ನಿನ್ನ ಏಳಿಗೆನನೆ ಬಯಸಿದ್।
ಹೃದಯದೊಳೆಗೆ ನಿನ್ನ ಇಸಿದ್ ಹಾಡ್ ಬರ್ದೆ ಹರಸಿದ್॥

* * * * * *

ಕುಡ್ಕ ಗಂಡ

ಕುಡ್ಕ ಗಂಡನ ಕಟ್ಟಿಕಂಡ್। ದಿನಾ ಪೆಟ್ಟ್ ತಿಂದ್‌ಕಂಡ್।
ಜೀವನನೆ ನಂಗೆ ಇಂದ್ ಸಾಕಾತ್॥
ಒಳ್ಳೆಗುಣದ ಹುಡುಗಂತ। ಊರ ಜನಂಗ ಹೇಳಿಂತ।
ಮೊದುವೆ ಆದ ಇಂತ ಗಂಡ। ಬೇಡಾಗಿತ್ತ್॥

ಅಲ್ಲಿ ಇಲ್ಲಿ ಕುಡ್‌ಕಂಡ್ ಊರ್‌ಕೇರಿ ಸುತ್ತಿಕಂಡ್।
ನಡುರಾತ್ರಿ ಮನೆಗೆ ಬಾದು। ನನ್ನ ಗಂಡ॥
ನೆತ್ತಿವರೆಗೆ ಏರಿದ। ಮತ್ತ್‌ಲವ ಮನೆಗೆ ಬಂದ್।
ಹೊಟ್ಟೆ ಇಸಿದೆ ತೇಳಿ ಹೊಡಿದು। ನನ್ನ ಗಂಡ॥

ಹೋದಲೆಲ್ಲ ಸಾಲಮಾಡಿ। ಕುಡ್‌ದ್ ಬಾಕನ ಬೀಳ್ದು ನೋಡಿ।
ಮೊರ್‌ಯಾದಿ ಮಾನ। ಬೀದಿ ಪಾಲಾತ್।
ಕಾಡಿ ಬೇಡಿ ಎಳಿದು ಬೀಡಿ। ಕೊಡದಿದ್ದರೆ ಬೊಯಿದು ನೋಡಿ।
ನಡೆಕು ಆದುಲೆ ಅವನ ಕಟ್ಟಿಕಂಡ್ ಏನ್ ಮಾಡ್ಲಿ॥

ಕೆಲಸಕೆಲ್ಲು ಹೋದುಲವ। ಅಕ್ಕಿ ಬೇಳೆ ತಾದುಲವ।
ಬಟ್ಟೆ ಇಲ್ಲೆ ಉಡುವ ಸೀರೆ। ಒಂದೆ ನಂಗೆ।
ಮಕ್ಕಳ ಹೊಟ್ಟೆ ತುಂಬುಸೊಕ್ಕು। ಗಂಡ್‌ನ ಪೆಟ್ಟ್ ದಿನಾತಿನೊಕು
ಸಾಂಕುದೇಂಗೆ ಮಕ್ಕ ಒಳೊ ನನ್ನ ಹಿಂದೆ॥

ಇಂತ ಗಂಡಗ ಇದ್ದರೇನ್। ಬೊದ್‌ಕಿ ಇದ್ದ್ ಫಲನು ಏನ್।
ಗಂಡನೊಟ್ಟಿಗೆ ಬೊದುಕುವಾಸೆ। ಹೊರಟೋತ್॥
ನಾನ್ ಕೂಲಿ ಕೆಲ್‌ಸ ಮಾಡ್ನೆ। ಗಂಡ ಕುಡ್‌ದ್ ಬಾದು ನೋಡ್ನೆ॥
ನಮ್ಮ ಸಂಸಾರ ಇಂದ್ ಹಾಳಾತ್॥

ಮೊದುವೆ ಗುರ್‌ತು ತಾಳಿನಂಗೆ। ಕುಡ್‌ದ ಮೇಲೆ ಗೊತ್ತ್‌ಲೆ ಅವಂಗೆ।
ಹೆಂಡಕುಡೆಕೆ ತಾಳಿಕಿತ್ತ್। ಅಡೊವು ಇಟ್ಟತ್॥
ಕಯಿಲಿ ಇದ್ದೊಂದು ಚಿನ್ನದ ಬಳೆ। ಕೂಲಿ ದುಡ್ಡುಲಿ ಮಾಡಿಸಿಯೊಳೆ।
ಬಟ್ಟಿ ಸರಾಯ ಕುಡೆಕೆ ಕಿತ್ತ್‌ದ್। ಮಾರಿಯಾತ್॥

ಮನೆ ಹಾಳ್ ಮಾಡುವಗಂಡ। ದಿನಾ ಬೇಕು ಬೀಡಿ ಹೆಂಡ।
ಇಂತ ಜನಂಗ ಉದ್ದಾರ। ಆದು ಯಾಗ?॥
ಎಸ್ಟೊ ಮನೆಲಿ ಹೆಣ್ಣ್‌ನ ಕಥೆ। ನಡಿದು ಹೀಂಗಿ ದೊಡ್ಡವ್ಯರ್ಥೆ
ಎಸ್ಟೊ ಮನೆಲಿ ಹೆಣ್ಣ್‌ಗೆ ಇಲ್ಲೆ ಜಾಗ॥

ಏಕಾಹ ಭಜನೆ

'ಭಜನೆ ಮಾಡಿದ್ ದೇವುರ ನೆನೆವ ಕಾಲ ಒಂದಿತ್ತ್।
ದೇವುರ ಹೆಸರ್ ಹೇಳಿದ್ ಎಲ್ಲಾ ಕೆಲಸ್ ನಡೆತಿತ್ತ್॥
ದೇವುರು ಒಬ್ಬನೆ ಸತ್ಯತೇಳುದು ಜನಕೆ ಗೊತ್ತಿತ್ತ್।
ಸತ್ಯದ ದೇವುರ್‌ಗೆ ನಿತ್ಯನು ಮನೆಲಿ ಭಜನೆ ನಡೆತಿತ್ತ್॥

ದೇವುರ ಭಜನೆ ಹಾಡ್‌ಗ ಆಗ ಎಲ್ಲವುಕೆ ಗೊತ್ತಿತ್ತ್.
ಮನೆಲಿ ಭಜನೆ ಎಂಟ್ ಘಂಟೆಂದ ಮೇಲೆ ನಡೆತಿತ್ತ್॥
ದೇವಸ್ಥಾನನು ಊರ್‌ಗೆ ಆಗ ಒಂದೆ ಇರ್‌ತಿತ್ತ್।
ಪೂಜಾರಿ ಒಬ್ಬನೆ ಗುಡಿಗೆ ಹೋಗಿ ಪೂಜೆ ಮಾಡ್ತಿತ್ತ್॥

ಶ್ರೀ ಹರಿ ಭಜನೆ ದೇವಿ ಭಜನೆ ಎಲ್ಲೆಲ್ಲು ನಡೆತಿತ್ತ್।
ಭಜನೆ ಹಾಡ್‌ಗಳ ಹಾಡ್‌ಕಂಡ್ ಕೋಣಿದು ನೋಡಿಕೆಲಾಯಿಕಿತ್ತ್॥
ಊರ್‌ಲಿ ಏಕಾಹ ಬಜನೆಗ ನಡ್‌ದರೆ ಜನಂಗೆಲ್ಲ ಇರ್ದಲ್ಲೆ।
ನಿದ್ದೆ ಬುಟ್ಟ್‌ದ್ ತಾಳಹೊಡ್‌ಕಂಡ್ ಕೋಣಿತಿದ್ದೊ ಅಲ್ಲೆ॥

ಪೂಜೆ ಹೋಮಕಿಂತಲು ಹೆಚ್ಚಿಗೆ ಭಜನೆಗೆ ಹೆಸರಿತ್ತ್।
ಭಜನೆಗೆ ಮಾತ್ರ ಊರ್‌ನ ಜನರ ಮಾನ್ಯತೆ ಸಿಗ್‌ತಿತ್ತ್॥
ಜಾಕಟೆ ತಾಳ ಮದ್ದಲೆ, ಹಾರ್ಮೋನಿ ಭಜನೆಗೆ ಬೇಕಿತ್ತ್।
ಕುಂಕುಮ ನಾಮನ ಹಣೆಗೆ ಹಾಕಿದ್ ಕುಣಿದರ ನೋಡಕಿತ್ತ್॥

ದೇವರ ಹಾಡ್‌ಗ ಎಷ್ಟೆಸ್ಟೊ ಜನರ ಬಾಯಿಲೆ ಇರ್‌ತಿತ್ತ್।
ಭಜನೆ ಹಾಡ್‌ಗ ಹಾಡಿದ್ ಜನಕೆ ಅಭ್ಯಾಸ ಆಗಿತ್ತ್॥
ದೇವುರ ಪೋಟೊಗಳ ಗೋಡೆಗೆ ಅಂಟಿಸಿ ಭಜನೆ ನಡೆತಿತ್.
ಏಕಾಹ ಭಜನೆಗ ಊರ್‌ಲಿ ಎಸ್ಟೊ ಕಡೆಲಿ ನಡೆತ್ತಿತ್ತ್॥

ಏಕಾಹ ಭಜನೆಗೆ ಎಲ್ಲಿದ್ದರು ಜನಂಗ ನಡ್ಡೆಬಾತಿದ್ದೊ॥
ಗೇಸ್‌ಲಯಿಟ್ ಹೊತ್ತಿಸಿ ಭಜನೆನ ಜನಗೆಲ್ಲ ನೋಡ್‌ತಿದ್ದೊ॥
ಬರುವ ಜನಂಗ ಕುದ್ರಿಕೆ ಮೊಂದ್ರಿನ ಹಿಡ್‌ಕಂಡ್ ಬಾತಿದ್ದೊ।
ನಿದ್ದೆ ಬುಟ್ಟರು ಜನಂಗ ನೋಡಿದ್ ಸಂತೋಷಪಡುತಿದ್ದೊ॥

ಜನಸಂಖ್ಯೆ ಏರುತ ಏರುತ ದೇವುರ ಭಜನೆಗ ಬುಟ್ಟೋತ್।
ಹಿಂದೆನ ಕಾಲದ ಜನಗಳು ಇಲ್ಲದೆ ಕಾಲನೆ ಬದಲಾತ್॥
ಎಲ್ಲಿ ನೋಡಿರು ಸಿನೆಮದ ಹಾಡ್‌ಗ ಹುಡ್‌ಗರ್ ಕಲ್ತಾತ್।
ಹುಡುಗ ಹುಡುಗಿನ ಪ್ರೀತಿ ಮಾಡುವ ದಾರಿನುಕಂಡಾತ್॥

ದಿನಕಳಿಯುತ ಬೆತ್ತಲೆ ಸಿನೆಮಗ ಬಾಕೆಸುರ್ ಆತ್ ।
ಕಣ್ಣ್‌ಗೆ ಇಂಪು ಮನಸಿಗೆ ತಂಪ್ ಜನಕದ್ ಬೇಕಿತ್ತ್॥
ಸಿನೆಮಾ ಹಾಡ್‌ನ ಎದ್‌ರ್‌ಗೆ ಭಜನೆನೆ ಕೇಳವೆ ಇಲ್ಲದಾತ್ ॥
ಬಾಳ್‌ನ ಹಾಳ್ ಮಾಡುವ ಚಟಗಳ ಹೈದ ಗೂಡೆಗ ಕಲ್‌ತಾತ್ ॥

* * * * * *

ಅಂದ್- ಇಂದ್

'ಅಂದ್‌ನ ಕಾಲ ನಮ್ಮದ್। ಇಂದ್‌ನ ಕಾಲ ನಿಮ್ಮದ್।
ಅಂದ್‌ನ ಜನಂಗ ಸತ್ಯ ನ್ಯಾಯನ ಪಾಲಿಸ್‌ತಿದ್ದದ್॥
ಅಂದ್‌ನ ಜನಂಗ ಮೊಣ್ಣ್‌ಲಿ ದುಡ್ಡ್ ಊಟ ಮಾಡ್‌ತಿದ್ದದ್।
ಅಂದ್‌ನ ಜನಂಗ ಭೂಮಿತಾಯಿನ ದೇವುರುತೇಳ್‌ತಿದ್ದದ್॥

ಅಂದ್‌ನ ಜನಂಗ ಭತ್ತರಾಗಿ ಬೆಳೆಸಿ ಉಣ್ಣುತಿದ್ದದ್।
ಇಂದ್ ಭತ್ತನ ಬೆಳೆವೆ ಇಲ್ಲೆ ಹಳ್ಳಿಲೋಗಿ ನೋಡ್ಯದ್॥
ಒಂದನೆ ಎರಡನೆ ಕ್ಲಾಸ್‌ವರೆಗೆ ಜನಂಗ ಓದ್‌ತಿದ್ದದ್।
ಎಸ್ಸೆಲ್‌ಸಿವರೆಗೆ ಓದಿರೆ ಯಾರಾರ್ ಅದೆ ಊರಿಗೆ ದೊಡ್ಡದ್॥

ಅಂದ್ ಬೊದ್‌ಕಿಕೆ ಬಂದಕಸ್ಟ ಇಂದ್‌ನ ಜನಕೆ ಇಲ್ಲೆದ್।
ಇಂದ್ ಪಟ್ಟಣ ಸೇರಿ ಜನಂಗ ಮರ್‌ತೆ ಹೋಗುಟು ಎಲ್ಲದ್॥
ಅಂದ್ ದನಂಗಳ ಸಾಂಕ್‌ತಿದ್ದೊ ಇಂದ್ ದನಂಗ ಎಲ್ಯೊಳೊ।
ಅಮೃತದಂತ ಹಾಲ್ ಕುಡ್‌ದ್ ಜನ ಹಳ್ಳಿಲಿ ಬೊದಿಕೊಳೊ॥

ಅಂದ್ ದನನ ಗೊಬ್ಬರನ ಬೆಳೆಗೆ ಹಾಕ್‌ತಿದ್ದದ್।
ದೇಹಕ್ಕೆ ಶಕ್ತಿ ಕೊಡುವ ಹಣ್ಣ್ ಹಂಪಲ್‌ಗಳನೆ ತಿಂದದ್॥
ಇಂದ್ ವಿಷ ಗೊಬ್ಬರಗ ಕೈಗೆ ನಾವುಗೆ ಸಿಕ್ಕಿದೆ
ಅದರ ಹಾಕಿ ಬೆಳ್‌ಸಿ ತಿಂದರೆ ವಿಷ ಮಯಿಗೆ ಹಬ್ಬಿದೆ॥

ಅಂದ್ ಹಳ್ಳಿಲಿ ಮನೆನ ಸುತ್ತ ಕಾಡ್‌ಲಿ ಮರಗ ಬೆಳ್‌ಸ್ಯೊಳೊ।
ಇಂದ್ ಮರಗ ಕಾಡ್‌ಲ್‌ಲ್ಲೆ ಎಲ್ಲ ಕಡ್‌ದ್ ಮುಗಿಸೊಳೊ॥
ಅಂದ್‌ನ ಕಾಲಲಿ ಕಳ್ಳತನ ಮಾಡೊವ್ಯಾರ್ ಇತ್ತ್‌ಲೆ।
ಇಂನ ದಿನಲಿ ಕಳ್ಳತನ ಮಾಡದ ಜನಂಗ ಇಲ್ಲೆಲೆ॥

ಅಂದ್ ಕಾಯಿಲೆ ಇಲ್ಲದೆ ಜನ ನೂರ್ ವರುಷ ಬೊದಿಕೊಳೊ।
ಇಂದ್ ಪ್ರಾಯಕೆ ಬಾಕೆ ಮುಂದೆ ಅನಾರೋಗ್ಯಲಿ ಬೀಳ್ತೊಳೊ॥
ಇಂದ್ ದೇಶಲಿ ಇರುವ ಜನಂಗ ವಂಚನೆ ಮೋಸ ಮಾಡ್‌ತೊಳೊ।
ಸತ್ಯಕಿಂದ್ ಬೆಲೆ ಕೊಡುವ ಜನಂಗ ದೇಶಲೆಲ್ಯೊಳೊ?॥

ಸತ್ಯ ನ್ಯಾಯ ವಿನಯ ಸಹನೆ ದೇಶಲಿಂದ್ ಎಲ್ಯುಟ್?
ದ್ವೇಷ ಮೋಸ ವೈಮನಸ್ ಜನರಲಿಂದ್ ಬೆಳೆದುಟು॥
ಕ್ರೂರ ಹಿಂಸೆ ಕಪಟತನಂದ ಜನರನಿಲ್ಲಿ ಕೊಲ್ಲ್‌ತೊಳೊ।
ಹೆತ್ತ ಹೆಣ್ಣ್‌ಗೆ ಬೆಲೆಕೊಡದೆ ಮಾನಭಂಗ ಮಾಡ್ತೊಳೊ॥

ಅಂದ್‌ನ ದಿನಲಿ ವೈದ್ಯನಾಗಿ ಊರ್‌ಗೊಬ್ಬ ಇದ್ದೊಳೊ।
ಹಳ್ಳಿ ಜನಕೆ ಕಾಯಿಲೆ ಕಾಣದೆ ಅಂಗಡಿ ಮುಚ್ಚಿ ಹೋಗೊಳೊ॥
ಸತ್ವ ಇರುವ ಆಹಾರನೆ ಅಂದ್‌ನ ಜನಂಗ ತಿಂದೊಳೊ।
ಅದರ್‌ಂದಾಗಿ ಹಳ್ಳಿ ಜನಂಗ ಕಾಯಿಲೆಕಾಣದೆ ಬೊದಿಕೊಳೊ॥

ಅಂದ್‌ನ ದಿನಲಿ ಋಷಿಮುನಿಗ ತಪಸ್ ಧ್ಯಾನ ಮಾಡ್ಯೊಳೊ
ಇಂದ್ ನಂಗೆ ಒಬ್ಬನ ತೋರ್‌ಸಿ ಅಂತ ಸ್ವಾಮಿಜಿಗ್ಯಾರೊಳೊ?
ಹೆಣ್ಣ್ ಕುಲನ ಮಾನ ಕೆಡಿಸಿ ಎಲ್ಲವು ಜೈಲ್ ಸೇರಿಯೊಳೊ।
ಎಲ್ಲತರದ ಮೋಸ ಮಾಡಿದ್ ಜಡ್‌ಜಿ ಎದ್‌ರ್ ನಿಲ್‌ತೊಳೊ॥

ಅಂದ್ ವಿದ್ಯೆ ಕಮ್ಮಿ ಕಲ್‌ತರು ದೊಡ್ಡ ದೊಡ್ಡ ಗ್ರಂಥ ಬರ್ದೊಳೊ।
ಎಷ್ಟೊ ಮಹಾಕಾವ್ಯ ಬರ್ದ್ ಜನಕೆ ಓದಿಕಿರಿಸೊಳೊ।
ಅಂದ್‌ನವರ ಬರಹಕೂಡ ಅಚ್ಚೊತ್ತಿದಾಂಗೆ ಬರ್ದೊಳೊ।
ಇಂದ್ ಡಿಗ್ರಿ ಮಾಡಿದವುನು ಗೀಚ್ ಹಾಕ್‌ತಿರುತೊಳೊ॥

ಅಂದ್ ದೇಶಕೆ ಸ್ವತಂತ್ರ ಸಿಕ್ಕಿಕೆ ಹೋರಾಡಿ ಜನಂಗ ಸತ್ತೊಳೊ।
ಇಂದ್ ಸ್ವಂತ ಜಾಗೆ ಮಾಡಿಕೆ ಮೋಸ ವಂಚನೆ ಮಾಡ್‌ತೊಳೊ॥
ಅವರ ಇವರ ಬುಟ್ಟ್ ಹೊಡ್‌ಸಿ ಜಾಗ ಕಬಳಿಸಿರುತೊಳೊ॥
ಸತ್ಯ ನ್ಯಾಯ ಅಹಿಂಸೆನೆಲ್ಲ ಜನಂಗ ಇಂದ್ ಮರ್ತೊಳೊ॥

* * * * * *

ಹಕ್ಕಿ ಬೇಟೆ

ಆಗ ನಾವು ಸಣ್ಣ ಮಕ್ಕ ಗೊತ್‌ಲೆ ನಾವುಗೆ ಸುಕ ದುಃಖ
ತಟ್ಟೆ ಬಿಲ್ಲ್ ತಕಂಡ್ ಹಕ್ಕಿ ಬೇಟೆಗೋತಿದ್ದೊ।
ಮನೆ ಸುತ್ತ ಇರ್ದುಕಾಡ್ ಅದಲಿ ಇರುವೊ ಹಕ್ಕಿಗ ನೋಡ್
ಬಿಲ್ಲ್‌ಗೆ ಕಲ್ಲ್ ಸಿಕ್ಕಿಸಿ ನಾವು ಹಕ್ಕಿ ಹೊಡೆತಿದ್ದೊ॥

ಒಂದೊ ಎರಡೊ ಹಕ್ಕಿಗ ಅಲ್ಲ ಕೆಲವು ಜಾತಿ ಹಕ್ಕಿಗಳೆಲ್ಲ
ಬಿಲ್ಲ್ ಕಲ್ಲ್‌ಲಿ ಹೊಡ್ದ್ ಸುಟ್ಟಾಕಿ ತಿನತಿದ್ದೊ।
ಕೊಟ್ಟುಕುಡಲೆ ಕೇನೆ ಮಂಜಳ ಮೋಟಳು ಸಗಣಿ ಕಾರನ ಹುಡ್ಕಿ
ಕಲ್ಲ್‌ಗೊಂದೆರಾಂಗೆ ಹೊಡ್ದ್ ಹಕ್ಕಿ ತಾತಿದ್ದೊ॥

ಚಿಟ್ಟೆ ಹಕ್ಕಿನು ಬುಡಟ ಇಲ್ಲೆ। ಹೊಡ್ದ ಗುರಿನು ತೊಪ್ಪಟ ಇಲ್ಲೆ
ಅಸ್ಟ್ ಗುಗಿಕಾರರ್ ನಾವು ಎಲ್ಲವು ಆಗಿದ್ದೊ॥
ಒಂದ್ ಕಲ್ಲ್‌ಗೊಂದ್ ಹಕ್ಕಿ ಹೊಡ್ದ್ ಅದರ ತಾವೊ ಹೆರಿಕಿ
ಹಕ್ಕಿ ಬೇಟೆ ಮಾಡಿ ನಾವು ಖುಶಿ ಪಡ್‌ತಿದ್ದೊ॥

ಹಕ್ಕಿ ಚೊಲ್ಲಿ ಹೊಟ್ಟೆ ಬಗ್ದ್ ಉಪ್ಪು ಹುಳಿ ಮೆಣಸ್ ಹಾಕಿ
ಬಾಳ್ಲೆಲದರ ಸುತ್ತಿ ಕೆಂಡದೊಳಗೆ ಇಸ್‌ತಿದ್ದೊ।
ಐದ್ ಮಿನಿಟ್ ಕಾದ್ ಕುದ್ದ್ ಮತ್ತೆ ಕೆಂಡಂದ ಹೊರಗೆ ತೆಗ್ದ್
ಸುಡುವ ಬಿಸಿ ಇರಿಕನದರ ನಾವು ತಿನ್‌ತಿದ್ದೊ॥

ಸುಟ್ಟ್ ತಿಂದರೆ ಹಕ್ಕಿನ ರುಚಿನ ಈಗ ಹೇಳಿಫಲನೆ ಇಲ್ಲೆ।
ಕರ್ ಕುರ್‌ಂತ ಎಲುನು ಬುಡೆದೆ ಅಗ್ ತಿನ್‌ತಿದ್ದೊ॥
ನಮ್ಮ ಹಾಂಗೆ ಊರ್‌ಲಿ ಮಕ್ಕ ಅಡ್‌ಚೆಲ್, ಸಿಡಿಲಿ ಹಕ್ಕಿನ ಹಿಡ್ದ್
ಹಕ್ಕಿ ಗೈಪು ಕೂಡ ಜನಂಗ ಮನೆಲಿ ಮಾಡ್‌ತಿದ್ದೊ॥

ನಮ್ಮ ಕಡೆಲಿ ತಟ್ಟೆ ಬಿಲ್ಲ್ ಕೊಡ್ಗ್‌ನವು ಕೇಟರ್ ಬಿಲ್ಲ್
ಎಲ್ಲ ಮಕ್ಕಳ ಆಸೆ ಒಂದೆ ಹಕ್ಕಿ ಹೊಡಿದು॥
ರಜೆ ಇದ್ದ ದಿನನ ಎಲ್ಲ ಮಕ್ಕ ಕೆಲವು ಸೇರಿ ಎಲ್ಲ।
ಮನೆಂದ ದೂರ ದೊಡ್ಡ ಕಾಡ್‌ಲಿ ಬೇಟೆಯಾಡುದು॥

ಇತ್ತ ಪೇಟೆ ಸೇರ್ದಮೇಲೆ ಹಕ್ಕಿ ಬೇಟೆ ಬುಟ್ಟೆ ಹೋತ್
ಹಕ್ಕಿಗೆಲ್ಲ ಕಾಡ್ ಒಳಗೆ ತುಂಬ ಖುಶಿಲೊಳೊ॥
ಅಂದ್ ಬೇಟೆ ಮಾಡ್ದ ಮಕ್ಕ ಇಂದ್ ಬೆಳ್ದ್ ದೊಡ್ಡವಾಗಿ
ಒಳ್ಳೆ ಬುದ್ಧಿ ಕಲ್ತ್ ಹಕ್ಕಿ ಬೇಟೆ ಬುಟ್ಟೊಳೊ॥

* * * * * *

ತಿಮ್ಮನ ಮೊದುವೆ

ತಿಮ್ಮನ ಮೊದುವೆಲಿ ಚಪ್ಪರದೂಟ ಬಾರಿ ಜೋರಿತ್ತ್।
ಚಪ್ಪರದೂಟಕೆ ಬಂದ ಜನಗೈದ್ ಸಾವಿರ ಮೇಲಿತ್ತ್॥
ನಾನ್ ಎಂದೂ ನೋಡದ ತಿನ್‌ಸ್‌ಗ ಆ ಊಟಕೆ ಇತ್ತ್।
ಉಂಬಕೆ ಬಂದ ಜನಗಳೆ ದೊಡ್ಡ ಜಾತ್ರೆನಾಂಗಿತ್ತ್॥

ಕಾಡಂದಿ ಕುರಿಕೋಳಿ ಹಳ್ಳದ ಮೀನ್‌ನು ಆ ಊಟಕೆ ಇತ್ತ್।
ಎಷ್ಟೆ ಉಂಡರು ತಿಂದರು ಇನ್ನೂ ತಿನೊಕುತಾತಿತ್ತ್॥
ಬ್ರಾಂಡಿ ಬೀರ್ ಏನೇನು ಬೇಕು ಕುಡೆಕೆ ಅಲ್ಲಿತ್ತ್।
ಚಪ್ಪರದೂಟಕೆ ಹೋದ ಜನಕೆ ಹೊತ್ತೆ ಮರ್ತೋಗ್‌ತ್॥

ಉಂಬಕೆ ಕುದ್ದ ಚಪ್ಪರದಡಿಲಿ ಬೀದಿ ನಾಯಿಗ ಸೇರಿದ್ದೊ।
ಒಂದೆರಡಲ್ಲ ಹಿಂಡ್ ಹಿಂಡಾಗಿ ನಾಯಿಗ ಬಂದಿದ್ದೊ॥
ಘಮಘಮ ವಾಸನೆ ಗೈಪುದು ನಾಯಿನ ಮೂಕ್‌ಗೆ ಹೊಡೆದಿರ್ದೊ।
ಅಲ್ಲಿ ಇಲ್ಲಿ ಎಲುಗಳಿಗಾಗಿ ಕಚ್ಚಾಡುತಲಿದ್ದೊ॥

ಕುಡ್ಡವರೆದ್‌ರ್ ನಾಯಿಗ ಬಂದರೆ ಕಾಲ್‌ಲಿ ಒದಿತಿದ್ದೊ।
ಕುಡ್ದದ್ ಹೆಚ್ಚಾಗಿ ನಾಯಿಗೆ ಒದ್ದ್‌ದ್ ಕುಡ್ಡವೆ ಬೀಳ್‌ತಿದ್ದೊ॥
ಹೆಣ್ಣ್‌ಗ ಬೇರೆ ಗಂಡ್‌ಗ ಬೇರೆ ಬೇರೆ ಹಂತಿಲಿಕುದ್ದಿದ್ದೊ।
ಯಾರೆ ಎಷ್ಟೆ ಉಂಡರು ಇನ್ನೂ ಕೇಳಿದ್ ಇಕ್ಕುತಿದ್ದೊ॥

ಅವನೂರ್‌ಲಿ ಕಾಡ್‌ಲಿ ಬೇಟೆನ ಜನಂಗ ಎಲ್ಲವೂ ನಿಲಿಸಿದ್ದೊ।
ಹಾಂಗಾಗಿ ಕಾಡ್‌ಲಿ ಎಲ್ಲೆಲ್ಲು ಕಾಡ್ ಹಂದಿಗ ತುಂಬಿದ್ದೊ॥
ಬತ್ತದ ಪೈರ್‌ಗೆ ಕಾಡಂದಿ ಬಾದುಂತ ಬೆಡಿನವು ಕಟ್ಟಿದ್ದೊ।
ಕಟ್ಟಿದ ಬೆಡಿಗೆ ಕಾಡಂದಿಗ ಬಂದ್‌ದ್ ಎರಡವು ಬಿದ್ದಿದ್ದೊ॥

ಖಾಲಿಯಾದ ಫೋರಿನ್ ವಿಸ್ಕಿನ ಕುಪ್ಪಿಗೆ ಬಟ್ಟೆಸರಯ ತುಂಬಿದ್ದೊ।
ಟೇಬಲ್ ಮೇಲೆನೆ ಇಸಿದ ಕುಪ್ಪಿಗ ಕಣಕಣ ತೇಳ್‌ತಿದ್ದೊ॥
ಫಾರಿನ್ ವಿಸ್ಕಿನ ಬಾಟ್ಲಿನ ಕಂಡ್‌ದ್ ಅದರನೆ ಕುಡೆತಿದ್ದೊ।
ಇಸಿದ ಎಲ್ಲಾ ಕುಪ್ಪಿಂದ ಕುಡ್ದ್‌ದ್ ಖಾಲಿಮಾಡಿದ್ದೊ॥

ಘೋರಿನ ವಿಸ್ಕಿನ ನಿಧಾನ ತಲೆಗೆ ಹತ್ತುದುತೇಳ್‌ತಿದ್ದೊ।
ಎಂಟತ್ತ್ ಸಾವಿರ ಬೆಲೆನೂ ಕುಪ್ಪಿಗೆ ಉಟ್ಟುತೇಳುತಿದ್ದೊ॥
ತಿಮ್ಮನ ಚಪ್ಪರದೂಟಕೆ ಬ್ರಾಂಡಿ ಬೀರ್ ಒಂದುನು ಖರ್ಚಾತ್ಲೆ॥
ಪೋರಿನ್ ಬಾಟ್ಲಿಲಿ ಬಟ್ಟಿ ಸರಯಿತ್ತ್‌ಂತ ಯಾರಿಗು ಗೊತ್ತಿತ್ಲೆ॥

ತಿಮ್ಮ ಮದುವೆಲಿ ಚಪ್ಪರದೂಟದ ಗೌಜದ್ ಹಂಗಿತ್ತ್।
ಎಲ್ಲೆ ಉಂಡರು ಇಂತ ಊಟನ ಮರೆಕೆನೆ ಜನಬೊತ್ತ್।
ತಿಮ್ಮನ ಮನೆಲಿ ಇನ್ನೊಮ್ಮೆ ಜಂಬರ ಇದ್ದರೆ ನೀವ್ ತಿಳಿಸಿ।
ಮದುವೆ ಇದ್ದರೆ ಖಂಡಿತ ಮರಿಯದೆ ಕಾಗದ ನೀವ್ ಕಳಿಸಿ॥

* * * * * *

ಕಿಡ್ಡಾಸ ಹಬ್ಬ

ನಮ್ಮೂರ ಹಳ್ಳಿಲಿ ಮಾಡುವ ಹಬ್ಬಗ
ಕೆಲವೊಂದು ನಂಗೀಗ ಮರತೋಗ್ಟು
ಯಾಕೇಂತೇಲಿರೆ ಹಳ್ಳಿನ ಬುಟ್ಟ್‌ದ್
ಪೇಟೆನ ನಾನ್ ಸೇರಿಯಾಗ್ಟು।

ಬಿಸು ಸಂಕ್ರಮಣ ಕಿಡ್ಡಾಸ ಹಬ್ಬಂತ
ಎಲ್ಲಾ ಹಬ್ಬಕ್ಕು ಹೆಸರುಟ್ಟು॥
ಹುತ್ತರಿ ಕೈಲ್‌ಮೂರ್ತಾ‌ತೇಳಿದ್ ದೊಡ್ಡ
ಹಬ್ಬಗ ಇನ್ನೂ ಕೆಲ ಉಟ್ಟು॥

ಕಿಡ್ಡಾಸ ಹಬ್ಬದ ಹಾಡ್‌ನ ಒಂದರ
ಪದ್ಯಲಿ ಬರ್ದನೆ ನಾನಿಲ್ಲಿ॥
ಅದರಾಚರಣೆ ನಮ್ಮೂರ್‌ಲಿ ಮಾಡಿವೆ।
ರೈತರ ಎಲ್ಲಾ ಮನೆಗಳಲಿ॥

ಕಿಡ್ಡಾಸ ತೇಳಿರೆ ಮೂರು ದಿನನೂ
ಮಾಡುವ ಒಂದ್ ಹಬ್ಬ ಅದ್॥
ಎಲ್ಲಾ ಕೃಷಿಕರು ಜೀವನದುದ್ದಕು
ಪಾಲಿಸಿಕಂಡ್ ಬಂದೊಳದ್॥

ಒಕ್ಕಲ್ ಮಾಡಿದ ಭತ್ತನ ತಂದ್‌ದ್
ಪೂಜಿಸುವ ಹಬ್ಬನೆ ಕಿಡ್ಡಾಸ॥
ಈ ಹಬ್ಬನ ಪೊನ್ನಿ ತಿಂಗಳಲೆಲ್ಲೊವು
ಆಚರಿಸುತಿದ್ದವೆ ಸಂತೋಷ॥

ಸುರ್‌ನ ದಿನಲಿ ಭತ್ತನ ತಂದ್‌ದ್
ಭತ್ತ ಯಾರ ಮನಗೋಕೆ ಬೊತ್ತ್‌ಂತ।
ಹಾಂಗೆ ಹೇಳಿದ್ ಕೊಮ್ಮೆನ ಒಳಗೆ

ಮನೆವೆ ಭತ್ತನ ತುಂಬಿವೆಂತ॥
ಚೂರಿ ಮುಳ್ಳುನ ಹರಿತದ ಕತ್ತಿನು
ಭತ್ತನ ಮೇಲೆನೆ ಇಸಿವೆಂತ।
ಇರಿಸಿದ ಮೇಲೆ ಇನ್ನೊಂದು ಕಲ್ಲ್‌ನ
ಅದರ ಮೇಲೆನೆ ಮೊಡ್‌ಗಿವೆಂತ॥

ದಿನ ಮೂರರವರೆಗು ಹಾಕಿದ ಭತ್ತನ
ಯಾರು ತೆಗೆಕೆ ಬೊತ್ತ್‌ಂತ।
ಹಿಂದೆನ ಕಾಲಂದ ನಡ್ಕಂಡ್ ಬಂದ
ಕ್ರಮನೆ ಇರ್ದದ್ ಹಾಂಗೆತ್ತ॥

ಇಲ್ಲಿ ದೇವುರ ನೆನ್ಸಿದ್ ಭಕ್ತಿಂದ
ಕೈಗಳ ಭತ್ತಕೆ ಮುಗ್ದವೆಂತ।
ಹಿರಿಯರ್ ಮಾಡಿದ ಎಲ್ಲಾ ಪದ್ದತಿ
ಒಂದುನು ಬುಡದೆ ಮಾಡಿವೆಂತ॥

ಇಸ್ಟಕ್ಕೆ ಮುಕ್ತ್‌ಲೆ ಎರಡನೆ ದಿನನೂ
ಮಾಡುವ ಹಬ್ಬನ ನೋಡಿಂತ॥
ಕಾಡ್‌ಲಿ ಬೇಟೆಗೆ ಜನಗಳ ಸೇರಿದ್
ಕೂಡ್ ಬೇಟೆನ ಆಡಿವೆಂತ॥

ದಿನ ಎರಡರಲಿ ಜಾಲ್‌ನ ಗುಡ್‌ಸಿದ್
ಸಗಣಿ ಸಾರಿದ್ ಶುದ್ಧ ಮಾಡಿವೆಂತ।
ಎಲ್ಲವು ಮಡಿ ಬಟ್ಟೆ ಹಾಕಂಡ್ ಅಂದ್
ಮಿಂದ್‌ದ್ ಪೂಜೆ ಮಾಡಿವೆಂತ॥

ಇನ್ನ್ ಕೆಲಜನ ಕೋಳಿಕಟ್ಟಕೆ
ಹೂಂಜಗಳ ರೆಡಿ ಮಾಡಿವೆಂತ।
ಕಟ್ಟದ ಕೋಳಿಗ ಒಂದೆರಡಲ್ಲ।
ಬಂದವು ಎಲ್ಲವು ತಂದವೆಂತ॥

ಕಿಡ್ದಾಸ ಹಬ್ಬಲಿ ಎರಡನೆ ದಿನಲಿ
ಮಾಸ ತಿನ್ನದವು ಯಾರ್ ಒಳೊ?।
ಹೆಣ್ಣ್ ಗಂಡ್‌ಗ ಎಲ್ಲರ ಮನೆಲೂ
ಪೆಗ್ಗ್ ಹಾಕದವು ಯಾರ್ ಒಳೊ॥

ಬಿಸ್ ಸಂಕ್ರಮಣ ಕಿಡ್ಡಸ ಹಬ್ಬಲಿ
ಊರೂರ್‌ನ ಹಳ್ಳಿಲಿ ಮಾಡಿವವು।
ಮೊನ್‌ಷಂಗೆ ಅದ್ ಮನರಂಜನೆಯಾದರು
ಕೋಳಿಗೆ ಎಸ್ಟೊ ಸತ್ತವವು॥

ಇನ್ನೆಸ್ಟೊ ಜನ ಕಿಡ್ದಾಸ ಹಬ್ಬಲಿ
ಮೀನ್ ಬೇಟೆನ ಮಾಡಿವವು॥
ಎಲ್ಲಾ ಹಬ್ಬನ ಗೌಜಿಲಿ ಮಾಡಿದ್
ತುಂಬಾ ಹರುಷಲಿ ಇದ್ದವವು॥

ಕೆಲ ಜನಂಗೆಲ್ಲ ಕಾಯರಕಾಯಿ
ಉಮರೆ ಬಳ್ಳಿನ ಗುದ್ದಿದವು
ಅದರ ಜೊತೆಗೆ ಬೂದಿನ ಸೇರಿಸಿ
ಹಳ್ಳದ ಮೀನ್‌ಗಳ ಹಿಡ್ದವವು॥

ಇನ್ನ್ ಕೆಲ ಜನ ಕಾಯಿಕುಟ್ಟವ
ಸ್ಪರ್ಧೆನ ಬಾಣೆಲಿ ಮಡ್ಗಿವೆವು॥
ನೂರಾರ್ ಕಾಯಿಗಳ ಪಂಥಕೆ ಕುಟ್ಟಿದ್
ಗೆದ್ದರು ಸೋತರು ಖುಷಿ ಪಟ್ಟವವು॥

ಎಲ್ಲಾ ಕಾಯಿಗಳ ಕುಟ್ಟಿಕೆ ತಂದರೆ
ಖಂಡಿತವಾಗಿನು ಒಡ್ಡವವು।
ಕುಟ್ಟುವ ಕಾಯಿಗಳ ಮರಗಳೆ ಬೇರೆ
ದಕ್ಷಿಣ ಕನ್ನಡಲಿ ಬೆಳ್‌ಸಿವವು॥

ಮೂರನೆ ದಿನಲಿ ಜಾಲ್‌ನ ಗುಡ್‌ಸಿದ್
ಸಾರಿಸಿದ್ ಶುಚಿಗೊಳಿಸಿಯವು।
ಬೇಕಾದ ವಸ್ತುಗ ಆಗನ ಪೂಜೆಗೆ
ಎಲ್ಲನು ತಯಾರ್ ಮಾಡಿವವು॥

ಎಣ್ಣೆ ಮಿಳ್ಳಿಲಿ ಎಣ್ಣೆ ತಂದ್‌ದ್
ಭೂಮಿ ತಾಯಿಗೆ ಹೊಯ್ದವವು॥
ಮತ್ತೆ ಅಲ್ಲಿಗೆ ಪೂಜೆಗ ಮಾಡಿದ್
ಭೂಮಿಗೆ ನಮಸ್ಕರಿಸಿವವು॥

ಕಿಡ್ಡಾಸ ತೇಳುವ ದೊಡ್ಡ ಹಬ್ಬನ
ಹಿಂಗೆಲ್ಲ ಮಾಡಿದ್ ಮುಗಿಸಿವವು॥
ಮುಂದಿನ ವರ್ಷದ ಫೆಬ್ರವರಿ ತಿಂಗಲಿ
ಪುನಹ ಹಬ್ಬನ ಮಾಡಿವವು॥

* * * * * *

ವಧುವರರ ಅನ್ವೇಷಣೆ (ಹುಡುಕಾಟ)

ಹೈದಂಗಳೂ ಗೂಡೆಗೆಲ್ಲ ಬಂದೊಳಿಲ್ಲಿ।
ಗಂಡ್‌-ಹೆಣ್ಣ್‌ಗೆ ಹುಡ್ಕಾಟ ನಡ್ದದಿಲ್ಲಿ।
ಗೂಡೆಗೆಲ್ಲ ತುಂಬ ಒಳೊ ನೋಡಿ ಇಲ್ಲಿ।
ಹೈದಂಗಳೂ ಕಮ್ಮಿ ಇಲ್ಲೆ ಕುದ್ದೊಳಲ್ಲಿ।

ಇಂದ್ ಹುಡ್ಕಾಟ ಮಾಡಿಕೆ ಇಲ್ಲೆ ಬಂಗ
ಇದರ ಏರ್ಪಾಡ್ ಮಾಡಿದೆ ಗೌಡ ಸಂಘ।
ನೋಡಿ ತುಂಬ ಪೊರ್ಲು ಒಳೊ ಎಸ್ಟೊ ಗೂಡೆಗ
ಮಿೂಸೆ ಮೆತ್ತಂಗುಜ್ಜುತೊಳೊ ಕೆಲವು ಹೈದಂಗ।

ಇಂದ್ ನಿವ್ಗೆ ಅಂಜಿಕಿಲ್ಲೆ ಗೂಡೆ ನೋಡಿಕೆ।
ಮನ್ಸ್‌ಲಿದ್ದದೆಲ್ಲ ನೀವು ಅವ್ಕೆ ಹೇಳಿಕೆ ॥
ಗೂಡೆ ಒಪ್ಪಿಕಾದರವಳ ಕೇಳಿಕಣೆ ।
ಎದ್‌ರ್ ಬದ್‌ರ್ ಕುದ್ದ್ ಮಾತಾಡಿಕಣೆ॥

ಎಣ್ಣೆ ಕಪ್ಪು ಗೂಡೆಂತೇಳಿ ಬುಡ್‌ಬಡಿ ಅವಳ ।
ಪೊರ್ಲು ಉಟ್ಟು ವಿದ್ಯೆ ಉಟ್ಟು ಒಪ್ಪೊ ಅವಳ।
ಹೈದ ಕೂಡ ಕಪ್ಪು ಇರ್ದು ನೋಡಿ ಲಕ್ಷಣ।
ತಡಬೇಡ ಮಾತಾಣ್ಕಣಿ ನೀವು ಈ ಕ್ಷಣ॥

ತಲೆಲಿ ಕೂದಲಿಲ್ಲೆಂತೇಳಿ ಬೇಜಾರೆಂತಕೆ?
ತಲೆಕೂದಲ್ ಲೆಕ್ಕಚಾರ ನೀವ್ಗೆ ಎಂತಕೆ?
ಉಳ್ಳ್‌ದೆಲ್ಲ ಒಪ್ಪಿಕಾತೊ ನೋಡಿಕಾಕನ
ನೀವ್ನ ಕೂದಲ್ ಉದುರಿಹೋದು ಪ್ರಾಯ ಆಕನ।

ಅಲ್ಲಿನೋಡಿ ಕುಳ್ಳ ಅಂವ ಹಿಂದೆ ಕುದ್ದವ।
ಕೈಲಿ ದುಡ್ಡು ಎಸ್ಟೊ ಉಟ್ಟು ಏನು ಮಾಡ್ದಂವ।
ಸಣ್ಣ ಗೂಡೆಗಿದ್ದರೆ ನೋಡಿ ಅವನ ಒಟ್ಟಿಗೆ
ಮಾತಡ್ಕಂಡ್ ಹಾಕಿ ನೀವು ಅವನ ಬುಟ್ಟಿಗೆ ।

ಆಸ್ತಿ ಎಸ್ಟ್ ಉಟ್ಟುಂತೇಳೀ ಕೇಳ್ದು ಎಂತಕೆ?
ಅದ್ ಎಸ್ಟೆ ಇರ್ಲಿ ಅಪ್ಪ ಅವ್ವ ಅವರ ಸ್ವಂತಕೆ.
ಮೊದುವೆ ಗಡ್ದ್ ಮಾಡಿ ಅವು ಹೆಣ್ಣ್‌ಕೊಟ್ಟವೆ।
ಸುಖಲಿ ಬಾಳಿ ನೀವುಂತೇಳಿ ಹರ್ಸ್‌ಬುಟ್ಟವೆ॥

ಆ ಬೆಳ್ಳಂಗುದ್ದ ಇರುವ ಗೂಡೆ ಎಸ್ಟ್ ಪೊರ್ಲುಟ್ಟು।
ಹಕ್ಕಲೋಗೆ ಮಾತಾಡಿಸವಳ ನೋಡಿ ಕಣ್‌ಬುಟ್ಟ್
ಒಳ್ಳೆ ವಿದ್ಯೆ ನಡೆ ನುಡಿ ಗೂಡೆದ್ ಉಟ್ಟು!
ಇನ್ನ್‌ಯಾಕೆ ಗೊತ್ತ್‌ಲೆ ಗೂಡೆಗೆ ಮೊದುವೆ ಆಗದೆ ಉಟ್ಟು ॥

ಹೊರಗೆ ಲವ್ ಮಾಡ್ದವೆಲ್ಲ ಇಲ್ಲಿ ಬರ್ಬಡಿ।
ಅಲ್ಲು ಇರ್ಲಿ ಇಲ್ಲೂ ಇರ್ಲಿ ಹಾಂಗೆ ತಿಳಿ ಬಡಿ"
ಕಟ್ಟಿಕಂಡ ಹೆಣ್ಣೆ ಸಾಕ್ ಹೊರಗೆ ಹೋಬಡಿ।
ಇಟ್ಟ್‌ಕಂಡ್ ಹೆಣ್ಣೋಂದಿರ್ಲಿ ಹಾಂಗೆ ತಿಳಿಬಡಿ।

ಎರಡ್ ದೋಣಿಲಿಸಿದ್ ಕಾಲ್ ಮುಳುಗಿ ಹೋಬಡಿ।
ಉಸಿರ್ ಕಟ್ಟಿ ನೀರ್‌ಕುಡ್ದ್ ನೀವು ಸಾಯ್ಬಡಿ।
ಒಂದ್ ಹೆಣ್ಣ್‌ಗೂಂದ್ ಗಂಡ್ ಇರುವ ಜೀವನ
ಇಬ್ಬೊರಿಗೂ ಅದುವೆ ಸ್ವರ್ಗ ಕಾಂಬೊ ಅನುದಿನ।

ಒತ್ತಾಯಲಿ ಯಾರು ಮೊದುವೆ ಮಾಡಿಕಾಗದ್।
ಮತ್ತೆ ಯಾರು ಅದರ ಗೋಳ್ ನೋಡಿಕಾಗದ್।
ಕೊಟ್ಟ ಹೆಣ್ಣ್ ಅತ್ತ್‌ಕಂಡ್ ಬಾದು ತವುರಿಗೆ।
ಕಟ್ಟಿಕಂಡ ಗಂಡ ನೋಡ್ದು ದಿಕ್ಕ್ ಬೇರೆಗೆ॥

ಮೊದುವೆ ಆಗಿ ಹದ್ದ್ ಬಸ್ತ್‌ಲಿಸೊಕು ಗಂಡನ।
ಕೆಲವು ಜನಕೆ ಮಾತ್ರ ಹೇಳ್ನೆ ಎಲ್ಲೊವು ಒಂದೆನಾ?
ಬುದ್ಧಿವಾದ ಹೇಳ್ನೆ ಇದ್ ನನ್ನ ಕೆಲ್ಸದ್।
ಗಂಡ ಒಳ್ಳಂವಿರುದೊ ತಿಳಿದು ನಿವುಗೆ ಬುಟ್ಟಿದ್।

ಹೆಣ್ಣ್ ಹೆತ್ತವೆಲ್ಲ ಬೇಗ ಮೊದುವೆ ಮಾಡುಕು।
ಇಲ್ಲದಿದ್ದರೆ ಅಪ್ಪ ಅವ್ವ ಕೊರ್ಗುದು ನೋಡೊಕು।
ದಿನಾ ಹಗಲ್ ರಾತ್ರಿಯೆಲ್ಲ ನಿದ್ದೆ ಬುಟ್ಟ್‌ದ್।
ಗಂಡನೊಟ್ಟಿಗೆ ಹೆಣ್ಣ್ ಜಗಳ ಊಟ ಬುಟ್ಟದ್।

ಜನಂಗಕೇಳ್ವೊ ಮಗಳ ಮೊದುವೆ ಯಾಕೆ ಮಾಡ್ತಲೆ।
ಅಪ್ಪ ಅವ್ವ ಹೇಳಿವವಳ ಓದ್ ಮುಕ್ತ್‌ಲೆ।
ಒಳ್ಳೆಗಂಡಸಿಕ್ಕಿರೆ ಗೂಡೆ ಓದುದೆಂತಕೆ।
ಅವಳ ಓದ್ ಅಸ್ಟ್ ಒಳ್ಳಗಂಡಂಗೆಂತಕೆ?

ಕೆಲವು ಜನಕೆ ಓದಿ ಓದಿ ಪ್ರಾಯಕಳ್ದದೆ।
ವಿದ್ಯೆಂದಾಗಿ ಅದ್ಕೆ ಮೊದುವೆ ಪ್ರಾಯ ಮೀರಿದೆ।
ಮತ್ತೆ ಗಂಡ ಸಿಕ್ಕಕೆ ಹೆಣ್ಣ್ ಕಣ್ಣೀರ್ ಹಾಕೊಕು।
ಹೋಗಿ ಬಂದಲೆಲ್ಲ ಮನೆಲಿ ಗಂಡುಟ್ಟೊ ಕೇಳೊಕು।

ಅಪ್ಪ ಅವ್ವಂಗೆ ಹೆಸರ್ ಬೇಕು ಇಂಜಿನಿಯರ್ ಡಾಕ್ಟ್ರಂತ।
ಅಸ್ಟ್ ಓದಿ ಮುಗಿವವರೆಗೆ ಮೊದುವೆ ಇಲ್ಲೆಂತ।
ಅದ್ಕೆ ಮೊದಲೆ ಹುಡುಗರೆಸ್ಟೊ ಬಂದ್ ಹೋದವೆ।
ಪ್ರಾಯ ಆದ ಮೇಲೆ ಮತ್ತೆ ಆಕಾಶ ನೋಡಿವೆ.॥

ಜಾತಿ ಕುಲ ಬೊಳಿನ ನೋಡಿ ಮೊದುವೆ ಮಾಡಿವೆ.
ಗಣಕೂಟಕೂ ಹೆಚ್ಚಿ ಕಮ್ಮಿದ್ದರೆ ಬೇಡಂತೇಳಿವೆ।
ಗಣಕೂಟ ಸರಿಯಿದ್ದರೂ ಜಗಳ ನಡ್ದದೆ।
ಸಣ್ಣ ಕಾರಣಕ್ಕೆ ಹೊಡ್ದಾಟ ನಡ್ದದೆ।

ವಧೂವರರ ಹುಡ್ಕಾಟ ಪದ್ಯ ಬರ್ದೊಳೆ।
ಇದರ ಓದಿ ಇದರಾಂಗೆ ನೀವು ನಡ್ದರೆ॥
ಗೌಡ ಸಂಘ ಮಾಡ್ದಕೆಲ್ಸ ಆದೆ ಸಾರ್ಥಕ ।
ಇದರ ಒಪ್ಪಿ ನಡಿನಿ ನೀವು ಮನಪೂರ್ವಕ ॥

* * * * * *

ಊರಬ್ಬಕ್ಕೆ ಹೋಗಿದ್ದೆ

ಗೆಳೆಯನ ಒಟ್ಟಿಗೆ ಊರ್‌ನ ಹಬ್ಬಕ್ಕೆ,
ಹೇಳಿತ್ ಬಾಕೆ ನಾ ಹೋದೆ॥
ಅವನಾ ಮನೆಲಿ ಸಿಕ್ಕಿತ್ ನಂಗೆ।
ತುಂಬಾ ತರತರ ಮೊರಿಯಾದೆ॥

ಗೆಳೆಯನ ಊರ್‌ಲಿ ಕುರಿ ಕೋಣಗಳ
ಹಬ್ಬಕ್ಕೆ ಬಲಿನ ಕೊಡುತಿದ್ದೊ॥
ಊರ್‌ನ ಪದ್ಧಿತಿ ಹಾಂಗಿದ್ದರು ಕೆಲಜನ।
ಅದ್‌ಕೆ ವಿರುದ್ಧ ನಿಂತಿದ್ದೊ॥

ಊರ್‌ಲಿ ಜನಗಳ ಮನಸೊಂದಾದರು।
ಊರ್ ಗೌಡನ ಮನಸೆ ಅದ್ ಬೇರೆ।
ಪ್ರಾಣಿ ಪಕ್ಷಿಗಳ ಪ್ರೀತಿಸುತಿದ್ದೊ
ಗೌಡ್ರ್ ನಿಜಕೂ ಮನಸಾರೆ॥

ನ್ಯಾಯ ಧರ್ಮಗಳ ತಿಳಿಯದ ಜನಂಗಳೆ
ಆ ಊರ್‌ಲಿ ಇರ್ದು ಅವೆ ಹೆಚ್ಚ್।
ದೇವಿನ ಒಲಿಸಿಕಂಡಿದ್ದಾ ಗೌಡ್ರು
ದೇವಿನ ಆರಾಧಿಸುದು ಹೆಚ್ಚ್॥

ಊರ್‌ನ ರಕ್ಷಕ ದೇವಿ ಆರಾಧಕ।
ಬುಡುದುಲೆ ಪ್ರಾಣಿನ ಬಲಿಕೊಡಿಕೆ॥
ಊರ್‌ನ ಜನಕೆ ಇರುವಾ ಮನಸ್।
ಬಲಿ ಕೊಟ್ಟರೆ ಸಿಕ್ಕಿದೆ ತಿಂಬಕೆ॥

ಊರ್‌ನ ಗೌಡರೊಟ್ಟಿಗೆ ನಿತ್ತವೆ
ಊರ್‌ನ ಜನ ಜಗಳಾಡಿಕೆ॥
ಎಷ್ಟೆ ಜಗಳನ ಆಡಿರು ಕೂಡಾ
ಗೌಡ್ರ್‌ಗೆ ಇಲ್ಲೆದ್ ಲೆಕ್ಕಕ್ಕೆ॥

ಒಳಗೊಳಗೆ ಜನ ಪಿಸು ಪಿಸುಗುಟ್ಟಿವೆ
ಎದ್‌ರ್‌ಗೆ ಯಾರೂ ಬರಟಿಲ್ಲೆ।
ಹಿಂದದಳೆ ಜನ ಏನ್ ಮಾತಾಡಿರು
ಎದ್‌ರ್‌ಗೆ ಬಾಕೆ ಧೈರ್ಯ ಇಲ್ಲೆ॥

ತುಂಬಾ ವಿದ್ಯೆ ಬುದ್ಧಿಲಿ ಚತುರನು
ಗೌಡ್ರುಗೆ ಸರಿ ಸಮ ಯಾರಿಲ್ಲೆ।
ಮಂತ್ರಿಗ ಅಲ್ಲದೆ ದೊಡ್ಡದೊಡ್ಡವು ಎಲ್ಲಾ
ಇಂದೊಳೊ ಅವರಾ ಕೈಯಲ್ಲೆ॥

ಊರ್ ಎಜಮಾನಂಗೆ ಬುದ್ಧಿನ ಕಲಿಸಿಕೆ
ಕೆಲವು ಜನಂಗ ಅವು ಒಂದಾಗಿ।
ಏನೇನೊ ಉಪಾಯ ಮಾಡುತ ಇದ್ದವೆ
ಒಳಗೊಳಗೆ ಅವು ಗುಟ್ಟಾಗಿ॥

ಮೊನ್ನೆನ ದಿನ ಆ ಕಳ್ಡಾ ಹಬ್ಬಲಿ
ಊರ ಮೈದಾನದಲೊಂದ್ ಸಭೆ ಮಾಡ್ದೊ।
ಮೈದಾನಲಿ ಸೇರಿದ ಜನರ ಉದ್ದೇಶಿಸಿ
ಯಜಮಾನನೆ ಭಾಷಣ ಸುರ್‌ಮಾಡ್ದೊ॥

ಭಾಷಣ ಮುಗಿಸಿದ್ ಸ್ಟೇಜಿಂದ ಹೋಕನ
ಯಾರೆಲ್ಲ ಬಂದವೆ ಅವರ ಕಾಲೆಳಕೆ।
ಗೌಡ್ರ್‌ಗೆ ಗೊತ್ತ್‌ಲೆ ಕಾಲೆಳಿವಾ ಕಥೆ
ಕಾಲೆಳ್‌ದೊವು ಬಿದ್ದವೆ ಅಲ್ಲೆ ನೆಲಕೆ॥

ನಾವುಗೆನೆ ಗೊತ್ತ್‌ಲೆ ಎಂತಕೆ ಬಿದ್ದದ್
ಕಾಲೆಳವ ವಿಷಯದ್ ಗೊತ್ತಾಗಿ।
ಹರಳೆಣ್ಣೆ ಕಾಲಿಗೆ ಹಚ್ಚಿಕಂಡೋಗಿದ್ದೊ
ಕಾಲೆಳೆವನೆ ಬೀಳೊಕು ಕೈ ಜಾರಿಹೋಗಿ॥

ಬಿದ್ದವುಕಲ್ಲಿ ಮುಖಭಂಗನು ಆತ್
ದೇವಿ ಆರಾಧಕನ ವಿರುದ್ಧ ಅವು ಹೋಗಿ।
ಯಾರೆ ಆಗಲಿ ತಪ್ಪಿಲ್ಲದೆ ಕೇಡ್‌ನ
ಬಯಸಿಕೆ ಆಗದ್ ನಾವಾಗಿ॥

ಮುಂದೆಗೆ ಇದೊಂದು ಪಾಠನು ಆತ್
ಕಾಲೆಳೆಕೆನೆ ಬಂದ ಅವರ್‌ಂದಾಗಿ।
ಎಲ್ಲಿಗು ಹೋದರು ಸಭ್ಯತೆ ಕಲೆಕುಂತ
ಈ ಪದ್ಯನ ಬರ್ದಳೆ ಅವುಕಾಗಿ॥

* * * * * *

ಬೊಟ್ಯನು ತಿಮ್ಮನು

ಬೊಟ್ಯನು ತಿಮ್ಮನು ತುಂಬಾ ಸಮಯಂದ ದೋಸ್ತಿಗ ಆಗಿದ್ದೊ|
ದಿನ ಬೊಳ್‌ಪಾದರೆ ದನಗಳ ಮೇಸಿಕೆ ಬಾಣೆಗೆ ಬರುತಿದ್ದೊ||
ತಿಮ್ಮನು ಬೊಟ್ಯನು ಬೇರೆ ಬೇರೆನೆ ಯಜಮಾನರ ಮನೆಲಿದ್ದೊ|
ದನಗಳ ಮೇಸುತ ಅವರಾ ಮನೆಲಿ ಕೂಲಿನು ಮಾಡ್‌ತಿದ್ದೊ||

ದನಗಳ ಮೇಸುವ ಕೆಲ್ಸನೆ ಆದರು ನೆಮ್ಮದಿಲಿ ಇದ್ದೊ|
ಎಂತಾ ಕೆಲ್‌ಸನ ಮಾಡಿರು ಏನಗಡ ನ್ಯಾಯಲಿ ಇರುತಿದ್ದೊ||
ಮನೆಲಿ ಅಡಿಗೆ ಏನೆ ಮಾಡಿರು ಇವುಕೆನು ಕೊಡುತಿದ್ದೊ|
ಇಬ್ಬರ ಗುಣಗ ಒಳ್ಳೆದ್ ಮನೆಲಿ ಮನೆ ಜನರಾಂಗಿದ್ದೊ||

ದನಗಳ ಮೇಸಿಕೆ ಹೋಗಿದ್ ಕಾಡ್‌ಲಿ ಬೇಟೆ ಆಡ್‌ತಿದ್ದೊ|
ಬಿಲ್ಲ್‌ಗೆ ಸಿಕ್ಕಿದ ಹಕ್ಕಿನ ಕಾಡ್‌ಲೆ ಸುಟ್ಟಾಕಿ ತಿಂಬೊತಿದ್ದೊ||
ಕಾಡ್‌ಲಿ ಸಿಕ್ಕುವ ಹಣ್ಣ್‌ಗಳೆಲ್ಲನು ಕಿತ್ತ್‌ದ್ ತಿನ್‌ತಿದ್ದೊ||
ಮಧ್ಯಾನದೂಟಕೆ ಬಾಳ್‌ಲೆ ಬಾಡಿಸಿ ಬುತ್ತಿ ತರುತಿದ್ದೊ||

ಕೋಲ್‌ಜೇನ್, ಮುಜಂಟಿ, ಹುತ್ತದ ಜೇನ್, ಕಾಡ್‌ಲಿ ತಿನುತಿದ್ದೊ|
ಕಲಬೆರಕಿಲ್ಲದ ಒಳ್ಳೊಳೆ ತಿನ್‌ಸ್ ಇಬ್ಬೊರು ತಿನುತಿದ್ದೊ||
ಕುರೆಗಳ ಆಟ ಆಡಿಕೆ ಎಲ್ಲಾ ಮರಗಳ ಹತ್ತ್‌ತಿದ್ದೊ|
ಆಡಿಕನಲ್ಲಿ ಗೆಲ್ಲ್‌ಗ ಮುರ್‌ದ ಮರಂದ ಬೀಳ್‌ತಿದ್ದೊ||

ಹಿಂಬೊತ್ತ್ ಹಟ್ಟಿಗೆ ಬಾಕನ ರಾಗಲಿ ದನಿನ ಕೊಡುತಿದ್ದೊ|
ತಮಾಷೆ ಹಾಡ್‌ಗಳಿಬ್ಬೊರ್ ಹಾಡಿ ನಗ್‌ತಿದ್ದೊ||
ಕಳಿಯಕೆ ಕೂಡ್‌ಸಿಕೆ ಇಬ್ಬೊರು ಕೂಡ ಲೆಕ್ಕನ ತಿಳಿದಿದ್ದೊ
ನೋಡಿಕೆ ಕೂಡಾ ಇಬ್ಬೊರು ದೊಡ್ಡ ಜಟ್ಟಿಗಳಾಂಗಿದ್ದೊ||

ಎರಡೂ ಕಡೆನ ದನಕರ್‌ಗೊಟ್ಟಿಗೆ ಅರ್‌ವತ್ತರ ಮೇಲಿದ್ದೊ|
ಕಾಡ್‌ಲೆ ದನಗಳ ಒಂದುನು ಬುಡದೆ ಹೊಡ್‌ಕಂಡ್ ಬಾತಿದ್ದೊ||
ಹಟ್ಟಿಗೆ ತಂದ್‌ದ್ ದನಕರ್‌ಗೆಲ್ಲ ಕುಡೆಕೆನು ಕೊಡುತಿದ್ದೊ|
ಕರ್‌ಗಳ ಬೇರೆ ಕಟ್ಟಿದ್ ದನಗಳ ಒಟ್ಟಿಗೆ ಕೂಡ್‌ತಿದ್ದೊ||

ಒಂದಿನ ಬಾಣೆಲಿ ಹೋರಿಗ ಎಲ್ಲಾ ಗುಟ್ರು ಹಾಕ್ತಿದ್ದೊ।
ತಿಮ್ಮನ ಒಂದ್ ಹಸ್ ಅಂಬಾಂತ ಹೋರಿನ ಕರಿದು ಕೇಳ್ತಿದ್ದೊ॥
ಕರಿವ ಶಬ್ದನ ಕೇಳಿದ್ ಹೋರಿಗ ತಲೆ ಎತ್ತೆತ್ತಿ ನೋಡುತಿದ್ದೊ॥
ಆ ಶಬ್ದನ ಕೇಳಿದ್ ಹೋರಿಗ ಹುತ್ತ ಮೊಣ್ಣನ ಕೆರೆತಿದ್ದೊ॥

ಹಸ್‌ನ ವಿಷಯ ಗೊತ್ತಾಗಿ ಹೋರಿಗ ಕಡ್‌ಸ್‌ನ ಹುಡುಕುತಿದ್ದೊ।
ಹೋರಿಗಳಕ್ಕಲೆ ಹಸ್‌ನ ಬಾದರ ಹೋರಿಗ ನೋಡಿದ್ದೊ॥
ತಿಮ್ಮನ ಹೋರಿನು ಎಂಕನ ಹೋರಿನು ಹಸ್‌ನಕ್ಕಲೆ ಓಡಿದ್ದೊ।
ಬುಸ್‌ಗುಟ್ಟುತ ಹೋರಿಗ ಎದ್‌ರೆದ್‌ರಾಗಿ ಸಿಟ್ಟ್‌ಲೆ ನಿತ್ತಿದ್ದೊ॥

ಎಂಕನ ಹೋರಿ ಹಸ್‌ನಾ ಹಕ್ಕಲೆ ಧೈರ್ಯಲಿ ಮುಂದೋತ್
ಸುಮ್ಮನೆ ಇತ್ತ್‌ಲೆ ಬೊಟ್ಯನ ಹೋರಿನು ಅದ್‌ಕಿಂತ ಮುಂದೋತ್॥
ಎಂಕನ ಹೋರಿ ಬೊಟ್ಯಾನ ಹೋರಿಗೆ ಕುತ್ತಿಕೆ ನಿತ್ತತ್ತ್।
ಬೊಟ್ಯನ ಹೋರಿನು ಎಂಕನ ಹೋರಿಗೆ ತಲೆ ತಲೆ ಕೊಟ್ಟತ್ತ್॥

ಎರಡೂ ಹೋರಿಗು ಹಸ್‌ನಾ ಎದ್‌ರೆ ಕುತ್ತಾಟ ನಡ್‌ದೋತ್।
ಅದರ ನೋಡಿದ ಹಸ್ ಬೇರೆನೆ ಹೋರಿನ ಒಟ್ಟಿಗೆ ಓಡ್ಯೋತ್
ಎರಡೂ ಹೋರಿಗಳ ಜಗಳನ ನೋಡಿದ್ ಮೈಯ್ಯೆ ನಡೊಗ್ಯೋತ್
ಮರಕೆ ಹತ್ತಿದೊ ಇಬ್ಬೊರು ಕೂಡಾ ಮನಸ್ಸೆ ಹೆದಿರ್‍ಯೋತ್॥

ಕುತ್ತಿಕಂಬ ರಭಸಕೆ ದೂಳೆದ್ದ್‌ದ್ ನೆಲಂದ ದೂಳ್ ತುಂಬಿ ಹೋತ್।
ಎರಡೂ ಹೋರಿಗು ಗೆಲ್ಲೊಕುತೇಳುವ ಗರ್ವನು ಹೆಚ್ಚಾತ್॥
ಸಣ್ಣ ಗಿಡ್ಡೆ ಹರಂಡಿದ ಬಲ್ಲೆಗ ಎಲ್ಲನು ಪುಡಿ ಪುಡಿಯಾತ್।
ಪ್ರಾಣಿಗಳಸ್ಟ್ ರೋಷನು ಇರೊವು ಯಾವುದು ಇಲ್ಲೆಂತ ನಂಗಾತ್॥

ಎರಡೂ ಹೋರಿಗಳ ಜಗಳನ ಖಂಡಿತ ಹೇಳಿಕೆನೆ ಬೊತ್ತ್।
ಯಾಕೆಂತೇಳಿರೆ ದನಕಾಯವೆ ಹೇಳ್ಡೊ ಜಗಳನೆ ಹಾಂಗಿತ್ತ್॥
ತಿಮ್ಮನ ಹೋರಿ ಕಾಳಗಕಿಳ್‌ದ್ ಕಾಲ್ ಒಂದ್ ಮುರ್ದೋತ್।
ಬೊಟ್ಯನ ಹೋರಿಗು ಗಂಟಲ್‌ಸೀಳಿ ಹೋರಿನೆ ಸತ್ತೋತ್॥

ಮರಲಿ ಕುದ್ದವು ಇಬ್ಬೊರು ಕೂಡಾ ಕಾಳಗ ನೋಡ್ಯಾತ್।
ಹೋರಿನು ಸತ್ತ್ ಮುರ್ದ್‌ದ್ ಕಾಲ್ ನೋಡಿದ್ ಇಳ್‌ದಾತ್।
ಎರಡು ಕಡೆ ದನ ಒಟ್ಟಿಗೆ ಮೇಯಿಸಿದ ತೊಪ್ಪಿಗೆ ಹೀಂಗಾತ್।
ಪಾಪದ ಇಬ್ಬೊರು ದನ ಕಾಯೋವು ಅವುಕೆ ಇಂತ ಕಸ್ಟಾತ್॥

ದನಕರ್ ಹಳ್ಳಿಲಿ ಸಾಂಕವುಯಾರೊಳೊ ಕಾಲನೆ ಬದಲಾತ್।
ಹಳ್ಳಿಲಿ ಬಾಣೆಗೆ ಇಲ್ಲದೆ ಅದರ್ಲಿ ಮನೆಗಳ ಕಟ್ಯಾತ್।
ಶುದ್ಧ ಹಾಲ್ ಸಿಕ್ಕದೆ ಜನಂಗ ಪರದಾಡಿಕೆ ಆತ್।
ದನಗಳಗೊಬ್ಬರ ಸಿಕ್ಕದೆ ಹಳ್ಳಿಲಿ ಕಸ್ಟಪಡಿಕೆ ಅವುಕಾತ್॥

ದನಕರ್ ಇದ್ದವು ಇದ್ದದರೆಲ್ಲ ಕಸಾಯಿ ಖಾನೆಗೆ ಮಾರಿಯಾತ್।
ಪದ್ಯನ ಬರಿಯಕೆ ಮೇಪತ ಹೈದಂಗ ಹೇಳಿದ ಕಥೆನೂ ನೆನಪಾತ್॥
ಹಳ್ಳಿಲಿ ಬೆಳೆಗಳ ಬೆಳ್‌ಸಿಕೆ ಗವರ್‌ನಮೆಂಟ್ ವಿಷ ಗೊಬ್ಬರಗಳ ಕೊಟ್ಟಾತ್।
ಮೊನುಷ್ಯರ್ ತಿಂಬೊದು ಕುಡಿದು ಎಲ್ಲಾ ಖಂಡಿತ ಹೇಳಿನೆ ವಿಷ ಆತ್॥

* * * * * *

ಗಡ ಗಡ ಸುದ್ದಿ ಗಡ

ಗಡ ಗಡ ಸುದ್ದಿ ಗಡ।
ಕೆಂಚ ಮೊದುವಾದೆ ಗಡ।
ಪೆದ್ದೂರುಲಿರ್ದುಗಡ।
ಕಣ್ಣ ವಂದ್ ಓರೆಗಡ।
ಒಂದ್ ಕಯಿಕುಂಟ್‌ಗಟ।
ಮಾತ್ ಸರಿ ಬಾದುಲೆಗಡ।
ಅವಂಗೆ ಯಾರೂ ಇಲ್ಲೆಗಡ।
ಇರ್ದು ಅವ ಒಬ್ಬಗಡ।
ಮೊದುವೆ ಅವಂಗೆ ಆಕುಗಡ।

ಪ್ರಾಯ ಐವತೆಂಟ್ ಗಡ।
ಮೊದುವೆ ಗೌಜಿ ಮಾಡ್‌ದೆಗಡ।
ಊರ ಜನಕೆ ಊಟಗಡ।
ಹಾಕೊಕುಂತ ಉಟ್ಟುಗಡ।
ಹಂದಿ ಕೋಳಿ ಗೈಮು ಗಡ।
ರೊಟ್ಟಿ ಕಡ್‌ಂಬಿಟ್ಟ್‌ಗಡ।
ಅಪ್ಪದಿಟ್ಟ್ ಉಟ್ಟುಗಡ।
ನೀರ್ ದೋಸೆ ಮಾಡ್‌ದೆಗಡ।
ಓಡ್‌ದೋಸೆ ಬೊಡ್ಡಿಟ್ಟ್ ಗಡ ॥೧॥

ಊಟ ತುಂಬಾ ಜೋರ್‌ಗಡ।
ಕುಡಕೆ ಬೀರ್ ಬ್ರಾಂಡಿಗಡ।
ಬೊಯಿನೆ ಮರದ ಕಳ್ಳ್‌ಗಡ।
ಮನೆಲಿ ಮಾಡ್ದ ಸರಯಗಡ।
ಭತ್ತದ ಸರಾಯ ಬೇರೆಗಡ।
ಬೆಲ್ಲದ ಸರಯ ಉಟ್ಟುಗಡ।
ಒಂದೆ ಪೆಗ್ಗ್ ಹಾಕಿರೆಗಡ।
ತಲೆ ಗಿರ್‌ಗಿರಾದೆಗಡ।

ಒಂದೆ ಮೊದುವೆ ಆದುಗಡ।
ಮೊದುವೆ ಆದ ಮೇಲೆಗಡ।
ಬೇರವರ ಹಕ್ಕಲೆ ಹೋಕಿಲೆಗಡ।
ಕೆಲವರಾಂಗೆ ಅವಲ್ಲಗಡ।
ಬೇರೆ ಹೆಣ್ಣ್ ಬೇಡಗಡ।
ಒಳ್ಳೆ ಗುಣ ಇವಂದ್ ಗಡ।
ಇವನ ನೋಡಿ ಬೇರೆವುಗಡ।
ಒಳ್ಳ ಗುಣನ ಕಲೆಕುಗಡ।
ಕೆಂಚ ನಂಬಿಕಸ್ತಗಡ ॥ಗ॥

ಒಳ್ಳೆ ಒಂದ್ ದಿನಗಡ।
ಶಾಸ್ತ್ರ ಕೇಳಿಸಿ ನೋಡ್ತ್‌ಗಡ।
ಜೋತಿಷಿ ಲೆಕ್ಕ ಹಾಕಿತ್‌ಗಡ।
ಹೆಣ್ಣ್ ನೋಡಿಕೆ ಹೋಕೆಗಡ।
ಒಳ್ಳೆ ದಿನನ ಹೇಳ್ತ್ ಗಡ।
ಮನಂದ ಅಂದೆ ಹೊರ್ಟತ್‌ಗಡ।
ಪೇಂಟ್ ಶರ್ಟ್ ಹಾಕಿಗಡ।
ಹೆಣ್ಣ್ ಇರುವ ಮನೆಗೆ ಗಡ।
ಊರೊಳಗೆನೆ ಉಟ್ಟುಗಡ ॥ಗ॥

ಮೀಸೆ ಕಪ್ಪು ಮಾಡ್ತ್‌ಗಡ।
ಕನ್ನಡಿ ಎದ್‌ರ್ ನಿತ್ತತ್‌ಗಡ।
ಮೀಸೆ ತಿರ್‌ಗಿಸಿ ನೋಡ್ತ್ ಗಡ।
ಗಡ್ಡ ಬೆಳ್‌ದಿತ್ತ್‌ಗಡ।
ಕೆರ್‌ದ್ ಅದರ ತೆಗ್‌ತಗಡ।
ಕಯಿಲಿ ಮುಟ್ಟಿ ನೋಡ್‌ತ್‌ಗಡ।
ಅವಂಗೆ ಖುಷಿ ಆತ್‌ಗಡ।
ಹೆಣ್ಣ್ ಇವನೆ ನೋಡಿರೆಗಡ।
ಅದ್‌ಕೆ ಖುಷಿ ಆದುಗಡ ॥ಗ॥

ಹೆಣ್ಣ್ ಮನೆಗೆ ಹೋತ್‌ಗಡ।
ಹೆಣ್ಣ್‌ನಪ್ಪ ಇತ್ತ್‌ಗಡ।
ಅಪ್ಪಂಗೆ ವಿಷಯ ಹೇಳ್‌ತ್‌ಗಡ।
ಅವಂಗೆ ಖುಷಿ ಆತ್‌ಗಡ।
ಅವನ ಮಗಳ ಕರ್‌ತ್‌ಗಡ।
ಒಪ್ಪಿಯೊಂತ ಗೂಡೆನ ಕೇಳ್‌ತ್‌ಗಡ।
ಗೂಡೆ ಇವನ ಒಪ್ಪಿತ್‌ಗಡ।
ಇವಂಗೆ ತುಂಬ ಬೇಜರಗಡ।
ಗೂಡೆ ಬಾರಿ ಕಪ್ಪ್ ಗಡ॥ ಗಡ। ಗಡ॥

ಕೆಬಿ ಕೇಳುದುಲ್ಲೆಗಡ।
ಎತ್ತರ ಆರ್ ಅಡಿಗಡ।
ಎರಡ್ ಕಣ್ಣು ಮೆಳ್ಳೆಗಡ।
ಬುಕ್ಕಿ ಮಾತಾಡ್‌ದೆ ಗಡ।
ಪೇಂಟ್ ಹಾಕಿತ್ತ್‌ಗಡ।
ಒಂದ್ ಕಾಲ್ ಗಿಡ್ಡಗಡ।
ಕೈಲಿ ಏಳ್ ಬೆರಳ್‌ಗಡ।
ಕೂದಲ್ ಉದುರಿ ಹೋಗುಟುಗಡ।
ತುಂಬಾ ಅದೃಷ್ಟದ ಗೂಡೆಗಡ ॥ಗ॥

ಗೂಡೆ ಬೇಡಂತ ಹೇಳ್‌ತ್‌ಗಡ।
ಅವಂಗೆ ಬೇಜಾರಗಡ।
ಕೆಂಚ ಅಲ್ಲಿಂದ ಬಾತ್‌ಗಡ।
ಒಟ್ಟು ನೊಡ್‌ದ ಗೂಡೆಗಗಡ।
ಏಳ್ ಗೂಡೆಗ ಆತ್‌ಗಡ।
ಗೂಡೆಗಳಿಗೆಲ್ಲ ಊನಗಡ।
ಒಂದುನು ಸರಿ ಇಲ್ಲೆಗಡ।
ಕೆಂಚಂಗೆ ಮೊದುವೆ ಬೇಡಗಡ।
ಗೂಡೆ ನೋಡಿಕೆ ಇನ್ನೋದುಲೆಗಡ
ಇದವನ ಕೊನೆ ಮಾತ್‌ಗಡ। ಗಡ।

ಊರ್‌ಗೆ ಪುನ ಬಾತ್‌ಗಡ।
ಕೆಂಚ ಊರ್‌ಲಿ ಉಟ್ಟುಗಡ।
ಒಂದ್ ಎಕ್ಕರೆ ಹೊಲಗಡ।
ಅದರ್ಲಿ ಕೆಲ್‌ಸ ಮಾಡ್ವೆಗಡ।
ಅಸ್ಟ್ ಅವಂಗೆ ಸಾಕ್‌ಗಡ।
ಕೆಂಚಂಗೆ ಹೆಣ್ಣ್ ಕೊಡವುಗಡ।
ಗೂಡೆಗಿರುವ ಮನೆವುಗಡ।
ಕೆಂಚನ ಮನೆಗೆ ಹೋಕುಗಡ।
ಅಲ್ಲೆ ಮೊದುವೆ ಆಕುಗಡ ||ಗಡ||

ಗೂಡೆ ಒಪ್ಪಿಗೆ ಆದರೆ ಗಡ।
ಅವ ಮೊದುವಾದೆ ಗಡ।
ಡವುರಿ ಅವಂಗೆ ಬೇಡಗಡ।
ಗೂಡೆ ಪೊರ್ಲ್ಲು ಇರೊಕುಗಡ।
ಅವಂಗೆ ಅಸ್ಟೆ ಸಾಕ್ ಗಡ।
ಊಟ ಬಾರಿ ಗದ್ದಲ ಗಡ।
ಹೇಳ್ದ ಹಾಂಗೆ ಮಾಡ್ದೆಗಡ।
ಗೌಡ್ರ ಗೂಡೆನೆ ಬೇಕುಗಡ।
ಗೂಡೆನ ಪೊರ್ಲ್ಲುಲಿ ಸಾಂಕಿದೆಗಡ ||ಗ||

ಈಗ ಬಂದ ಸುದ್ದಿಗಡ।
ಹೆಣ್ಣ್ ಒಪ್ಪಂದ ಆತ್‌ಗಡ।
ಗೂಡೆ ಪೊರ್ಲ್ಲು ಉಟ್ಟುಗಡ।
ಕೆಂಚಗೂಡೆನ ಒಪ್ಪಿತ್‌ಗಡ।
ಕೆಂಚಂಗೆ ಲಾಟ್ರಿ ಹೊಡ್‌ತ್‌ಗಡ।
ಎಸ್ಟ್ ದುಡ್ಡ್ ಗೊತ್ತ್‌ಲೆಗಡ।
ಗೂಡೆಗು ಇಸ್ಟ ಆತ್‌ಗಡ।
ಇನ್ನ್ ತಡ ಮಾಡ್‌ಸುಲೆಗಡ।
ಮೊದುವೆಗೆ ಎಲ್ಲವು ಹೋಕುಗಡ ||ಗ||

ಮಂಗಳೂರು ಬೇಂಡ್‌ಸೆಟ್ಟ್‌ಗಡ।
ಮನೆಲಿ ಮೊದುವೆ ಮಾಡ್‌ದೆಗಡ।
ಚಪ್ಪರ ತುಂಬಾ ದೊಡ್ಡದ್‌ಗಡ।
ಬಂದವು ಎಲ್ಲವು ಕುದ್ರಿಕೆಗಡ।
ಬೆಂಡದ ನೀರ್ ಕುಡೆಕೆಗಡ।
ನೆಲಲಿ ಕುದ್ರುದು ಅಲ್ಲಗಡ।
ಬೆಂಚಿಮೇಲೆನೆ ಊಟಗಡ।
ಕವರ್ ಬಹುಮಾನ ಬೇಡಗಡ।
ಆಶೀರ್ವಾದ ಮಾಡಿರೆ ಸಾಕ್‌ಗಡ ॥೧॥

* * * * * *

ಆರೋಗ್ಯಕ್ಕೆ ತರಕಾರಿ

ಜನಂಗ ಬಯಸಿವೆಲ್ಲ ಅವರ ಆರೋಗ್ಯನ।
ಅದ್ಕೆ ದಿನಾ ತಿನೊಕು ಎಲ್ಲಾ ತರಕಾರಿನ।
ಆರೋಗ್ಯ ಕೊಡುವ ಎಲ್ಲಾ ತರದ ಕಾಯಿ ಪಲ್ಯನ
ತಿಂದ್ ಕಾಪಾಡಿ ನಡೆಸಿ ಸುಖದ ಜೀವನ॥

ಬದನೆ ಕಬ್ಬಿಣಂಶ ತೊಂಡೆ ಕಣ್ಣ್‌ಗೊಳ್ಳದ್।
ತಿನೊಕುತೇಳುವ ಮನಸ್ ಬೇಕು ಅದ್ ನಿಮ್ಮದ್।
ತರಕಾರಿ ಕೊಡುದು ಜನಕೆ ಚುರುಕು ಬುದ್ದಿನ
ಹಣ್ಣ್ ಹಂಪಲ್ ಕೊಟ್ದು ದೇಹಕೆ ತುಂಬಾ ಚೇತನ॥

ಕುಂಬಳಕಾಯಿ ಸೋರಿತೆಕಾಯಿ ಸೋರೆಕಾಯಿನ್
ತಿನೊಕು ಜನರ ದೇಹ ತುಂಬ ಹೀಟ್ ಆಕಾನ।
ಹಗಲಕಾಯಿ ಕಂಹಿ, ಸಕ್ಕರೆ ಕಾಯಿಲೆಗೊಳ್ಳದ್।
ದೇಹ ಅಕ್ಕರೆಯಾಗಿ ಇಸಿಕೆ ಒಳ್ಳೆ ಮೊದ್ದದ್।

ಮೂಲಂಗಿ ಬೆಂಡೆಕಾಯಿ ಬೀನ್ಸ್ ರುಚಿ ಸಾಂಬಾರ್।
ಬೀಟ್‌ರೋಟ್ ಕೇರೆಟ್ ದೇಹಕೆ ತುಂಬಿದೆ ನೆತ್ತರ್।
ಕಬ್ಬಿಣದಂಶ ಇರುವ ಕೇಬೇಜ್ ಮಾಡಿ ಪಲ್ಯನ।
ನೂಕೋಲು ಗೌರಿಕಾಯಿ ನೀವು ಮಾಡಿ ಸಾಂಬಾರ್‌ನ॥

ದೀವು ಕುಜ್ಜೆ ಹಲಸ್ ಕುಜ್ಜೆ ಪಲ್ಯಕೊಳ್ಳದ್।
ಮೂಂಡಿ ಕೇನೆ ಗೆಂಡೆ ಜೀವ ಶಕ್ತಿ ತುಂಬುದು।
ಹರಿವೆ ಬಸಲೆ ದಂಟ್‌ನ ಸೊಪ್ಪು ದೇಹಕೊಳ್ಳದ್।
ಎಲ್ಲ ಮನೆಲಿ ಬೆಳಿವ ಸೊಪ್ಪು ಆರೋಗ್ಯಕೊಳ್ಳದ್।

ಎಷ್ಟೆ ತಿಂದ್‌ರು ತರಕಾರಿ ಬಿಡಿಯಟಿಲ್ಲೆದ್।
ಎಲ್ಲ ತರಕಾರಿ ಸುಲಭ ಜೀರ್ಣ ಆಗುದು।
ಏನೆ ತರಕಾರಿ ತಿಂಬಕೆ ಬೇಜಾರಾಕಿಲೆ
ತರಕಾರಿ ನಸ್ಟ್ ಒಳ್ಳದ್ ಯಾವುದು ಇರಿಕಿಲೆ।

ಪಿತ್ತಕೊಳ್ಳದ್ ಕಂಯಿ ಹುಳಿ ಪೊಜ್ಜಿ ಮಾಡೊಕು।
ಸಕ್ಕರೆ ಇದ್ದರೆ ಬಾಳೆ ಪೂಂಬೆ ಪಲ್ಯ ಮಾಡೊಕು।
ದೇಹಕೆ ಬೇಕಾದ ವಿಟಾಮಿನ್‌ಗ ತರಕಾರಿಲಿದ್ದದೆ।
ರಕ್ತ ಸಂಚಾರ ದೇಹಲಿ ಸರಿಯಾಗಿ ನಡ್ದದೆ॥

ಕಾಳ್‌ಗಳನು ತಿಂದರೆ ತುಂಬ ಆರೋಗ್ಯಕೊಳ್ಳದ್।
ಮೊಳಕೆ ಬರ್ಸಿ ತಿಂದರೆ ದೇಹರಕ್ತ ಹೆಚ್ಚುದು।
ಕೆಲವು ಬಗೆನ ಕಾಳ್‌ಗಳ ಪದನಿಕಾಕಿದ್।
ಖಾಲಿ ಹೊಟ್ಟೆಗೆ ತಿಂದರೆ ಲಾಭ ನಿವುಗೆ ಗೊತ್ತಾದು॥

ಏನೇನೊ ತಿಂದ್ ಡಾಕ್ಟ್ರಹಕ್ಕಲೆ ಮೊದ್ದುಗೋದರೆ
ಡಾಕ್ಟರ್ ಹೇಳಿವೆ ಕಾಯಿಲೆ ಗುಣಾದು ಮಾಸ ಬುಟ್ಟರೆ॥
ಡಾಕ್ಟರ್ ಮಾತ್ ಕೇಳದೆ ನಾಲಿಗೆ ರುಚಿ ನೋಡಿರೆ।
ಕಾಯಿಲೆ ಬಿದ್ದ್ ಸೋತರವರ ಯಾರ್ ನೋಡಿರೆ?

* * * * * *

ಇಬ್ಬರ ಗಂಡ

ಅಯ್ಯೊ ಬೊಟ್ಯನ । ಏನ್‌ಂತೇಳುದು ।
ಎರಡ್ ಮೊದುವವ ಆಗುಟ್ಟು ।
ಅವಂಗೆ ಪ್ರಾಯಲಿ । ಗೊತ್ತೆ ಆತ್‌ಲೆ
ಈಗವ ಮಾತ್ರ । ಅಳುತುಟ್ಟು ॥

ಅತ್ತ ಕಡೆಬರೆ । ಇತ್ತ ಕಡೆ ಹುಲಿ।
ಅವನ ಕಥೆ। ಹಾಂಗಾಗುಟ್ಟು ॥
ಅಂದವ ಆಶೆಗೆ । ಬಿದ್ದ್‌ದ್ ಬೊಟ್ಯ ।
ಈಗವ ಒದ್ದಾಡುತ ಉಟ್ಟು॥

ಗೂಡೆಗೆ ಸಣ್ಣ ಪ್ರಾಯ ಇರಿಕನ ।
ಸುರ್‌ದರ ಮೊದುವೆ। ಆಗಿತ್ತ್ ।
ಎರಡನೆ ಮೊದುವೆ। ಆಕನ ಅವನ
ಪ್ರಾಯನು ಅವಂಗೆ । ಮೀರಿತ್ ॥

ಗುಡ್ಡೆ ಹತ್ತುವೆ। ಇಳಿವೆಂತಿತ್ತಾ ಧೈರ್ಯ
ಆದರೆ ಅದ್ । ಕೈ ಕೊಟ್ಟತ್ತ್ ।
ಗುಡ್ಡೆ ಹತ್ತುದು । ಇಳಿದುನು ಕಸ್ಟ
ಮೊದುವೆ ಆದಮೇಲೆ। ಗೊತ್ತಾತ್ ॥

ಗೂಡೆ ಪಟ್ಟಕೆ । ಏರಿಕನ ಗಂಡ ।
ಚಟ್ಟಕ್ಕೆ ಹೋಕೆರೆಡಿಯಾಗಿತ್ತ್
ಎರಡನೆ ಹೆಣ್ಣ್ । ಇವನ ಮೇಲೆನೆ।
ಎಲ್ಲೆ ಹೋದರು। ಬೀಳ್‌ತಿತ್ತ್।

ಹುಡ್‌ಗರ್ ಯಾರೂ। ಕೇಳ್ಬಡಿ ಈಗ।
ಬೊಟ್ಯನ ಮನೆ ಅದ್। ಎಲ್ಯುಟ್ಟು?।
ನಿವುಗದ್ ಬೇಡ। ಬೊಟ್ಯನ ಸಂಗತಿ
ಎಲ್ಲಿಗೊ ಈಗವ। ಓಡ್ಯೋಗ್ಟು।

ಲವ್‌ಮಾಡಿ ಮೊದುವೆ ಆದವೆಂತಾದರೆ
ಕೆಲ ಹೆಣ್ಣ್‌ಗಳ ಸಾಂಕಿಕೆ ಕಸ್ಟುಟ್ಟು|
ಅವು ಹೇಳ್ದಾಂಗೆನೆ ಗಂಡ ಕೇಳೊಕು
ಹಾಂಗೊಂದವುಕೆ। ಉಟ್ಟು॥

ಪ್ರೀತಿಸಿ ಮೊದುವೆ । ಆದ ಕೆಲಜನ।
ಗಂಡಂಗ ಪಟ್ಟವೆ । ಅತೀ ಕಸ್ಟ|
ಮೂಗ್‌ದಾರ ಇಲ್ಲದ ಕೆಲ। ಗೂಡೆಗಳ ಕಟ್ಟಿಕಂಡ್
ಪಡುತೊಳೊ ಇಂದಿಗೂ ಸಂಕಸ್ಟ॥

ಎರಡ್ ಗೂಡೆಗಳ। ಮೊದುವೆ ಆಕಂಡ್
ಸುಖಲಿ ಇರವ। ಯಾರುಟ್ಟು?
ಎಲ್ಲರ ಎದ್‌ರ್ ನೆಗಾಡುರು ಅಂತವ
ಒಳಗಡೆ ಬೇನೆನೆ। ಬೇರುಟ್ಟು॥

ಒಬ್ಬಳ ಮೊದುವೆ। ಆಗಿದ್ ನೀವು।
ಇರಿ ಬಾಳುವೆ। ನಿವುಗೆ ಇರುವಸ್ಟ್|
ಇಬ್ಬರ ಮೊದುವೆ। ಆಬಡಿ ಬೊಟ್ಯನ
ಪದ್ಯನ ನೆನಪಿಡಿ ಆದಸ್ಟ್ ॥

* * * * * *

ಬಂದೆ ಬುಟ್ಟಿತ್ ಹೊಸ ವರುಷ

ಬಂದೆ ಬುಟ್ಟಿತ್ ಹೊಸ ವರುಷ।
ಈ ನಾಡ್‌ಗೆ ತರ್‌ಲಿ ಹೊಸ ಹರುಷ।
ಮರಿಯೊನೊ ಕಳ್ದಂತ ಕಸ್ಟನ ನಾವು।
ಕಳ್‌ದದ್ ನೆನ್‌ಪಿಸ್ ಬೇಡದ್ ನೀವು।

ಕಸ್ಟ ಸುಖ ಅದ್ ಶಾಶ್ವತ ಅಲ್ಲ।
ಮುಂದೆಗೆ ನೋಡಿ ಬದಲಾದೆದ್ ಎಲ್ಲ।
ನಮ್ಮ ನಡೆನುಡಿಗಳ ನಾವೆಲ್ಲ।
ತಿದ್ದ್‌ದ್ ಬೊದ್‌ಕ್ ಸರಿಮಾಡೊಮೊ ಎಲ್ಲ।

ಈ ಹೊಸ ವರುಷಂದ ಜನಕೊಳ್ಳದ್ ಆಗಲಿ।
ಜನ ಮನಸಿಗೆ ಖುಷಿ ನೆಮ್ಮದಿ ಕೊಡಲಿ।
ದೇಶಲಿ ಬಡವರ ಹಸಿವೆನ ನೀಗಲಿ।
ಬಯಸಿದ ಬಯಕೆ ಅದ್ ನಿಜ ಆಗಲಿ॥

ನವ ವರ್ಷಲಿ ನಾಡ್‌ಲಿ ಮಳೆ ಬೆಳೆಯಾಗಲಿ।
ನವ ವರ್ಷಲಿ ಜನಕೆ ಅತಿ ಖುಸಿಯಾಗಲಿ।
ನವ ವರ್ಷಲಿ ಮನ್‌ಸಿಗೆ ಚೇತನ ತರ್‌ಲಿ।
ನವ ವರ್ಷಲಿ ನಾಡ್‌ಗೆ ನವಯುಗ ಆಗಲಿ ॥ಬಂದೆ॥

ನವವರುಷಲಿ ನಿಲ್ಲಲಿ ಲಂಚದ ದಾಹ।
ನವ ವರುಷಲಿ ನಿಲ್ಲಲಿ ಅಧಿಕಾರದ ಮೋಹ।
ನವ ವರುಷಲಿ ಇಳಿಯಲಿ ಏರಿದ ಬೆಲೆಗ।
ನವ ವರುಷಲಿ ಮುಗಿಯಲಿ ಜಾತಿ ದ್ವೇಷಗ।

ನವವರುಷಲಿ ಹೆಣ್ಣಿಗೆ ಮಾನ್ಯತೆ ಸಿಗಲಿ।
ನವವರುಷಲಿ ಹೆಣ್ಣಿಗೆ ಸ್ವಾತಂತ್ರ ಸಿಗಲಿ।
ನವವರುಷಲಿ ಹೆಣ್ಣಿನ ಶೋಷಣೆ ಅಳಿಯಲಿ।
ನವವರುಷಲಿ ಹೆಣ್ಣಿಗೆ ರಕ್ಷಣೆ ಸಿಗಲಿ॥

ನವವರುಷಲಿ ಹೆಣ್ಣಿನ ಶೀಲದ ಹಗರಣ।
ನವವರುಷಲಲಿ ಮಕ್ಕಳ ಲೈಂಗಿಕ ಹಗರಣ।
ನವವರುಷಲಿ ದೇಶಲಿ ಅದ್‌ಕೊನೆಯಾಗಲಿ ।
ನವವರುಷಲಿ ನಾಡ್‌ಲಿ ಸತ್ಯನೆ ಉಳಿಯಲಿ ॥

ಅಧಿಕಾರಿಗ ಮಂತ್ರಿಗ ಜನಕೊಳ್ಳದ್ ಮಾಡಲಿ
ಭೂಮಿಕೊಳ್ಳೆ ಹೊಡಿದರ ಬುಡಲಿ ।
ಕೋಟಿಕೋಟಿ ಹಣ ನುಂಗುದುನಿಲ್ಲಲಿ ।
ಬಡವರ ಶಾಪಂದ ಅವು ದೂರಾಗಲಿ ।

* * * * * *

ಅನುಭವಧಾರೆ

ಅರೆಭಾಷೆ ಕವನ ಸಂಕಲನ

ಹೊದ್ದೆಟ್ಟಿ ಭವಾನಿಶಂಕರ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

'ANUBHAVA DHARE' a collection of poems in Arebhase language written by Hoddetti Bhavani Shankar, Bangalore, Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2017**

ಪ್ರತಿಗಳು : **500**

ಬೆಲೆ : ರೂ. 70/- Price : Rs. 70/-

ಪುಟಗಳು : viii + 90

ಸಲಹಾ ಸಮಿತಿ :
ಶ್ರೀ ಕೊಲ್ಯದ ಗಿರೀಶ್
ಶ್ರೀ ಬಾಕಿಲ ಸಿ. ವಸಂತ
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀಮತಿ ಸಂಗೀತ ರವಿರಾಜ್
ಶ್ರೀ ಕುಡೆಕಲ್ ಸಂತೋಷ್

ಪ್ರಕಾಶಕರು : ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272-223055

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592



ಶ್ರೀ ಹೊದ್ದೇಟಿ ಭವಾನಿಶಂಕರ್

ಶ್ರೀಯುತ ಹೊದ್ದೆಟ್ಟಿ ಭವಾನಿಶಂಕರ್ ಇವು ಪ್ರಸ್ತುತ ಬೆಂಗಳೂರ್‌ಲಿ ವಾಸ ಇದ್ದ್, ಅರೆಬಾಸೆನ ಹೆಸರಾಂತ ಮತ್ತೆ ಹಿರಿಯ ಕವಿಯಾಗಿಯಾಗೊಳೊ. ಇವು ತುಳು, ಕನ್ನಡ ಮತ್ತೆ ಅರೆಬಾಸೆಲಿ ಸುಮಾರ್ 300 ಕ್ಕೂ ಜಾಸ್ತಿ ಕವನ/ ಹಾಡ್‌ಗಳ್ನ ಬರ್ದೊರ್ಣಳೊ. ಇವ್‌ರ "ಮಿತ ಹಿತ" ತೇಳ್ವ ಕವನ 1968 ರ್ಲಿ ಆಕಾಶವಾಣಿ ಬೆಂಗಳೂರ್ ಕೇಂದ್ರಂದ ಪ್ರಸಾರಾಗಿ ಇನಾಮು ಕೂಡ ಬಂದುಟ್ಟು. ಇವು ಬರ್ದ "ಸಂತೃಪ್ತಿ" ಮತ್ತೆ "ಮೋಟಿಗೂಡೆನ ಮೊದುವೆ" ಕವನ ಸಂಕಲನ ಪ್ರಸಿದ್ಧಿ ಪಡ್ದೊಳೊ. ಇವು ರಚಿಸಿದ ಕವನಗ ಹಲವು ಪತ್ರಿಕೆಗಳ್ಲಿ, ಪುಸ್ತಕಗಳ್ಲಿ ಪ್ರಕಟ ಆಗುಟ್ಟು. ಅರೆಭಾಷೆನ ಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆಗೆ ಸಂಬಂದಪಟ್ಟ ಕವನಗಳ್ನೂ ರಚನೆ ಮಾಡ್ಯೊಳೊ. 1997 ನೇ ಇಸ್‌ವಿಲಿ ಗವರ್ನ್‌ಮೆಂಟ್ ಗೆಜೆಟಿಯರ್‌ನಲ್ಲಿ ಮೂರು ಬಾಸೆನ (ತ್ರಿಭಾಷಾ) ಸುರುನ ಕವಿಂತೇಳ್ವ ಹೆಗ್ಗಳಿಕೆಗೆ ಪಾತ್ರರಾಗೊಳೊ.

ಇವು "ಧ್ಯಾನ ಮತ್ತು ಯೋಗ" (ಸರಳ ಕುಂಡಲಿನೀ ಯೋಗ)ಲಿ ಬ್ರಹ್ಮಜ್ಞಾನ ಮತ್ತು ಮಾಸ್ಟರ್ ಕೋರ್ಸ್ ಪಡ್ದ್ ಸುಮಾರ್ 4000ಕ್ಕಿಂತ ಜಾಸ್ತಿ ಜನ್‌ರಿಗೆ ತರಬೇತಿ ಕೊಟ್ಟೊಳೊ. ಈಗಲೂ ಕೊಡ್ತಾಒಳೊ. ಹಂಗೇ ಇದರ ಕುರ್ತ್ 50ಕ್ಕೂ ಜಾಸ್ತಿ ಹಾಡ್‌ಗಳ್ನ ಬರ್ದೊಳೊ.

1965 ರ್‌ಂದ ಕೊಡಗು ಮತ್ತೆ ದಕ್ಷಿಣ ಕನ್ನಡ ಗೌಡ ಸಮಾಜಲಿ ಕೆಲವು ಅಧಿಕಾರ ವಹಿಸಿಕಂಡ್ ಸಮಾಜ ಸೇವೆ ಮಾಡ್ಯೊಳೊ. ಬಿ.ಇ.ಎಲ್ ಪ್ಯಾಕ್ಟರಿಯಿಂದ ನಿವೃತ್ತರಾಗಿ ಪ್ರಸ್ತುತ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಒಳೊ.

ಇವರ ವಿಳಾಸ :

ಹೆಚ್.ಬಿ. ಭವಾನಿಶಂಕರ್
115, 2ನೇ ಹಂತ, 1ನೇ 'ಎ' ಕ್ರಾಸ್
6ನೇ ಬ್ಲಾಕ್, ಬಿ.ಇ.ಎಲ್. ಲೇಔಟ್,
ವಿದ್ಯಾರಣ್ಯಪುರ, ಬೆಂಗಳೂರು
ಮೊ : 8431066066

Ptd @ Sri Krishna Printers. Mdk. Mob : 94481 35592